ಗೌರಿ ಲಂಕೇಶರ

ಲಂಕೇಶ್

ಆಗಸ್ಟ್ 1, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ




ಲಿಂಗಾಯತರಿಗೆ ಬಸವಣ್ಣ

ಬಲಿ!

ಯಡ್ಡಿ ಪಿತೂರಿ

ಶಿಕಾರಿಪುರ ಈಗ ಭಿಕಾರಿಪುರ

400 ಕೋಟಿ ಗುಳುಂ



ಕೋಲಾರ ಜೈಲಿನಲ್ಲೊಂದು ಬಾರ್

ಪೌರಕಾರ್ಮಿಕರ ಅರಣ್ಯ ರೋದನ



ಚಾಚಾನ ಚೇಷ್ಟೆಗಳು



ಸಾರಾಯಿ ನಿಷೇಧದಿಂದ ಹೋದ ದುಡ್ಡು ರಮ್ಮಿಗೆ ಬರಲ್ವಾ?

ತೆಮ್ಮದು ರೈತಪರವಾದ ಐತಿಹಾಸಿಕ ಸರ್ಕಾರ ವೆಂದು ಕಂಡಕಂಡೆಲ್ಲಾ ಹೋರ್ಡಿಂಗುಗಳನ್ನು ತೂಗುಹಾಕಿರುವ ಸಮ್ಮಿಶ್ರ ಕೋ-ಜಾ ಸರ್ಕಾರ ತನ್ನ ಅತಿದೊಡ್ಡ ಸಾಧನೆಯೆಂದು ಬೀಗುತ್ತಿರುವುದು ಸಾರಾಯಿ ನಿಷೇಧದ ಬಗ್ಗೆ. ಸಾರಾಯಿ ಮಾರಾಟದಿಂದ ಸರ್ಕಾರದ ಬೊಕ್ಕಸಕ್ಕೆ ವರ್ಷಕ್ಕೆ 1900 ಕೋಟಿಯಷ್ಟು ಆದಾಯವಿದ್ದರೂ ತಮ್ಮ ಸರ್ಕಾರ ಅದನ್ನು ತ್ಯಾಗ ಮಾಡಿ ಕನ್ನಡನಾಡಿನ ಹೆಣ್ಣು ಮಕ್ಕಳ ತಾಳಿಭಾಗ್ಯವನ್ನು ಉಳಿಸಿದೆ ಮತ್ತು ಅವರ ಆಶೀರ್ವಾದ ಈ ಸರ್ಕಾರಕ್ಕಿದೆ ಎಂದು ಬೊಗಳೆ ಬಿಡುತ್ತಾರೆ. ಹೌದು. ಸಾರಾಯಿ ನಿಷೇಧವಾಗಿದೆ. ಆದರೆ ಅದರ ಬದಲಿ ಇಂಡಿಯನ್ ಮ್ಯಾನುಫ್ಯಾಕ್ಚರ್ಡ್ ಲಿಕ್ಕರ್ ಅಂದರೆ ರಮ್, ಜಿನ್ ಇತ್ಯಾದಿಗಳು ಬಂದಿವೆ. ಮೊದಲು ಬಾಟಲ್‌ನಲ್ಲಿದ್ದ ಅವು ಈಗ ಸಾರಾಯಿಯ ತರ ಪ್ಲಾಸ್ಟಿಕ್ ಸ್ಯಾಶೆಗಳಲ್ಲೂ ಮಾರಾಟವಾಗುತ್ತಿವೆ. ಸರ್ಕಾರವೇ ಮುಂದೆ ನಿಂತು ಅವುಗಳನ್ನು ತನ್ನದೇ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಮೂಲಕ ಕರ್ನಾಟಕದ ಮೂಲೆಮೂಲೆಗಳಿಗೆ ಮಾರಾಟ ಮಾಡುವ ವ್ಯವಸ್ಥೆ ಮಾಡುತ್ತಿದೆ.

ಸರ್ಕಾರವೇ ನೀಡಿರುವ ಅಂಕಿಅಂಶದ ಪ್ರಕಾರ ಸಾರಾಯಿ ನಿಷೇಧವಾದ ನಂತರ ಈ ರಮ್, ಜಿನ್‌ಗಳ 45 ಲಕ್ಷ ಕಾರ್ಟನ್ ಬಾಕ್ಸಗಳಿಗೆ ಬೇಡಿಕೆ ಬರಬಹುದೆಂಬ ನಿರೀಕ್ಷೆಯಿತ್ತಂತೆ. ಅದೂ ಈ ವರ್ಷದ ಕೊನೆಯವರೆಗೆ! ಆದರೆ ಈಗಾಗಲೇ 41 ಕಾರ್ಟನ್ ಬಾಕ್ಸಗಳು ಮಾರಾಟವಾಗಿಬಿಟ್ಟಿದೆಯಂತೆ. ಜುಲೈ ತಿಂಗಳೊಂದರಲ್ಲೇ ಒಂದು ದಿನ 15 ಲಕ್ಷ ಕಾರ್ಟನ್ ಬಾಕ್ಸಗಳು ಮಾರಾಟವಾದವಂತೆ. ಅಂದು 27 ಕೋಟಿ ಮಾರಾಟವಾಗಿ ಆ ಒಂದೇ ದಿನ ಸರ್ಕಾರಕ್ಕೆ 10 ಕೋಟಿ ಆದಾಯ ಬಂದಿತಂತೆ. ಹೀಗಾಗಿ ಸರ್ಕಾರ ಖುಷ್. ಆದರೆ ರೈತ ಮತ್ತು ನಗರದ ಹೆಣ್ಣು ಮಕ್ಕಳು ಖುಷ್ ಆದರೆ?

ಈ ನಾಡಿನ ಪ್ರಜ್ಞಾವಂತ ಜನತೆ ಅದರಲ್ಲೂ ಹೆಣ್ಣು ಮಕ್ಕಳು ಸಾರಾಯಿಯನ್ನು ವಿರೋಧಿಸಲು ಕಾರಣ ಅದರ ಕ್ವಾಲಿಟಿ ಚೆನ್ನಾಗಿರುವುದಿಲ್ಲ ಎಂಬುದಲ್ಲ. ದುಡಿಯುವ ಗಂಡಸು ತನ್ನ ಆದಾಯದ ದೊಡ್ಡಪಾಲನ್ನು ಸಾರಾಯಿ ಕುಡಿಯಲು ಖರ್ಚು ಮಾಡುತ್ತಿದ್ದ ಎಂಬುದು. ಇದರಿಂದ ಮನೆ ಮಕ್ಕಳಿಗೆ ಹೊಟ್ಟೆಗೂ ಇಲ್ಲದಂತಾಗುತ್ತಿತ್ತು. ಇದನ್ನು ಕೇಳಿದರೆ ಕುಡಿದ ಅಮಲಿನಲ್ಲಿ ಚಚ್ಚುತ್ತಿದ್ದ. ಹೀಗಾಗಿ ಕುಟುಂಬದ ನೆಮ್ಮದಿ ಮತ್ತು ಸ್ಥಿತಿಗತಿ ಎಲ್ಲವೂ ಕೆಡುತ್ತಿತ್ತು. ಮತ್ತು ಒಮ್ಮೆ ಕುಡಿತದ ಅಮಲಿಗೆ ದಾಸನಾದ ಮೇಲೆ ಸಾಲಸೋಲ ಮಾಡಿಯಾದರೂ ಕುಡಿಯಲು ಪ್ರಾರಂಭವಾಗಿ ಮನೆಗೇ ಹೊರೆಯಾಗುತ್ತಿದ್ದ ಮತ್ತು ಬದುಕು ಮೂರಾಬಟ್ಟೆಯಾಗುತ್ತಿತ್ತು.


ಈಗ ಸಾರಾಯಿ ನಿಷೇಧವಾಗಿ ಅದರ ಬದಲು ರಮ್ಮು, ಜಿನ್ನು ಬಂದ ನಂತರ ಈ ಸ್ಥಿತಿಗತಿ ಬದಲಾಗಿದೆಯೇ? ಸರ್ಕಾರದ ಅಂಕಿಅಂಶದ ಪ್ರಕಾರ ಜನ ಸಾರಾಯಿ ಬದಲು ರಮ್ಮು, ಜಿನ್ನು ಕುಡಿಯುತ್ತಿದ್ದಾರೆ. ಅಂದರೆ ಸಾರಾಯಿ ನಿಷೇಧವಾದ ಬಳಿಕ ಕುಟುಂಬದ ಆರ್ಥಿಕತೆ ಸುಧಾರಿಸಲು ವ್ಯಯವಾಗಬೇಕಿದ್ದ ಹಣಕಾಸು ರಮ್ಮು, ಜಿನ್ನುಗಳ ಮೂಲಕ ಮತ್ತೆ ಕುಡಿತದ ಅಂಗಡಿಗೆ ಮತ್ತು ಸರ್ಕಾರಕ್ಕೆ ವಾಪಸ್ ಬರುತ್ತಿದೆ. ಇವುಗಳ ರೇಟೂ ಜಾಸ್ತಿ ಇರುವುದರಿಂದ ಇನ್ನಷ್ಟು ಬೇಗ ಕುಡುಕ ಮತ್ತು ಅವನ ಕುಟುಂಬ ಬರ್ಬಾದ್ ಆಗುತ್ತದೆ. ಇವೂ ಅಮಲಿನ ಪೇಯವೇ ಆಗಿರುವುದರಿಂದ ಕುಡುಕ ಇದಕ್ಕೂ ದಾಸನಾಗುತ್ತಾನೆ. ಕುಟುಂಬಕ್ಕೂ ಹೊರೆಯಾಗುತ್ತಾನೆ.

ಸಾರಾಯಿ ನಿಷೇಧದಿಂದ ಸರ್ಕಾರ ಕಳೆದುಕೊಂಡ ದುಡ್ಡು ರಮ್ಮಿಗೆ ಬರುತ್ತೆ, ಆದರೆ ಸಾರಾಯಿಗೆ ಹೋದ ಮಾನ ಮತ್ತು ನೆಮ್ಮದಿ ರಮ್ಮಿನಿಂದೇನೂ ಬರುವುದಿಲ್ಲ! ರಾಜಕೀಯ ಇಚ್ಛಾಶಕ್ತಿ ಇಲ್ಲದ ಸರ್ಕಾರವೊಂದು ಮಾಡುವ ಗಿಮಿಕ್ಕುಗಳು ಇನ್ನಷ್ಟು ಅನ್ಯಾಯವನ್ನೇ ಮಾಡುತ್ತವೆ ಎಂಬುದಕ್ಕೆ ಇದೊಂದು ಉದಾಹರಣೆ ಮಾತ್ರ. ■


ಹೆಚ್ಚುತ್ತಿರುವ ಭದ್ರತಾ ಸಿಬ್ಬಂದಿ, ಗೂಢಚರ್ಯೆ ಮತ್ತು ಅಭದ್ರ ಭಾರತ!?

ಚಾರ್ವಾಕ
■ ಶಿವಸುಂದರ್

ಚೆನ್ನಿ ಪತ್ರಿಕೆಯಾಗಿರುವ ವಿಜಯ ಕರ್ನಾಟಕದಲ್ಲಿ ಕಾಲಂ ಬರೆಯುವ ಪ್ರಗತಿಪರ ಸಾಹಿತಿ ಕವಿ ತಿರುಮಲೇಶ್‌ರವರು ಮೊನ್ನೆ ಮಾರ್ಕ್ಸ್‌ವಾದವು ನಿಂತ ನೀರಾಗಿದೆಯೆಂದೂ, ಈ ಹೊತ್ತಿನ ಪ್ರಜಾತಂತ್ರವು ಎಷ್ಟೇ ಕೊರತೆಯಿಂದ ಕೂಡಿದ್ದರೂ ಸರ್ವಕಾಲಿಕ ಶ್ರೇಷ್ಠವಾದದ್ದೆಂದೂ ಅಪ್ಪಣೆ ಕೊಡಿಸಿದ್ದಾರೆ. ಅದೇ ಸಂಚಿಕೆಯಲ್ಲಿ ಭಾರತದಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಶೇ.1ಕ್ಕೂ ಹೆಚ್ಚಿನ ಜನ ಗೂಢಚರ್ಯೆ ಅಥವಾ ಇತರ ಭದ್ರತಾ ಕೆಲಸಗಳಲ್ಲಿ ತೊಡಗಿಕೊಂಡಿರುತ್ತಾರೆ ಎಂದೂ ವರದಿಯಾಗಿದೆ. ಅದರಲ್ಲೂ ವಿದ್ಯಾರ್ಥಿಗಳು ದುಡ್ಡಿಗೆ ಬೇರೊಬ್ಬರ ವ್ಯಕ್ತಿಗತ ಜೀವನದ ಬಗ್ಗೆ ಗೂಢ ಚರ್ಯೆ ನಡೆಸುವ ಅಥವಾ ಬೇರೊಂದು ಕಂಪನಿಯ ಗೂಢಗಳನ್ನು ಸಂಶೋಧಿಸುವ ಅಂದರೆ ಮತ್ತೊಬ್ಬ ಸ್ಪರ್ಧಿಯ ಕತ್ತುಕೊಯ್ಯುವ ಗೂಢಚರ್ಯೆಯಲ್ಲಿ ತೊಡಗಿಕೊಳ್ಳುತ್ತಾರೆಂಬ ವರದಿ ಬಂದಿದೆ. ಹಾಗೂ ಬರಲಿರುವ ಸಂಸತ್ ಅಧಿವೇಶನದಲ್ಲಿ ಇಂಥ ಗೂಢ ಚರ್ಯೆಗೆ ಅವಕಾಶ ಮಾಡಿಕೊಡುವ ಮಸೂದೆಯೊಂದು ಅನುಮೋದನೆಗೊಂಡು ಕಾನೂನುಬದ್ಧವೂ ಆಗಲಿದೆಯಂತೆ. ಅದೇರೀತಿ ಅಮೆರಿಕದ ಸಿಐಎ ಸಹ ತನ್ನ ಹಲವಾರು ಗೂಢಚರ್ಯೆ ಸಂಬಂಧಿತ ಕೆಲಸಗಳನ್ನು ಔಟ್‌ಸೋರ್ಸ್ ಮಾಡುತ್ತದಂತೆ.



ಆಧುನಿಕ ಪ್ರಜಾತಂತ್ರಗಳು ನಿಂತಿರುವುದೇ ವೈಯಕ್ತಿಕ ಸ್ವಾತಂತ್ರದ ಮೇಲೆ ಎಂದು ಹೇಳಲಾಗುತ್ತದೆ. ಅಂದರೆ ಅಲ್ಲಿ ನಾಗರಿಕರು ಮತ್ತು ಉದ್ಯಮಿಗಳು ಕಾನೂನಿನ ಚೌಕಟ್ಟಿನಲ್ಲಿ ತಮಗೆ ಇಷ್ಟಬಂದಂತೆ ಇರುವ ಸ್ವಾತಂತ್ರ್ಯವನ್ನು ಮತ್ತು ಒಟ್ಟಾರೆ ದೇಶದ ಕಾನೂನಿನ ಚೌಕಟ್ಟಿಗೆ ಒಳಪಟ್ಟು ತಮಗಿಷ್ಟಬಂದಂತ ಆರ್ಥಿಕ ಚಟುವಟಿಕೆ ನಡೆಸಲು ಅವಕಾಶವಿರುತ್ತದೆ ಎಂದೂ ಹೇಳಲಾಗುತ್ತದೆ. ಪ್ರಜಾತಂತ್ರದ ಮೆಕ್ಕಾ ಎಂದೇ ಹೇಳಲಾಗುವ ಅಮೆರಿಕದಲ್ಲೂ ಇದನ್ನು ಎಷ್ಟರಮಟ್ಟಿಗೆ ಅನುಸರಿಸಲಾಗುತ್ತಿದೆ ಎಂಬುದು ಬೇರೆ ವಿಚಾರ. ಕಮ್ಯುನಿಸ್ಟ್ ದೇಶಗಳಲ್ಲಿ ವೈಯಕ್ತಿಕ ಸ್ವಾತಂತ್ರ್ಯವಿಲ್ಲ ಎಂದು ಅಬ್ಬರದ ಪ್ರಚಾರ ಮಾಡುವ ಈ ದೇಶಗಳಲ್ಲಿ ಅನ್ ಅಮೆರಿಕನ್ ಯೋಚನೆಗಳಿಗೆ ಮತ್ತು ಅನ್ ಅಮೆರಿಕನ್ ಚಟುವಟಿಕೆಗಳಿಗೆ ಕಿಂಚಿತ್ತೂ ಅವಕಾಶವಿಲ್ಲದಿ ರುವುದು ವಾಸ್ತವದ ಇನ್ನೊಂದು ಮುಖ. ಕಮ್ಯುನಿಸ್ಟ್ ದೇಶಗಳಲ್ಲಿ ಜನರ ಯೋಚನೆಯ ಮೇಲೂ ಪ್ರಭುತ್ವ ಪಹರೆಯನ್ನು ಹಾಕಿರುತ್ತದೆ ಮತ್ತು ಗೂಢ ಚರ್ಯೆ ನಡೆಸುತ್ತದೆ ಎಂದು ಸಕಾರಣವಾಗಿಯೇ ಆರೋಪಿಸುವ ಅಮೆರಿಕದಲ್ಲಿ ಸಹ ಅನ್ ಅಮೆರಿಕನ್ ಎಂದು ಕೈಹಿಡಿಯಷ್ಟು ಜನ ತೀರ್ಮಾನಿಸುವ ಚಿಂತನೆಗಳಿಗೆ ಅವಕಾಶವಿಲ್ಲದಂತೆ ಮಾಡಲು ಅಮೆರಿಕ ಜನರ ಮೇಲೆ ನಡೆಸುವ ಗೂಢ ಚರ್ಯೆಗೆ ಸಾಕಷ್ಟು ಖರ್ಚು ಮಾಡುತ್ತದೆ. ತನ್ನ ದೇಶದಲ್ಲಿ ಮಾತ್ರವಲ್ಲ, ಇಡೀ ವಿಶ್ವದಲ್ಲೇ ಯಾರೂ ಅನ್ ಅಮೆರಿಕನ್ ಯೋಚನೆ ಮಾಡದಂತೆ ನೋಡಿಕೊಳ್ಳಲು ಮತ್ತು ಅವರ ಬಗ್ಗೆ ಬೇಹುಗಾರಿಕೆ ನಡೆಸಲು ತನ್ನ ಬೇಹುಗಾರಿಕೆ ಸಂಸ್ಥೆ ಸಿಐಎಗೆ ಕೋಟಿಕೋಟಿ ಹಣವನ್ನು ಸುರಿಯುತ್ತದೆ. ಇರಲಿ. ಇದು ಅಮೆರಿಕ ನೇತೃತ್ವದ ಪ್ರಜಾತಂತ್ರದ ಅಸಲಿ ಮುಖ. ಭಾರತವನ್ನು ಒಳಗೊಂಡಂತೆ ತಾನೊಂದು ದೊಡ್ಡ ಪ್ರಜಾತಂತ್ರ ಎಂದು ಕೊಚ್ಚಿಕೊಳ್ಳುವ ಬಹುಪಾಲು ಪ್ರಜಾತಂತ್ರಗಳ ಹಣೆಬರಹವೂ ಅಷ್ಟೆ.



ಇದರರ್ಥ ಈ ಹಿಂದೆ ಕಮ್ಯುನಿಸ್ಟ್ ಎಂದು ಕರೆಸಿಕೊಳ್ಳುತ್ತಿದ್ದ ದೇಶಗಳಲ್ಲಿ ವೈಯಕ್ತಿಕ ಸ್ವಾತಂತ್ರ ವಿರಲಿಲ್ಲ ಎಂಬುದೂ ಸತ್ಯಕ್ಕೆ ದೂರವಾದ ಸಂಗತಿಯೇನೂ ಅಲ್ಲ. ಸ್ಟಾಲಿನ್ ಕಾಲದಲ್ಲಿ ಆದ ಹಕ್ಕುಗಳ ಉಲ್ಲಂಘನೆಯ ಅತಿರೇಕಗಳು ಎಷ್ಟು ಅತಿರೇಕದಲ್ಲಿ ಬಣ್ಣಿಸಲ್ಪಟ್ಟಿವೆಯೆಂದರೆ ಸ್ಟಾಲಿನ್ ಇಲ್ಲದಿದ್ದರೆ ಮತ್ತು ಕಮ್ಯುನಿಸ್ಟ್ ರಷ್ಯಾ ಇಲ್ಲದಿದ್ದರೆ ಇಂದು ಅಮೆರಿಕವಾದಿಗಳು ಆರಾಧಿಸುವ ಸಂಸದೀಯ ಪ್ರಜಾತಂತ್ರದ ಲವಲೇಶವೂ ಇಲ್ಲದೆ ಹಿಟ್ಲರ್‌ನ ಸರ್ವಾಧಿಕಾರ ಪ್ರಪಂಚವನ್ನು ಆಳುತ್ತಿತ್ತು ಎಂಬುದನ್ನು ಮರೆಸಿಬಿಡುತ್ತವೆ. ಅದೇನೇ ಇದ್ದರೂ ಸ್ಟಾಲಿನ್ ಕಾಲದಲ್ಲಿ ಅತಿರೇಕಗಳು ಸಂಭವಿಸಿದ್ದವು ಎಂಬುದನ್ನು ಈಗ ಮಾರ್ಕ್ಸ್‌ವಾದದ ಚಾರಿತ್ರಿಕ ಗತಿತರ್ಕವನ್ನು ಒಪ್ಪಿಕೊಳ್ಳುವವರೆಲ್ಲರೂ ಒಪ್ಪುತ್ತಾರೆ. ಅದೇರೀತಿ ಇಂಥ ಅತಿರೇಕಗಳು ಕಮ್ಯುನಿಸಮ್ಮಿನ ಹೆಸರಲ್ಲಿ ಸರ್ವಾಧಿಕಾರ ಬರದಂತೆ ತಡೆಯುವ ಚಾರಿತ್ರಿಕ ಪ್ರಯತ್ನವಾಗಿದ್ದ ಚೀನಾದ ಸಾಂಸ್ಕೃತಿಕ ಕ್ರಾಂತಿಯಲ್ಲೂ ಸಂಭವಿಸಿವೆ ಮತ್ತು ಸಾಂಸ್ಕೃತಿಕ ಕ್ರಾಂತಿ ಆ ನಿಟ್ಟಿನಲ್ಲಿ ವಿಫಲವಾಯಿತೆಂಬುದನ್ನೂ ಈಗ ಆಚರಣೆಯಲ್ಲಿರುವ ಮಾರ್ಕ್ಸ್‌ವಾದಿಗಳೆಲ್ಲರೂ ಒಪ್ಪುತ್ತಾರೆ. ಮತ್ತು ಅವೆಲ್ಲದರಿಂದ ಪಾಠ ಕಲಿಯುವ ಪ್ರಕ್ರಿಯೆಯಲ್ಲೇ ಎಲ್ಲಾ ನೈಜ ಪ್ರಜಾತಂತ್ರವಾದಿಗಳು ಇದ್ದಾರೆ. ನೇಪಾಳ ಅದಕ್ಕೆ ಒಂದು ಉದಾಹರಣೆ.

ತಿರುಮಲೇಶರಂಥ ಪ್ರಗತಿಪರರು 90ರ ದಶಕದ ಪ್ರಾರಂಭದಲ್ಲಿ ಕಮ್ಯುನಿಸ್ಟ್ ರೋಮೇನಿಯಾದಲ್ಲಿ ಹೇಗೆ ಆ ದೇಶದ ಅರ್ಧ ಭಾಗದಷ್ಟು ಜನ ಉಳಿದ ಅರ್ಧ ಭಾಗದಷ್ಟು ಜನರ ವಿರುದ್ಧ ಗೂಢಚರ್ಯೆ ನಡೆಸುತ್ತಿದ್ದರೆಂದು ಮತ್ತು ಹೇಗೆ ಭೀತಿಯೇ ಒಂದು ದೇಶದ ಪತನಕ್ಕೂ ಕಾರಣವಾಯಿತೆಂದೂ ಬರೆದಿದ್ದರು. ರೋಮೇನಿಯಾ ಬಗ್ಗೆ ಅವರು ಬರೆದಿದ್ದು ನಿಜ. ಸ್ಟಾಲಿನ್ ಕಾಲದ ಗೂಢಚರ್ಯೆಯ ಬಗ್ಗೆ ಅತಿರೇಕಗಳ ಬಗ್ಗೆ ಅತಿರಂಜಿತವಾಗಿ ಬರೆದಿದ್ದರೂ ಅಲ್ಲೂ, ಚೀನಾದಲ್ಲೂ ಅತಿರೇಕಗಳು ಸಂಭವಿಸಿರುವುದು ನಿಜ. ಆದರೆ ಅವೆಲ್ಲವನ್ನೂ ಕಾಣುವ ಕಣ್ಣು ಅಮೆರಿಕದ ಬೇಹುಗಾರಿಕೆಯ ಬಗ್ಗೆ ಏಕೆ ಕುರುಡಾಗಿರುತ್ತದೆ? ಭಾರತದಲ್ಲಿ ಹೆಚ್ಚುತ್ತಿರುವ ಗೇಟೋಡ್ ಕಮ್ಯುನಿಟಿಗಳ ಬಗ್ಗೆ ಅಂದರೆ ಉಳಿದ ಭಾರತೀಯರಿಂದ ಹೊರತಾಗಿ ಮತ್ತು ಅವರಿಂದ ರಕ್ಷಿಸಿಕೊಳ್ಳುವ ಸಲುವಾಗಿಯೇ ಹೆಚ್ಚೆಚ್ಚು ಭದ್ರತಾ ಸಿಬ್ಬಂದಿಯನ್ನು ಜಾಸ್ತಿ ಮಾಡಿಕೊಳ್ಳುತ್ತಿರುವ ಬಗ್ಗೆ ಏಕೆ ಕುರುಡಾಗಿರುತ್ತಾರೆ?

ಒಂದು ದೇಶದ ಬಹುಪಾಲು ಜನ ಉಳಿದ ಸಹವಾಸಿಗಳ ಬಗ್ಗೆ ಅಪನಂಬಿಕೆಯಿಟ್ಟುಕೊಂಡು ಅವರಿಂದ ರಕ್ಷಿಸಿಕೊಳ್ಳಲು ಬೇಹುಗಾರಿಕೆ ನಡೆಸಿದರೆ ಅಥವಾ ಭದ್ರತಾ ಸಿಬ್ಬಂದಿಯನ್ನು ಹೆಚ್ಚಿಸಿಕೊಂಡು ರಕ್ಷಿಸಿಕೊಳ್ಳುವ ವ್ಯವಸ್ಥೆ ಹೆಚ್ಚಿದರೆ ಕುಸಿಯುವುದು ಕೇವಲ ಕಮ್ಯುನಿಸ್ಟ್ ರೋಮೇನಿಯಾ ಮಾತ್ರವಲ್ಲ, ಪ್ರಜಾತಂತ್ರ ಭಾರತವೂ ಸಹ ಕುಸಿಯುತ್ತದೆ. ವರ್ಗ, ಲಿಂಗ, ಧರ್ಮ ಮತ್ತು ಜಾತಿ ಆಧಾರದಲ್ಲೂ ಸಮಾನ ನಾಗರಿಕತ್ವ ಖಾತರಿಪಡಿಸದ ದೇಶ ಉಳಿಯಲು ಸಾಧ್ಯವಾಗದು. ಯಾವುದೇ ಬ್ರಾಂಡಿನದ್ದಾದರೂ ಸರಿ. ■

No Comments

"ಬಿಜೆಪಿಗೆ ನಾನು ಅಧಿಕಾರ ಬಿಟ್ಟುಕೊಡಲು ಸಿದ್ಧ ಆದರೆ ಬಿಜೆಪಿಯಲ್ಲೇ ಶಾಸಕರು ವಿರೋಧವಿದ್ದಾರೆ. ಈ ಸಮಸ್ಯೆಯಿಂದ ಯಡಿಯೂರಪ್ಪನವರನ್ನು ರಕ್ಷಿಸಿ."
-ಎಚ್‌ಡಿಕೆ

"ರೇವಣ್ಣ ಅವರ ಪಾಲಿಗೆ ರಾಜ್ಯ ಅಂದ್ರೆ ಹೊಳೆನರಸೀಪುರ, ದೇಶ ಅಂದ್ರೆ ಹಾಸನ. ಕರ್ನಾಟಕ ರೋಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂಬುದು ಕರ್ನಾಟಕ ರೇವಣ್ಣ ಡೆವಲಪ್‌ಮೆಂಟ್ ಕಾರ್ಪೊರೇಷನ್ ಆಗಿಬಿಟ್ಟಿದೆ."
- ಮಾಧುಸ್ವಾಮಿ


"ಉಡುಗೊರೆಗಳೆಂದರೆ ಹಾವನ್ನು ಮುಟ್ಟಿ ಅದಕ್ಕೆ ಪ್ರತಿಯಾಗಿ ಅದರಿಂದ ಕಡಿಸಿಕೊಂಡಂತೆ."
-ಅಬ್ದುಲ್ ಕಲಾಂ



"ನಾನು ಜನರಿಗೆ ಸಾಕಷ್ಟು ಮಾಡಿದ್ದೇನೆ. ಆದ್ದರಿಂದ ನಿವೃತ್ತಿ ಘೋಷಣೆ ಮಾಡುತ್ತಿದ್ದೇನೆ."
-ಚನ್ನಿಗಪ್ಪ



"ಸಣ್ಣಪುಟ್ಟ ಸಮಸ್ಯೆಗಳಿಗೂ ಕೋರ್ಟು ಮೆಟ್ಟಿಲನ್ನು ಹತ್ತುವುದನ್ನು ಬಿಟ್ಟು ಕಣ್ಮುಚ್ಚಿ ಕುಳಿತಿರುವ ಜನಪ್ರತಿನಿಧಿಗಳನ್ನು ಎಬ್ಬಿಸಿ."
-ಸಿರಿಯಾಕ್ ಜೋಸೆಫ್, ಮುಖ್ಯ ನ್ಯಾಯಾಧೀಶರು



"ಪಂಚಾಯತಿ ಮತ್ತು ಗ್ರಾಮಸಭೆಗಳ ಅಧಿಕಾರವನ್ನು ಮೊಟಕುಗೊಳಿಸುವುದು ಪಂಚಾಯತ್ ರಾಜ್ ಪದ್ಧತಿಯ ಹಿಂದಿನ ಸಂವಿಧಾನಿಕ ಆಶಯಗಳಿಂದ ಹಿಂದೆ ಸರಿದಂತೆ."
-ಟಿ.ಎನ್.ಚತುರ್ವೇದಿ, ರಾಜ್ಯಪಾಲರು

ನಂಬಿದ್ರೆ ನಂಬಿ ಬಿಟ್ರೆ ಬಿಡಿ

"ನರ್ಸ್ ಜಯಲಕ್ಷ್ಮಿ ಮತ್ತೆ ಆತ್ಮಹತ್ಯೆ ಪ್ರಯತ್ನ."
-ಪತ್ರಿಕಾ ವರ...

"ಈಶ್ವರಪ್ಪ ಅತ್ಯುತ್ತಮ ಮಂತ್ರಿ."
-ಖಾಸಗಿ ಪ್ರತಿಷ್ಠಾನವೊಂದರ ಘೋಷಣೆ



"ಪುಟ್ಟಣ್ಣನವರ ನಂತರ ಅವರ ಸ್ಥಾನವನ್ನು ಸಮರ್ಥವಾಗಿ ತುಂಬಬಲ್ಲ ಸಮರ್ಥ ಹಾಗೂ ಏಕೈಕ ನಿರ್ದೇಶಕ ಟಿ.ಎನ್.ಸೀತಾರಾಂ."
-ವಿಶ್ವೇಶ್ವರ ಭಟ್

"ಕಸ್ತೂರಿ ಚಾನೆಲ್ಲು ಜೆಡಿ(ಎಸ್) ಚಾನೆಲ್ಲಾಗಿರುವುದಿಲ್ಲ..."
-ಎಚ್‌ಡಿ...

ಒಂದು ಅಪಾಯ

"ಕೈಗಾರಿಕೋದ್ಯಮಿಗಳೂ ಸಾಮಾನ್ಯ ಮನುಷ್ಯರೇ. ನಾವು ಸಾರ್ವಜನಿಕರ ಭಾಗವೇ. ಹೀಗಾಗಿ ಎಲ್ಲಾ ಸಾರ್ವಜನಿಕ ಚರ್ಚೆಗಳಲ್ಲೂ ನಾವೂ ಭಾಗವಾಗಲೇ ಬೇಕು."
-ಆರ್.ಸಿ.ಪುರೋಹಿತ್, oOY ಅಧ್ಯ...

ಪುರುಷವಿರೋಧಿ ಕರೆ

"ಗಂಡಂದಿರನ್ನು ನಂಬಬೇಡಿ. ಕಾಂಡೋಮ್ ಬಳ... ಬಿಡಬೇಡಿ."
-ಕೇಂದ್ರಮಂತ್ರಿ ರೇಣುಕಾ ಚೌಧ...

ದೇಶಭಕ್ತ ಸಮಾಜದ್ರೋಹಿಗಳು!!

"ಮುಂಬೈ ಬ್ಲಾಸ್ಟ್ ನಂತರ ಎರಡು ತರದ ಅಂಡರ್‌ವರ್ಲ್ಡ್‌ಗಳು ಹುಟ್ಟಿಕೊಂಡಿದ್ದಾರೆ. ಒಬ್ಬರು ದೇಶದ ಪರ. ಇನ್ನೊಬ್ಬರು ದೇಶ ವಿರೋಧಿ."
-ರವಿ ಬೆಳಗೆರೆ



ಅವಿವೇಕ

"ಕ್ರಿಶ್ಚಿಯನ್ ಧರ್ಮ ಕೂಡಾ ಜಾತಿ ತಾರತಮ್ಯ ಮಾಡು... ಎಂದು ಕ್ರಿಶ್ಚಿಯನ್ನರು ಒಪ್ಪಿಕೊಂಡರೆ ಕ್ರಿಶ್ಚಿಯ... ದಲಿತರಿಗೆ ಮೀಸಲಾತಿ ಕೊಡಬಹುದು."
-ಕೆ.ಜಿ. ಬಾಲಕೃಷ್ಣ... ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧೀಶ...

ವಿವೇಕ

"ಹಿಂದಿನ ಕಾಲದಲ್ಲಿ ದೇಶಕ್ಕಾಗಿ ಮತ್ತು ಸ್ವಾತಂತ್ರ್ಯಕ... ತ್ಯಾಗ ಮಾಡಿದ್ರು. ಈಗ ದೇಶಕ್ಕೆ ಸ್ವಾತಂತ್ರ್ಯ ಬಂದಿ... ಈಗ ಯಾರಿಗಾಗಿ ತ್ಯಾಗ ಮಾಡಬೇಕು? ಬೆಂಗಳೂ... ಬಂಗ್ಲೆಗಳಿಗಾಗಿ ನಾವೇಕೆ ನಮ್ಮ ಗುಡಿಸಲನ್ನು ತ್ಯಾ... ಮಾಡಬೇಕು?"
-ಜಲವಿದ್ಯುತ್ತಿಗಾಗಿ ಮುಳುಗಡೆಯಾಗುತ್ತಿರು... ಪ್ರದೇಶದ ರೈತನೊಬ್ಬನ ...

ಭಾರತದ ಹಲವು ಸಿರಿವಂತರ ಐಶ್ವರ್ಯ ಹೆಚ್ಚಾಗುತ್ತಿರುವಾಗಲೇ ಬಡವರ ಸಂಖ್ಯೆಯೂ ಹೆಚ್ಚುತ್ತಿರುವುದರಿಂದ ಈ ವಾರ ಬಡತನ ಕುರಿತ ಹೇಳಿಕೆಗಳನ್ನು ನೀಡಿದ್ದೇವೆ.


ಕುಡಿಯುವ ನೀರನ್ನೂ ವಂಚಿಸಿದ ನೆಲ್ಸನ್ ಮಂಡೇಲಾ

ನೆಲ್ಸನ್ ಮಂಡೇಲಾರವರು ವರ್ಣಬೇಧದ ವಿರುದ್ಧ ಹೋರಾಡಿದ ಅಪ್ರತಿಮ ನಾಯಕ ಎಂದು ನಾವೆಲ್ಲ ಕೊಂಡಾಡುತ್ತೇವೆ. ಆರಂಭದಲ್ಲಿ ಗಾಂಧಿ ಸಿದ್ಧಾಂತವಾದ ಅಹಿಂಸೆಯನ್ನು ಪಾಲಿಸಿದ ಮಂಡೇಲಾರವರು ಅನಂತರ ಅದರಿಂದ ದಕ್ಷಿಣ ಆಫ್ರಿಕಾದ ಬಲಿಷ್ಠ ಬಿಳಿಯರ ಸರ್ಕಾರವನ್ನು ಬಗ್ಗುಬಡಿಯಲಾಗುವುದಿಲ್ಲವೆಂದು ಸಶಸ್ತ್ರ ಹೋರಾಟಕ್ಕೆ ಇಳಿದರೂ ಭಾರತ ಸರ್ಕಾರ ಅವರಿಗೆ ಭಾರತ ರತ್ನ ಪ್ರಶಸ್ತಿ ಕೊಟ್ಟು ಗೌರವಿಸಿದೆ. ಇಪ್ಪತ್ತೇಳು ವರ್ಷಗಳಕಾಲ ಅವರು ಏಕಾಂತ ಜೈಲುವಾಸಕ್ಕೆ ಗುರಿಯಾಗಿದ್ದರೂ ತನ್ನ ಮಾನವೀಯತೆ, ಸೂಕ್ಷ್ಮತೆ, ದೃಢ ನಿಲುವನ್ನು ಕಳೆದುಕೊಳ್ಳದ ಚೇತನ ಎಂದು ಸ್ಮರಿಸುತ್ತೇವೆ.

ಆದರೆ ಇಂತಹ ಮಂಡೇಲಾರವರು ಬಿಳಿಯರ ಆಡಳಿತವನ್ನು ಒದ್ದೋಡಿಸಿ ದಕ್ಷಿಣ ಆಫ್ರಿಕಾದಲ್ಲಿ ಅಧಿಕಾರ ಹಿಡಿದಾಗ ತನ್ನ ದೇಶಕ್ಕಾಗಿ ಮಾಡಿದ್ದೇನು ಎಂಬುದರ ಬಗ್ಗೆ ಅಷ್ಟು ಗಮನವನ್ನು ಕೊಡುವುದಿಲ್ಲ. ಹಾಗೊಮ್ಮೆ ಕೊಟ್ಟರೆ ಮುತ್ಸದಿ ಆಗಿದ್ದ ಮಂಡೇಲಾ, ರಾಜಕಾರಣಿಯಾಗಿ ಸೋತಿದ್ದು ನಮ್ಮ ಅರಿವಿಗೆ ಬರುತ್ತದೆ.

ಉದಾಹರಣೆಗೆ ಮಂಡೇಲಾ ನೇತೃತ್ವದ ಸರ್ಕಾರ ಅಲ್ಲಿನ ಕುಡಿಯುವ ನೀರು ಮತ್ತು ವಿದ್ಯುತ್ ಅನ್ನು ಖಾಸಗೀಕರಣಗೊಳಿಸಿತು. ಇದರಿಂದೇನಾಗಿದೆ ಎಂದರೆ ಆಗಲೇ ಬಡತನದ ಬೇಗೆಯಲ್ಲಿ ಬೆಂದಿದ್ದ ಅಲ್ಲಿನ ಬಹುಸಂಖ್ಯಾತ ಕರಿಯರು ಇವತ್ತು ನೀರು ಮತ್ತು ವಿದ್ಯುತ್‌ಗಾಗಿ ಪರಿತಪಿಸುವಂತಾಗಿದೆ. ಏಕೆಂದರೆ ಖಾಸಗೀ ಕಂಪನಿಗಳು ಎರಡರ ದರವನ್ನೇ ಏರಿಸಿ ಇವತ್ತು ಅವೆರಡೂ ಬಡವರ ಕೈಗೆಟುಕದಂತಾಗಿವೆ. ಒಂದು ಸಮೀಕ್ಷೆಯ ಪ್ರಕಾರ ಇವತ್ತು ಬಡ ಕುಟುಂಬವೊಂದರ ತಿಂಗಳ ಆದಾಯದ ಮೂರನೇ ಒಂದು ಭಾಗ ವಿದ್ಯುತ್ ಗಾಗಿಯೇ ವೆಚ್ಚವಾದರೆ, ಅಷ್ಟೇ ಹಣವನ್ನು ಕುಡಿಯುವ ನೀರಿಗಾಗಿ ನೀಡಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಬಡವರು ಬದುಕುವುದಾದರೂ ಹೇಗೆ?

ಆದರೆ ಹೀಗೆ ಜಾಗತೀಕರಣದ ಮೋಡಿಗೆ ಒಳಗಾದವರು ಮಂಡೇಲಾ ಒಬ್ಬರೇ ಅಲ್ಲ, ಹಲವಾರು ಬಡದೇಶಗಳ ನಾಯಕರೂ ತಮ್ಮ ದೇಶದ ಮೂಲಭೂತ ಹಕ್ಕುಗಳನ್ನೇ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಬಿಕರಿ ಮಾಡಿದ್ದಾರೆ.



ಫಿಲಿಫೈನ್ಸ್‌ನಲ್ಲಿ ರಾಷ್ಟ್ರೀಕರಣಗೊಂಡಿದ್ದ ಆರೋಗ್ಯ ಸೇವೆಯನ್ನು ಖಾಸಗಿಯವರಿಗೆ ನೀಡಲಾಯಿತು. ಪರಿಣಾಮವಾಗಿ ಇವತ್ತು ಬಡವರಿಗೆಂದು ಅವ್ಯವಸ್ಥೆಯ ಸರ್ಕಾರಿ ಆಸ್ಪತ್ರೆಗಳಿದ್ದರೆ, ಹಣವಂತರಿಗೆ ದುಬಾರಿ ಖಾಸಗಿ ಆಸ್ಪತ್ರೆಗಳಿವೆ. ಈ ಮಧ್ಯೆ ಸರ್ಕಾರವು ತನ್ನ ಆಸ್ಪತ್ರೆಗಳಿಗೆ ಹಣ ಸಹಾಯವನ್ನು ಕಡಿತಗೊಳಿಸಿದ್ದರಿಂದ, ಅವುಗಳಲ್ಲಿನ ನರ್ಸ್‌ಗಳಿಗೂ ಸರಿಯಾದ ವೇತನ ನೀಡಲಾಗುತ್ತಿಲ್ಲ. ಇದರಿಂದಾಗಿ ಇವತ್ತು ಫಿಲಿಫೈನ್ಸ್‌ನಲ್ಲಿ

ಒಂದು ಲಕ್ಷ ನರ್ಸ್, ಸಾವಿರಾರು ವೈದ್ಯರು ಒಂದೋ ಖಾಸಗಿ ಆಸ್ಪತ್ರೆಗಳನ್ನು ಸೇರಿದ್ದಾರೆ ಅಥವಾ ವಿದೇಶಗಳಿಗೆ ವಲಸೆ ಹೋಗಿದ್ದಾರೆ.

ಇಂಥ ಪರಿಸ್ಥಿತಿಯಲ್ಲಿ ಬಡರೋಗಿಗಳನ್ನು ಕೇಳು ವವರೇ ಇಲ್ಲದಂತಾಗಿ ಅವರೆಲ್ಲಾ ನೊಣಗಳಂತೆ ಸಾಯು ತ್ತಿದ್ದಾರೆ. ತಮ್ಮ ಮಕ್ಕಳ ಚಿಕಿತ್ಸೆಗೆಂದು ಹಣ ಬೇಡುವ ತಂದೆತಾಯಂದಿರಿಗೆ ಅಲ್ಲಿನ ಅಧಿಕಾರಿಗಳು "ಯಾಕ್ರಿ ಇಷ್ಟೆಲ್ಲ ಕಷ್ಟ ಪಡುತ್ತೀರಿ? ನೀವೇನೇ ಮಾಡಿದರೂ ನಿಮ್ಮ ಮಗು ಸಾಯುತ್ತೆ, ಹೋಗ್ರಿ" ಎಂದು ಹೇಳಿದ ಪ್ರಕರಣಗಳೂ ನಡೆದಿವೆ.

ಇದೆಲ್ಲಕ್ಕಿಂತಲೂ ದಾರುಣವಾದದ್ದು ಬೊಲಿವಿಯಾದ ಕತೆ. ಅಲ್ಲಿನ ಸರ್ಕಾರ 1999 ರಲ್ಲಿ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಯನ್ನು ಬೆಕ್ಟೆಲ್ ಎಂಬ ಖಾಸಗಿ ಕಂಪನಿಯೊಂದಕ್ಕೆ ವಹಿಸಿಕೊಟ್ಟಿತು. ನೀರಿನ ದರವನ್ನು ಆ ಕಂಪನಿ ಎಷ್ಟರ ಮಟ್ಟಿಗೆ ಏರಿಸಿತೆಂದರೆ ಮಧ್ಯಮ ವರ್ಗದವರೂ ತಮ್ಮ ತಿಂಗಳ ಸಂಬಳದಲ್ಲಿ ಕಾಲುಭಾಗವನ್ನು ನೀರಿಗೆಂದೇ ವಿನಿಯೋಗಿಸ ಬೇಕಿತ್ತು!

ಬೆಕ್‌ಟೆಲ್ ಎಂಥ ಖದೀಮ ಕಂಪನಿ ಎಂದರೆ ಬಾವಿ, ಕೆರೆ, ನದಿಗಳಿಂದ ಜನ ನೀರು ತೆಗೆದುಕೊಳ್ಳದಂತೆ ತಡೆಯಿತಲ್ಲದೆ, ಮಳೆ ನೀರನ್ನೂ ಸಂಗ್ರಹಿಸಬಾರದು ಎಂಬ ಕಾನೂನನ್ನೇ ಸರ್ಕಾರ ಜರಗಿಸುವಂತೆ ನೋಡಿ ಕೊಂಡಿತು.

ಪ್ರಕೃತಿಯ ಕೊಡುಗೆಯನ್ನು ಜನ ಅನುಭವಿಸ ಬಾರದೆಂದರೆ ಏನರ್ಥ ಎಂದು ಜನ ರೊಚ್ಚಿಗೆದ್ದರು. ನೀರಿಲ್ಲದೆ ಪ್ರಾಣಿಗಳೂ ಬದುಕಲಾರವು, ಅಷ್ಟು ಅಗತ್ಯ ವಾದದ್ದನ್ನು ಯಾರನ್ನು ಕೇಳಿ ಖಾಸಗೀಕರಿಸಿದಿರಿ ಎಂದು ಪ್ರತಿಭಟಿಸಿದರು. ಹೀಗೆ ಸಾಹುಕಾರರು ಮತ್ತು ಬಡವರು ಜೊತೆಗೂಡಿ ಬೀದಿಗಿಳಿದಾಗ ಬೆಕ್‌ಟೆಲ್ ಕಂಪನಿ ಏನು ಮಾಡಿತು ಗೊತ್ತಾ? ಯಾವುದೇ ಕಾರಣಕ್ಕೂ ತನ್ನೊಂದಿಗಿನ ಒಪ್ಪಂದವನ್ನು ರದ್ದುಗೊಳಿಸಬಾರದು ಎಂದು ತಾಕೀತು ಮಾಡಿತು. ಆ ತಾಕೀತಿನ ಹಿಂದೆ ಅಮೆರಿಕದ ಸರ್ಕಾರ ಮತ್ತು ವಿಶ್ವಬ್ಯಾಂಕ್ ಎಂಬ ಸಂಸ್ಥೆಯ ಕರಾಳ ಹಸ್ತವೂ ಇತ್ತು.

ಅಮೆರಿಕ ಮತ್ತು ವಿಶ್ವಬ್ಯಾಂಕಿನ ಮುಂದೆ ಸೊಲ್ಲೆತ್ತ



ಕಂಡಹಾಗೆ

ಲಾಗದ ಬೊಲಿವಿಯಾದ ಸರ್ಕಾರ ತನ್ನ ಜನರನ್ನೇ ಬಗ್ಗುಬಡಿಯಲು ಮುಂದಾಯಿತು. ಕುಡಿಯುವ ನೀರಿಗಾಗಿ ಪ್ರತಿಭಟಿಸುತ್ತಿದ್ದ ಪ್ರಜೆಗಳ ವಿರುದ್ಧ ಸೈನ್ಯವನ್ನು ಕಳುಹಿಸಿ ಹಲವಾರು ಜನರ ಮಾರಣಹೋಮಕ್ಕೂ ಕಾರಣವಾಯಿತು.


ಆದರೆ ಪ್ರತಿಭಟನೆಯನ್ನು ಸರ್ಕಾರದಿಂದಾಗಲಿ, ಬೆಕ್‌ಟೆಲ್ ಕಂಪನಿಯಿಂದಾಗಲಿ ನಿಲ್ಲಿಸಲಾಗಲಿಲ್ಲ. ಬದಲಾಗಿ ಸರ್ಕಾರವೇ ಉರುಳಿ ಬಿತ್ತು. ಹೊಸ ಸರ್ಕಾರ ಅಧಿಕಾರ ವಹಿಸಿಕೊಳ್ಳುವ ಮುನ್ನ ಮುಂದೆಂದೂ ನೀರು, ಆರೋಗ್ಯ, ವಿದ್ಯುತ್ ಇತ್ಯಾದಿ ಮೂಲಭೂತ ಸೌಕರ್ಯ ಗಳನ್ನು ಖಾಸಗೀಕರಿಸಕೂಡದೆಂಬ ತಿದ್ದುಪಡಿಯನ್ನೇ ಅಲ್ಲಿನ ಸಂವಿಧಾನಕ್ಕೆ ತರಲಾಯಿತು.

ಖಾಸಗೀಕರಣವೂ ಜಾಗತೀಕರಣದ ಒಂದು ಅಂಗ. ಅಂದು ಬೊಲಿವಿಯಾದ ಸರ್ಕಾರ ಮಾಡಿದ್ದನ್ನೇ ಇಂದು ನಮ್ಮ ಸರ್ಕಾರಗಳು ಮಾಡುತ್ತಿವೆ. ಅಮೆರಿಕಾ, ವಿಶ್ವಬ್ಯಾಂಕ್ ಇತ್ಯಾದಿಗಳ ತಾಳಕ್ಕೆ ಕುಣಿಯುತ್ತಾ ನಾಡಿನ ಜನರ ಅಭಿಲಾಷೆಗಳನ್ನು ನಿರ್ಲಕ್ಷಿಸುತ್ತಿವೆ. ದಕ್ಷಿಣ ಆಫ್ರಿಕಾ, ಫಿಲಿಫೈನ್ಸ್ ಮತ್ತು ಬೊಲಿವಿಯಾದಲ್ಲಾದದ್ದೇ ಇಲ್ಲೂ ಆಗಲಿದೆ ಎಂಬುದನ್ನು ನಾವೆಲ್ಲರೂ ಆದಷ್ಟು ಬೇಗ ಅರಿತುಕೊಂಡಷ್ಟೂ ನಮಗೇ ಹಿತ....

-ಗೌರಿ ಲಂಕೇಶ್

ಭಯೋತ್ಪಾದಕರನ್ನು ಬಿಡುಗಡೆ ಮಾಡಿದ ಅಡ್ವಾನಿಯ ದೇಶಪ್ರೇಮ

ತಂದೆ ಮಾಡಿದ ತಪ್ಪಿಗೆ ಹೇಗೆ ಮಕ್ಕಳನ್ನು ದಂಡಿಸುವುದು ಅನ್ಯಾಯವೋ, ಹಾಗೆಯೇ ಮಕ್ಕಳು ಮಾಡಿದ ತಪ್ಪಿಗೆ ತಂದೆ-ತಾಯಂದಿರನ್ನು ಶಿಕ್ಷಿಸುವುದೂ ಅನ್ಯಾಯವೇ. ಈ ಸರಳ ಸತ್ಯವನ್ನು ಅರಿಯದ ನಮ್ಮ ಮೀಡಿಯಾಗಳು ಕಫೀಲ್-ಸಬೀಲ್ ಅಹಮದ್ ಸಹೋದರರ ತಂದೆ, ತಾಯಿ, ತಂಗಿಯರೂ ಭಯೋತ್ಪಾದಕರು ಎಂಬಂತೆ ಪೈಪೋಟಿ ಮೇಲೆ ಚಿತ್ರಿಸಿದವು. ಮುಸಲ್ಮಾನರೆಲ್ಲರೂ ಟೆರರಿಸ್ಟರು ಎಂಬಂತೆ ಚೀರಾಡಿದವು.



ಅದನ್ನು ನೋಡಿ ಪ್ರಧಾನಿ ಮನಮೋಹನ್ ಸಿಂಗ್‌ರವರು "ಯಾರೋ ಒಬ್ಬರು ಮಾಡಿದ ತಪ್ಪಿಗೆ ಇಡೀ ಸಮುದಾಯವನ್ನೇ ದೂಷಿಸುವುದು ತಪ್ಪು, ಭಯೋತ್ಪಾದನೆಗೆ ಧರ್ಮ, ದೇಶ ಎಂಬುದು ಇರುವುದಿಲ್ಲ, ಆ ಹುಡುಗರ ತಾಯಂದಿರ ದುಃಖ ನನ್ನ ನಿದ್ರೆ ಕೆಡಿಸಿತು" ಎಂದರು. ಇದು ಪ್ರಜ್ಞಾವಂತರ ಪ್ರತಿಕ್ರಿಯೆಯ ದನಿಯಾಗಿತ್ತು.

ಆದರೆ ಇದನ್ನು ಕೇಳುತ್ತಿದ್ದಂತೆ ಚೆಡ್ಡಿಗಳು ಹೌಹಾರಿದರು. "ಮನಮೋಹನ್ ಸಿಂಗ್‌ರವರು ಭಯೋತ್ಪಾದಕರಿಗೆ ಕುಮ್ಮಕ್ಕು ನೀಡುತ್ತಿದ್ದಾರೆ" ಎಂದು ಎಲ್.ಕೆ. ಅಡ್ವಾಣಿ ಅರಚಾಡಿದರು.

ಆದರೆ ಇದೇ ಅಡ್ವಾಣಿ ಕೇಂದ್ರ ಗೃಹಮಂತ್ರಿ ಆಗಿದ್ದಾಗ ಕಟ್ಟರ್ ಟೆರರಿಸ್ಟರನ್ನು ಬಿಡುಗಡೆ ಮಾಡಿದ್ದರಲ್ಲದೆ ಅವರನ್ನು ಕಂದಹಾರ್‌ತನಕ ಅವರ ಸಚಿವ ಸಂಪುಟದ ವಿದೇಶಾಂಗ ಮಂತ್ರಿ ಜಸವಂತ್‌ಸಿಂಗ್ ಕರೆದುಕೊಂಡು ಹೋಗಿ ಬಿಟ್ಟುಬಂದಿದ್ದರು. ಅವರಲ್ಲಿ ಒಬ್ಬ ಅನಂತರ ಜೈಶ್-ಎ-ಮೊಹಮ್ಮದ್ ಎಂಬ ಭಯೋತ್ಪಾದಕರ ತಂಡವನ್ನು ಹುಟ್ಟು ಹಾಕಿದ.

ದುಃಖದಲ್ಲಿರುವ ತಂದೆ ತಾಯಿಗೆ ಮನಮೋಹನ್ ಸಿಂಗ್ ತೋರಿಸಿದ ಮಾನವೀಯ ಅನುಕಂಪವೆಲ್ಲಿ, ಕಟ್ಟರ್ ಭಯೋತ್ಪಾದಕರಿಗೆ ಎಸ್ಕಾರ್ಟ್ ಸರ್ವಿಸ್ ನೀಡಿದ ಅಡ್ವಾಣಿಯ ಕಪಟ ದೇಶಪ್ರೇಮವೆಲ್ಲಿ, ಛೀ!

ಇರಾಕಿಗಳನ್ನು ಕೊಂದವನೂ, ಸಿಮ್‌ಕಾರ್ಡ್ ಕೊಟ್ಟವನೂ



ಹದಿನಾಲ್ಕು ದಿನಗಳ ವಿಚಾರಣೆಯ ನಂತರ ಆಸ್ಟ್ರೇಲಿಯಾದ ನ್ಯಾಯಾಲಯವು ಡಾ. ಮೊಹಮ್ಮದ್ ಹನೀಫ್‌ನನ್ನು ಬಿಡುಗಡೆ ಗೊಳಿಸಿದ್ದರೂ ಅಲ್ಲಿನ ಸರ್ಕಾರ ಯಾಕೆ ಆತನನ್ನು ಮತ್ತೆ ಬಂಧಿಸಿದೆ? ಯಾಕೆ ಆತನ ವೀಸಾವನ್ನು ರದ್ದು ಮಾಡಿದೆ? ಯಾಕೆ ಆತನಿಗೆ ಭಯೋತ್ಪಾದಕ ಎಂಬ ಹಣೆಪಟ್ಟಿ ಹಚ್ಚಿ ಏಕಾಂಗಿ ಸೆರೆವಾಸದಲ್ಲಿಟ್ಟಿದೆ?

ನ್ಯಾಯಾಲಯದ ದೃಷ್ಟಿಯಲ್ಲಿ ನಿರಪರಾಧಿಯಾದ ಹನೀಫ್ ಸರ್ಕಾರದ ಕಣ್ಣುಗಳಿಗೆ ಮಾತ್ರ ಭಯೋತ್ಪಾದಕನಂತೆ ಕಾಣಿಸುತ್ತಿರುವುದಕ್ಕೆ ಕಾರಣ ಅಲ್ಲಿನ ರಾಜಕೀಯ. ಹಾಲಿ ಪ್ರಧಾನಿ ಜಾನ್ ಹೊವರ್ಡ್ ಕಳೆದ ಬಾರಿ ಗೆದ್ದಿದ್ದೇ 'ಭಯೋ ತ್ಪಾದನೆ' ಎಂಬ ಗುಮ್ಮವನ್ನು ಮತದಾರರಿಗೆ ತೋರಿಸಿದ್ದರಿಂದ. ಅಂದು ನಾರ್ವೆ ಹಡಗೊಂದಕ್ಕೆ ತೂತು ಬಿದ್ದು ಅದು ಮುಳುಗುವ ಅಪಾಯದಲ್ಲಿದ್ದರೂ ಅದರಲ್ಲಿನ 433 ಜನಕ್ಕೆ ಆಶ್ರಯ ನೀಡಲು ಹೊವರ್ಡ್ ನಿರಾಕರಿಸಿದ್ದರು, "ಅವರಲ್ಲಿ ಭಯೋತ್ಪಾದಕರಿದ್ದರೆ ಏನು ಗತಿ?" ಎಂದು ಕೇಳಿದ್ದರು. ಈ ಪ್ರಕರಣ ನಡೆದ ಮರುತಿಂಗಳೇ ಅಮೆರಿಕದ ವರ್ಲ್ಡ್‌ಟ್ರೇಡ್ ಸೆಂಟರ್ ಮೇಲೆ ದಾಳಿ ನಡೆದು, ಹೊವರ್ಡ್ ಚುನಾವಣೆಯಲ್ಲಿ ಗೆದ್ದಿದ್ದರು.

ಈಗ ಮತ್ತೆ ಚುನಾವಣೆಗಳು ಎದುರಾಗಿವೆ. ಇನ್ನು ಹಲವೇ ತಿಂಗಳುಗಳಲ್ಲಿ ನಡೆಯುವ ಈ ಚುನಾವಣೆಗಳಲ್ಲಿ ಹೊವರ್ಡ್ ಪಕ್ಷ ಗೆಲ್ಲುವುದು ಅಷ್ಟು ಸುಲಭವಲ್ಲ ಎಂದು ಸಮೀಕ್ಷೆಗಳು ತೋರಿಸಿವೆ. ಆದ್ದರಿಂದಲೇ ಹನೀಫನ ಬಂಧನ ಕುರಿತಂತೆ ಅಲ್ಲಿನ ಪತ್ರಿಕೆಗಳು "ಇದೊಂದು ರಾಜಕೀಯ ಕುತಂತ್ರ" ಎಂದು ಸಂಪಾದಕೀಯಗಳನ್ನು ಪ್ರಕಟಿಸಿವೆ.

ಆದರೂ ಪಟ್ಟುಬಿಡದ ಹೊವರ್ಡ್‌ರವರ ಸರ್ಕಾರ "ಹನೀಫನ ನಡತೆ ಸರಿ ಇಲ್ಲ" ಎಂದು ವಾದಿಸುತ್ತಿದೆ. ಇದಕ್ಕೆ ನ್ಯಾಯಾಧೀಶ ಸ್ಪೆಂಡರ್‌ರವರು ವಿರೋಧ ವ್ಯಕ್ತಪಡಿಸಿ "ನಾನೂ ವಕೀಲನಾಗಿದ್ದಾಗ ಕಳ್ಳರು-ಕೊಲೆಗಡುಕರ ಕೇಸ್‌ಗಳನ್ನು ತೆಗೆದುಕೊಂಡಿದ್ದೆ, ಅವರೆಲ್ಲರಿಗೆ ಜೈಲು ಶಿಕ್ಷೆ ಆಗಿದೆ. ನಿಮ್ಮ ಪ್ರಕಾರ ನನ್ನ ನಡತೆಯೂ




ಸರಿ ಇಲ್ಲ ಎಂದಾಗುತ್ತದೆ" ಎಂದು ಕಿಡಿಕಾರಿದ್ದಾರೆ. ಅವರೊಂದಿಗೆ ದನಿಗೂಡಿಸಿರುವ ಆಸ್ಟ್ರೇಲಿಯಾದ ಮಾನವ ಹಕ್ಕುಗಳ ಹೋರಾಟಗಾರರು ಇರಾಕಿಗೆ ತನ್ನ ಸೈನ್ಯವನ್ನು ಕಳುಹಿಸಿದ ಹೊವರ್ಡ್‌ರವರ ಸರ್ಕಾರವೇ ಭಯೋತ್ಪಾದನೆಯಲ್ಲಿ ತೊಡಗಿದೆ ಎಂದು ಆರೋಪಿಸಿದ್ದಾರಲ್ಲದೆ, "ಹನೀಫ್ ತನ್ನ ಸಿಮ್‌ಕಾರ್ಡನ್ನು ಮಾತ್ರ ಕೊಟ್ಟ, ಹೊವರ್ಡ್ 6,00,000 ಇರಾಕಿಗಳ ಸಾವಿಗೆ ಕಾರಣನಾದ-ಯಾರು ಭಯೋತ್ಪಾದಕರು? ಎಂದು ಪ್ರತಿಭಟಿಸುತ್ತಿದ್ದಾರೆ.


ಇದೆಲ್ಲದರಿಂದ ಸ್ಪಷ್ಟವಾಗುವುದೇನೆಂದರೆ ಎಲ್ಲಾ ದೇಶದ ರಾಜಕಾರಣಿಗಳು ತಮ್ಮ ಲಾಭಕ್ಕೆ ಎಲ್ಲಾ ರೀತಿಯ ಕುತಂತ್ರಗಳಲ್ಲಿ ತೊಡಗುತ್ತಾರೆ ಎಂಬುದು. ಇಲ್ಲಿ ಅಫಜಲ್ ಗುರು ಮರಣ ದಂಡನೆಗೆ ಗುರಿಯಾಗಿದ್ದರೆ, ಅಲ್ಲಿ ಹನೀಫ್ ಏಕಾಂಗಿ ಸೆರೆ ವಾಸದಲ್ಲಿ ಇದ್ದಾನೆ. ವ್ಯತ್ಯಾಸ ಏನು? ■

ಹಿಂಸೆಯ ಕಠೋರ ರೂಪವೇ ಬಡತನ- ಮಹಾತ್ಮ ಗಾಂಧಿ

ಧಾರವಾಡ ಕರ್ನಾಟಕದಲ್ಲೂ ನಂದಿಗ್ರಾಮಗಳ ಉದಯ



ಪಶ್ಚಿಮ ಬಂಗಾಳದ ನಂದಿಗ್ರಾಮದಲ್ಲಿ ತಮ್ಮ ಭೂಮಿಯನ್ನು ಕೊಡುವುದಿಲ್ಲ ಎಂದು ಪಟ್ಟು ಹಿಡಿದು ಹೋರಾಡಿದ ರೈತರ ಮೇಲೆ ಪೊಲೀಸರು ಗುಂಡು ಹಾರಿಸಿ 12 ರೈತರನ್ನು ಕೊಂದದ್ದು ಇನ್ನೂ ಹಸಿಹಸಿ ಇರುವಾಗಲೇ ಕರ್ನಾಟಕದ ಧಾರವಾಡದಲ್ಲೂ ಅಂತಹುದೇ ಘಟನೆಗಳು ಸಂಭವಿಸುವ ಎಲ್ಲಾ ಸೂಚನೆಗಳೂ ಕಾಣುತ್ತಿವೆ. ಧಾರವಾಡದ ಒಂದೊಂದು ಹಳ್ಳಿಗಳೂ ನಂದಿಗ್ರಾಮಗಳಾಗಿ ಮಾರ್ಪಡುವುದಕ್ಕೆ ಸಜ್ಜಾಗಿ ನಿಂತಂತಿವೆ.




ಹುಬ್ಬಳ್ಳಿ-ಧಾರವಾಡ ಪ್ರದೇಶದ ರೈತರು ಈಗಾಗಲೇ ತಮ್ಮ 3500 ಎಕರೆ ಭೂಮಿಯನ್ನು ಕಳೆದುಕೊಂಡಿದ್ದಾರೆ. ಹತ್ತು ವರ್ಷಗಳ ಹಿಂದೆಯೇ ಧಾರವಾಡದ ಹೊರವಲಯದಲ್ಲಿರುವ ಬೇಲೂರು ಕೈಗಾರಿಕಾ ಪ್ರದೇಶದಲ್ಲಿ ರೈತರ 600 ಎಕರೆ ಜಮೀನನ್ನು ನಮ್ಮ ಆಳುವ ಸರ್ಕಾರಗಳು ಕೇವಲ 12,000 ರೂ.ಗಳಿಗೆ ಟಾಟಾ ಕಂಪೆನಿಗೆ ಮಾರಿದ್ದವು. 1984-85ರಲ್ಲಿಯೇ ಎಸ್.ಆರ್.ಬೊಮ್ಮಾಯಿ ರಾಜ್ಯದ ಕೈಗಾರಿಕಾ ಮಂತ್ರಿಯಾಗಿದ್ದಾಗ ಟಾಟಾದವರಿಗೆ ಕೆಂಪು ಕಂಬಳಿ ಹಾಸಿ ಸ್ವಾಗತಿಸಿ ಈ ಘನಂಧಾರಿ ಕೆಲಸ ಮಾಡಿದ್ದರು. ಕಾರು ತಯಾರಿಸುತ್ತೇವೆ, ಬಸ್ಸು ತಯಾರಿಸುತ್ತೇವೆ, ಸ್ಥಳೀಯರಿಗೆ ಉದ್ಯೋಗ ಸಿಗುತ್ತೆ, ಕರ್ನಾಟಕ ಅಭಿವೃದ್ಧಿಯಾಗುತ್ತೆ ಎಂದೆಲ್ಲಾ ಟಾಟಾ ಊದಿದ ಪುಂಗಿಗೆ ನಮ್ಮ ಮಾನ್ಯ ಸಚಿವರು ತಲೆ ಅಲ್ಲಾಡಿಸುತ್ತಾ ರೈತರ ಜಮೀನನ್ನು ಬಿಡಿಗಾಸಿಗೆ ದಯಪಾಲಿಸಿದ್ದರು.

ಅದು ಸಾಲದೆಂಬಂತೆ ಈಗ ಮತ್ತೆ ಅದೇ ಟಾಟಾ ಕಂಪೆನಿ ಸಣ್ಣ ಕಾರು, ಲಘುವಾಹನ ತಯಾರಿಕೆಗೆ ಅಂತ 300 ಎಕರೆ ಜಮೀನನ್ನು ಕೇಳಿದರೆ ಮಣ್ಣಿನ ಮೊಮ್ಮಗನ ನಾಯಕತ್ವದಲ್ಲಿ ಆಡಳಿತ ನಡೆಸುತ್ತಿರುವ ನಮ್ಮ ಕೋ-ಜಾ ಸರ್ಕಾರ ಹಿಂದು ಮುಂದು ನೋಡದೆ ಮಂಜೂರು ಮಾಡಿಬಿಟ್ಟಿದೆ. ಅಷ್ಟರಮಟ್ಟಿಗೆ ಟಾಟಾ ಕಂಪೆನಿಯ ಮೇಲೆ ಪ್ರೀತಿ ಇದೆ ಸರ್ಕಾರಕ್ಕೆ. ಈ ಬಾರಿ ಇಲ್ಲಿ 2734 ಕೋಟಿ ರೂ.ಗಳಷ್ಟು ಬಂಡವಾಳ ಹೂಡುತ್ತೇವೆ, 2,26,150 ವಾಹನಗಳನ್ನು ತಯಾರಿಸುತ್ತೇವೆ, ಇದೇ ಪ್ರದೇಶದ 36,675 ಜನರಿಗೆ ಉದ್ಯೋಗ ಸಿಗುತ್ತದೆ ಎಂಬ ತಮ್ಮ ಹಳೆಯ ಪುಂಗಿಯನ್ನು ಹೊಸ ಶೈಲಿಯಲ್ಲಿ ಊದಿದಕ್ಕೆ ಕೋ-ಜಾ ಸರ್ಕಾರ ಸಂಪೂರ್ಣವಾಗಿ ತಲೆಯಲ್ಲಾಡಿಸಿ ರೈತರಿಂದ ಭೂಮಿಯನ್ನು ಕಿತ್ತುಕೊಂಡು ಟಾಟಾಗೆ ಧಾರೆ ಎರೆದಿದೆ. ಆದರೆ, ಈ ಕುರಿತು ಬಸವರಾಜ್ ಬೊಮ್ಮಾಯಿ ತಮ್ಮಪ್ಪ ಮಾಡಿದ ಘನಂಧಾರಿ ಕೆಲಸವನ್ನು ಮರೆತು ಸದನದಲ್ಲಿ ಪ್ರಶ್ನೆ ಎತ್ತಿದರು. ಇದಕ್ಕೆ ಉತ್ತರಿಸಿದ ಭಾರಿ ಕೈಗಾರಿಕಾ ಸಚಿವ ಕಟ್ಟಾ ಸುಬ್ರಮಣ್ಯ ನಾಯ್ಡು 2044 ಕೋಟಿ ರೂ.ಗಳನ್ನು 2009 -2011ರ ಅವಧಿಯಲ್ಲಿ ಹೂಡಲಾಗುತ್ತದೆ, 2.26 ಲಕ್ಷ ವಾಹನಗಳನ್ನು ಉತ್ಪಾದಿಸಲಾಗುತ್ತದೆ ಹಾಗೂ ಇದರಿಂದ 10,400 ಜನರಿಗೆ ಉದ್ಯೋಗ ಸಿಗುತ್ತೆ ಎಂದು ಇನ್ನೊಂದು ಪುಂಗಿಯನ್ನು ಡಿಫರೆಂಟ್ ಆಗಿ ಊದಿದ್ದಕ್ಕೆ ಸದನವೂ ತಲೆ ಅಲ್ಲಾಡಿಸಿತು. ಈ ವಿಚಾರದಲ್ಲಿ ಟಾಟಾ ಸರಿಯೋ ಅಥವಾ ಕಟ್ಟಾ ಸರಿಯೋ ಅನ್ನೋದು ಬದಿಗಿರಲಿ.

ಟಾಟಾನಿಗೆ ಸೇವೆ ಮಾಡೋದಕ್ಕೆ ಕಟ್ಟಾ ಮಾತ್ರ ಟೊಂಕ ಕಟ್ಟಿದ್ದು ಮಾತ್ರ ಸತ್ಯ. ಏಕೆಂದರೆ ಈಗಾಗಲೇ ಮೊದಲನೆಯದಾಗಿ, ಟಾಟಾಗೆ ಭೂಮಿಯನ್ನು ಮಂಜೂರು ಮಾಡಿಯಾಗಿದೆ, ಎರಡನೆಯದಾಗಿ ಮೆದು ಸಾಲ ನೀಡುವುದಕ್ಕೆ ಮತ್ತು 18 ವರ್ಷಗಳ ಕಾಲ ಮೌಲ್ಯವರ್ಧಿತ ತೆರಿಗೆಗೆ ವಿನಾಯಿತಿ ಕೊಡಲು ತೀರ್ಮಾನಿಸಿಯಾಗಿದೆ.

ರತನ್ ಟಾಟಾನ ಕಾರು ತಯಾರಿಕಾ ಫ್ಯಾಕ್ಟರಿ ಪಶ್ಚಿಮ ಬಂಗಾಳದಲ್ಲಿ ಓಡುವುದು ಗ್ಯಾರಂಟಿ ಇಲ್ಲ. ಏಕೆಂದರೆ, ಅಲ್ಲಿಯ ರೈತರು ದೊಡ್ಡ ದೊಡ್ಡ ಪ್ರತಿಭಟನೆ ಮಾಡಿ ಅವನನ್ನು ಅಲ್ಲಿಂದ ಓಡಿಸುತ್ತಿದ್ದಾರೆ. ಹೀಗಾಗಿ ಆತ ನೇರವಾಗಿ ಕರ್ನಾಟಕಕ್ಕೆ ರಿವರ್ಸ್ ಗೇರು ಹಾಕಿದ್ದಾನೆ. ಈಗಾಗಲೇ ಬೊಮ್ಮಾಯಿ ದಯಪಾಲಿಸಿದ 600 ಎಕರೆ ಮತ್ತು ಕಟ್ಟಾ ದಯಪಾಲಿಸಿದ 300 ಎಕರೆ ಒಟ್ಟು 900 ಎಕರೆ ರೈತರ ಜಮೀನನ್ನು ಲ್ಯಾಂಡ್‌ಲಾಕ್ ಮಾಡಿ ಮುಂದೆ ಅದೇ ಲ್ಯಾಂಡನ್ನು ಬ್ಯಾಂಕ್ ಮಾಡಿಕೊಳ್ಳಲು ಸಂಚು ನಡೆಸಿದ್ದಾನೆ.

ವಿಮಾನ ನಿಲ್ದಾಣಕ್ಕೂ ಭೂಮಿ ಬೇಕು!



ರೈತರ ಸಾಗುವಳಿ ಭೂಮಿಗೆ ಹೊಂಚುಹಾಕಿ ಕುಳಿತಿರುವ ಯೋಜನೆಗಳಿಗೇನೂ ಬರವಿಲ್ಲ. ಅದರಲ್ಲೂ ಹುಬ್ಬಳ್ಳಿ- ಧಾರವಾಡದ ರೈತರಿಗೆ ಒಂದೆಡೆ ಟಾಟಾ ಒಬ್ಬ ಶನಿಯಂತೆ ಗಂಟು ಬಿದ್ದಿದ್ದರೆ ಇನ್ನೊಂದೆಡೆ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸುವ ಯೋಜನೆ ಗಂಟು ಬಿದ್ದಿದೆ.

ಕೆಲವು ವರ್ಷಗಳ ಹಿಂದೆ ಹುಬ್ಬಳ್ಳಿಯಿಂದ ಬೆಂಗಳೂರಿಗೆ 32 ಸೀಟುಗಳ ಒಂದೇ ಒಂದು ವಿಮಾನ ಸಂಚರಿಸುತ್ತಿತ್ತು, ಈಗ 72 ಆಸನಗಳ ನಾಲ್ಕು ವಿಮಾನಗಳು ಇಲ್ಲಿಂದ ಬೆಂಗಳೂರಿಗೆ ಮತ್ತು ಮುಂಬಯಿಗೆ ಸಂಚರಿಸುತ್ತಿವೆ. ವಿಮಾನ ಪ್ರಯಾಣಿಕರ ಸಂಖ್ಯೆ ಜಾಸ್ತಿಯಾಗಿದ್ದರಿಂದ ಪ್ರಸ್ತುತ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸಬೇಕು ಎಂಬ ಯೋಜನೆ ಸಿದ್ಧವಾಗಿದೆ. ಈಗಿರುವ 5500 ಅಡಿಗಳಷ್ಟು ಉದ್ದದ ರನ್‌ವೆಯನ್ನು 10,500 ಅಡಿಗಳಿಗೆ ಹೆಚ್ಚಿಸಬೇಕು, ವಿಮಾನಗಳಿಗೆ ಪಾರ್ಕಿಂಗ್ ಸೌಲಭ್ಯ, ಟ್ಯಾಕ್ಸಿಗಳಿಗೆ, ಪ್ರಯಾಣಿಕರ ವಾಹನಗಳಿಗೆ ಪಾರ್ಕಿಂಗ್ ಸೌಲಭ್ಯ, ಏರ್ ಟ್ರಾಫಿಕ್ ಕಂಟ್ರೋಲರ್ ರೂಮ್, ಟರ್ಮಿನಲ್ ಕಟ್ಟಡದ ವಿಸ್ತರಣೆ – ಹೀಗೆ ಮುಂತಾದವುಗಳೆಲ್ಲಾ ಈ ಯೋಜನೆಯಲ್ಲಿವೆ. ಇದಕ್ಕಾಗಿ 687 ಎಕರೆ ಭೂಮಿ ಬೇಕಾಗುತ್ತದೆ. ಒಟ್ಟಿನಲ್ಲಿ, ಈ ಯೋಜನೆಯ ಅನುಷ್ಠಾನ ಎಂದರೆ ಅದರರ್ಥ ರೈತರು ತಮ್ಮ ತುಂಡು ಸಾಗುವಳಿ ಭೂಮಿಯನ್ನು ಕಳೆದುಕೊಂಡು ಬೀದಿ ಪಾಲಾಗುವುದು ಎಂದೇ ಅರ್ಥ.

1972ರಲ್ಲಿ ಇದೇ ವಿಮಾನ ನಿಲ್ದಾಣದ ನಿರ್ಮಾಣಕ್ಕಾಗಿ ರೈತರು 390 ಎಕರೆ ಭೂಮಿಯನ್ನು ಕಳೆದುಕೊಂಡಿದ್ದರು. ನಮ್ಮ ಸ್ವತಂತ್ರ ಭಾರತದ ದುರಂತ ನೋಡಿ. ಕೆಲವು ರೈತರಿಗೆ ಇದುವರೆಗೂ ಸರಿಯಾದ ಪರಿಹಾರವೇ ದೊರೆತಿಲ್ಲ. ಹೋಗಲಿ, ರೈತರಿಂದ ಪಡೆದ ಅಷ್ಟೂ ಜಮೀನನ್ನು ಸದುಪಯೋಗಪಡಿಸಿಕೊಳ್ಳಲಾಯಿತೆ? ಇಲ್ಲ. ಕೇವಲ 190 ಎಕರೆಯನ್ನು ಬಳಸಿಕೊಂಡು ಉಳಿದ 200 ಎಕರೆಯನ್ನು ಹಾಗೆಯೇ ಪಾಳು ಬಿಡಲಾಗಿದೆ. ಅತ್ತ ರೈತರಿಗೂ ಇಲ್ಲ, ಇತ್ತ ಸೋಕಾಲ್ಡ್ ಅಭಿವೃದ್ಧಿಯೂ ಇಲ್ಲ. ಈಗ ಗಾಯದ ಮೇಲೆ ಬರೆ ಎಂಬಂತೆ, ಗೋಕುಲ ತಾರಿಹಾಳ, ಗಾಮನಕಟ್ಟೆ, ಉಣಕಲ್ ಮುಂತಾದ ಹಳ್ಳಿಗಳ ರೈತರು ಹಾಗೂ ಪ್ರಸ್ತುತ ರನ್‌ವೇ ಪಕ್ಕದಲ್ಲಿಯೇ ಇರುವ ಕುಮಾರಪಾರ್ಕ್, ಸರಸ್ವತೀಪುರ, ಮಂದಾರ ಪಾರ್ಕ್, ರೇಣುಕಾ ನಗರ, ರಾಧಾಕೃಷ್ಣ ನಗರಗಳು ವಿಮಾನ ನಿಲ್ದಾಣ ಅಭಿವೃದ್ಧಿಯ ಯೋಜನೆಗೆ ಬಲಿಯಾಗಲಿವೆ.

ಪರಿಹಾರ-ಉದ್ಯೋಗ ಎಂಬ ಬಿಸಿಲುಕುದುರೆ

ಇನ್ನು ಭೂಮಿ ಕಳೆದುಕೊಂಡ ರೈತರಿಗೆ ಟಾಟಾನ ಉದ್ಯಮದಲ್ಲಿ ಕೆಲಸ ಕೊಡುತ್ತಾರೆಯೇ? ಪರಿಹಾರ


ಬಿಡಿ ಚಿತ್ರಗಳು

● ಪಾರ್ವತೀಶ ●

ಬಿದರಿ ಧಮಕಿ

ಶಂಕರ ಬಿದರಿ ಸಿಟ್ಟಿಗೆದ್ದಿದ್ದಾರೆ.

ಪತ್ರಕರ್ತರು ನಕ್ಸಲೀಯರ ವಿಚಾರ ಬಂದಾಗ ಮುತ್ಸದ್ದಿತನದಿಂದ ಬರೆಯಬೇಕು ಎಂತಲೂ ಚಿಕ್ಕಮಗಳೂರಿನ ಪತ್ರಿಕಾಗೋಷ್ಠಿಯಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಈ ಮುತ್ಸದ್ದಿತನ ಅರ್ಥಾತ್ diplomacy ಎಂಬುದು ಎಲ್ಲಾ ರಂಗಗಳಲ್ಲೂ ಇರುವಂತದ್ದೆ. ಆದರೆ ಪೊಲೀಸ್ ಅಧಿಕಾರಿಯೊಬ್ಬ ಅದರಲ್ಲೂ ಜನರಲ್ಲಿ ಭೀತಿ ಹುಟ್ಟಿಸುವುದರಲ್ಲಿ, ದೌರ್ಜನ್ಯ ನಡೆಸುವುದರಲ್ಲಿ ಅಪಾರ ಅನುಭವಿಯಾಗಿರುವ ಉನ್ನತ ಪೊಲೀಸ್ ಅಧಿಕಾರಿಯೊಬ್ಬರು ಇಂಥ ಮುತ್ಸದ್ದಿತನದ ಬಗ್ಗೆ ಮಾತನಾಡಿದರೆ ಅದು ಬೇರೆಯೇ ಅರ್ಥ ಹೊರಡಿಸುತ್ತದೆ.



'ಸುಮ್ಮನೆ ಪೊಲೀಸರು ಡಿಕ್ಟೇಟ್ ಮಾಡಿದಂತೆ ಬರೆದರೆ ಸರಿ. ತನಿಖೆ, ಸತ್ಯಾಂಶ ಅಂತೆಲ್ಲಾ ತಲೆಹರಟೆ ಮಾಡಿದರೆ ಹುಷಾರ್....' ಎಂದು ಪತ್ರಕರ್ತರಿಗೆ ಹಾಕಿರುವ ನೇರ ಬೆದರಿಕೆ ಇದು. ಇದೇ ಬಿದರಿ ಮೆಣಸಿನಹಾಡ್ಯದಲ್ಲಿ ಪೊಲೀಸರು ಗಿರಿಜನರನ್ನು ಕೊಂದ ಬಗ್ಗೆ ನ್ಯಾಯಾಂಗ ತನಿಖೆ ಮಾಡಿಸುವುದಾಗಿ ಹೇಳಿ 'ಪ್ರಕರಣಕ್ಕೆ ಸಂಬಂಧಿಸಿರದ ಹೊರಗಿನವರು ಇದರಲ್ಲಿ ಮಧ್ಯಪ್ರವೇಶ ಮಾಡುವಂತಿಲ್ಲ, ಬೇಕಿದ್ದರೆ ಪ್ರತ್ಯಕ್ಷದರ್ಶಿಗಳು ಒಂದು ಸಾಕ್ಷಿ ಹೇಳಬಹುದು' ಎಂದಿದ್ದಾರೆ.

ಇದೊಂದು ಕ್ರೂರ ಜೋಕ್.

ಯಾಕೆಂದರೆ ಆ ಹತ್ಯಾಕಾಂಡದಲ್ಲಿ ಯಾರೂ ಬದುಕುಳಿದಿಲ್ಲ ಮತ್ತು ಪೊಲೀಸರು ಸಾಕ್ಷಿಯೊಬ್ಬನನ್ನು ಎದುರಿಗಿಟ್ಟುಕೊಂಡು ಹತ್ಯೆ ನಡೆಸುವಷ್ಟು ದಡ್ಡರೂ ಅಲ್ಲ ಎಂಬುದು ನಮ್ಮೆಲ್ಲರಿಗಿಂತ ಬಿದರಿಗೇ ಚೆನ್ನಾಗಿ ಗೊತ್ತಿದೆ.

ಇಂಥ ಸನ್ನಿವೇಶಗಳಲ್ಲಿ ಬಿದರಿಯಂತವರಿಂದ 'ಮುತ್ಸದ್ದಿ ಪತ್ರಕರ್ತ' ಎನಿಸಿಕೊಳ್ಳುವ ಬದಲಾಗಿ ಸತ್ಯಕ್ಕೆ ಅಪಚಾರ ಮಾಡದಿರುವುದೇ ಉತ್ತಮ ಅಲ್ಲವೆ?

ಪೆದ್ದು ಪತ್ರಕರ್ತ ರಾಕೇಶ್ ಪ್ರಕಾಶ್

Stupid ಅನ್ನಿಸಿಕೊಳ್ಳುವಂತೆ ವರ್ತಿಸುವ ಜನ ನಮ್ಮಲ್ಲಿ ಬೇಕಾದಷ್ಟಿದ್ದಾರೆ.

ಇಂಗ್ಲೆಂಡಿನ ಗ್ಲಾಸ್ಗೋ ಏರ್‌ಪೋರ್ಟ್‌ನಲ್ಲಿ ಬೆಂಕಿ ಹತ್ತಿಸುವ ವಿಧ್ವಂಸಕ ಘಟನೆ ನಡೆದಾಗ ಬೆಂಗಳೂರಿನ ಕೆಲವು ಪತ್ರಕರ್ತರು ತಮ್ಮ ಕುಂಡೆಗೇ ಬೆಂಕಿ ಬಿತ್ತೇನೊ ಅನ್ನುವಂತೆ ಗಾಬರಿ ಬಿದ್ದು ರಾಶಿರಾಶಿ ಭಯಾನಕ ತನಿಖಾ ವರದಿಗಳನ್ನು ಬರೆದಿದ್ದರು. ಆದರೆ ಅವೇ ಪತ್ರಿಕೆಗಳು ಈಗ ಆಸ್ಟ್ರೇಲಿಯಾ ಪೊಲೀಸರು ಡಾ. ಹನೀಫ್ ಮೇಲೆ ಹಾಕಿರುವ ಕೇಸು ಸುಳ್ಳಿನ ಕಂತೆ ಎಂದು ಬರೆಯಬೇಕಾದ ಅನಿವಾರ್ಯತೆಗೆ ಸಿಕ್ಕಿದ್ದಾರೆ. ಅವತ್ತು ಚೆರೋಕಿ ಜೀಪನ್ನು ಏರ್‌ಪೋರ್ಟ್‌ಗೆ ನುಗ್ಗಿಸಿದ 'ಭಯೋತ್ಪಾದಕ' ಎಂದು ಕಫೀಲ್‌ನನ್ನು ಬಿಂಬಿಸಲಾಯಿತು. ಬಹುಶಃ ಅದು ಸರಿಯಾದದ್ದೇ. ಆದರೆ ಅದೇ ನೆಪ ಇಟ್ಟುಕೊಂಡು ಬೆಂಗಳೂರು, ದಾವಣಗೆರೆ, ಬೇಲೂರುಗಳಲ್ಲಿ ಅವರೊಂದಿಗೆ ಓದಿದವರು, ವಾಸವಿದ್ದವರು, ಉಂಡಿದ್ದವರನ್ನೆಲ್ಲಾ ಟೆರರಿಸ್ಟ್ ಲಿಂಕ್‌ಗಳಿದ್ದವರೆಂಬಂತೆ ಬಿಂಬಿಸಿ ಚಟ ತೀರಿಸಿಕೊಂಡ ಪತ್ರಕರ್ತರು ಮಾಡಿದ ಭಯೋತ್ಪಾದನೆಗೆ ಪರಿಹಾರ ಏನು?

ಅದರಲ್ಲೂ ಟೈಮ್ಸ್ ಆಫ್ ಇಂಡಿಯಾದ ಎಳಸು ಪತ್ರಕರ್ತ ರಾಕೇಶ್ ಪ್ರಕಾಶ್ ಎಂಥ ಒಂದು ಹುಂಬ ತನಿಖಾ ವರದಿ ಬರೆದಿದ್ದ ಗೊತ್ತೆ?

ಬೆಂಗಳೂರಿನ ಇಬ್ಬರು ಮತ್ತು ತೆಹಲ್ಕಾದ ಚಿಣ್ಣ ವರದಿಗಾರಿಬ್ಬರು ಕಫೀಲ್, ಸಬೀಲ್‌ರ ತಂದೆತಾಯಿ ಭೇಟಿಗೆ ಅವಕಾಶ ಮಾಡಿಕೊಂಡು ಒಂದು ವರದಿ ಬರೆದರೆ ಈ ಎಡವಟ್ಟ ರಾಕೇಶ ಜೇಹಾದಿಗಳೊಂದಿಗೆ ನಕ್ಸಲ್ ಸಿಂಪಥೈಸರ್‌ಗಳ ಭೇಟಿ' ಅಂತಾ ಹೆಡ್ಡಿಂಗ್ ಹಾಕಿ ಒಂದು ವರದಿ ಕೆತ್ತಿಬಿಟ್ಟ. ರಾಜ್ಯ ಗೂಢಚಾರ್ಯ ಇಲಾಖೆ ಈ ಬಗ್ಗೆ ಬಹಳ ಕಳವಳ ಪಟ್ಟಿದೆಯೆಂತಲೂ ಸೇರಿಸಿ ಕೃತಾರ್ಥನಾಗಿದ್ದ.

ಇವನಂಥ ಅವಿವೇಕಿಗಳನ್ನು ಅವರು ಮನೆಯೊಳಗೆ ಸೇರಿಸದೆ ಓಡಿಸಿದ್ದೇ ಅವನ ಈ ಸಣ್ಣತನಕ್ಕೆ ಕಾರಣವಾಗಿತ್ತು.

ಇಂಗ್ಲಿಷ್‌ನ ಗಂಧಗಾಳಿ ಗೊತ್ತಿರದ ಮುಖ್ಯಮಂತ್ರಿ ಕುಮಾರಸ್ವಾಮಿಯನ್ನೇ ಕರೆಸಿ ಒಂದು ಸಂಚಿಕೆಗೆ ಗೌರವ ಸಂಪಾದಕರಾಗಿಸಿದ್ದಾಗಲೇ ಟೈಮ್ಸ್ ಆಫ್ ಇಂಡಿಯಾದವರು ಕರ್ನಾಟಕ ರಾಜ್ಯದ ಮೊದಲ ದರ್ಜೆ ಅವಿವೇಕಿಗಳೆಂದು ಗೊತ್ತಾಗಿತ್ತು. ಆದರೆ ಅದರಲ್ಲೂ ಒಂದು ಡೀಲ್ ನಡೆದಿರುವ ಸಾಧ್ಯತೆ ಇದೆ.

ಕುಮಾರಸ್ವಾಮಿಗಳ ಪುಂಡ ಪುತ್ರ ನಿಖಿಲ್ ಗೌಡ ಆವಾಗ ತಾನೆ ನಡುರಾತ್ರಿ ಹೋಟೆಲ್ ಒಂದಕ್ಕೆ ನುಗ್ಗಿ



ದಾಂಧಲೆ ನಡೆಸಿದ್ದ ಘಟನೆ ಆಗಿತ್ತು, ನಂತರ ಕುಮಾರಸ್ವಾಮಿ ಅಂಡ್ ನಿಖಿಲ್ ಗೌಡ ಇಬ್ಬರನ್ನು ಟೈಮ್ಸ್ ಕಚೇರಿಗೆ ಕರೆಸಿ ಹೀಗೆ ಸನ್ಮಾನಿಸಲಾಗಿತ್ತು. ಇದರಲ್ಲಿ ಯಾವನು ಎಷ್ಟು ಕಾಸು ಜೇಬಿಗಿಳಿಸಿರಬಹುದು ಎಂಬುದು ನಿಮ್ಮ ಊಹೆಗೆ ಬಿಟ್ಟ ವಿಚಾರ.

ಕೊಡುತ್ತಾರೆಯೆ? ಕೊಡುತ್ತೇವೆ ಅಂತ ಟಾಟಾನೂ ಹೇಳ್ತಾನೆ, ಕಟ್ಟಾನೂ ಹೇಳ್ತಾನೆ, ಸರ್ಕಾರವೂ ಹೇಳುತ್ತದೆ. ಆದರೆ, ಈವರೆಗಿನ ಇತಿಹಾಸವನ್ನು ನೋಡಿದರೆ ಅದೆಲ್ಲ ಕೇವಲ ಹುಂಗಿ ಮಾತ್ರ ಎನ್ನುವುದು ಮೇಲ್ನೋಟಕ್ಕೇ ಅರ್ಥವಾಗಿಬಿಡುತ್ತದೆ. ಏಕೆಂದರೆ ಟಾಟಾನಿಗೆ ತನ್ನ ಕಾರ್ಖಾನೆಯಲ್ಲಿ ಬೇಕಾಗಿರುವುದು, ಸರ್ಕಾರಕ್ಕೆ ವಿಮಾನ ನಿಲ್ದಾಣದಲ್ಲಿ ಬೇಕಾಗಿರುವುದು ಪರಿಣಿತ, ನುರಿತ ನೌಕರರು. ಭೂಮಿ ಕಳೆದುಕೊಂಡ ರೈತರೇನು ಎಂಜಿನಿಯರಿಂಗ್, ಡಿಪ್ಲೊಮಾ ಓದಿದ್ದಾರೆಯೇ? ಅವರಿಗೆ ಕಂಪ್ಯೂಟರ್, ಐಟಿ ಎಲ್ಲಾ ಗೊತ್ತಿದೆಯೇ? ಇಲ್ಲ. ಹಾಗಾಗಿ, "ನಾವೇನೋ ಉದ್ಯೋಗ ಕೊಡಲು ಸಿದ್ಧರಿದ್ದೆವು, ಆದರೆ ನಮ್ಮ ಅಗತ್ಯಕ್ಕೆ ತಕ್ಕಂತೆ ನುರಿತ ಡಿಪ್ಲಾಮೋ, ಎಂಜಿನಿಯರಿಂಗ್, ಕಂಪ್ಯೂಟರ್ ಪದವೀಧರರು ಭೂಮಿ ಕಳೆದುಕೊಂಡ ರೈತರಲ್ಲಿ ಇಲ್ಲದ ಕಾರಣ ಅವರಿಗೆ ಉದ್ಯೋಗ ಕೊಡುವುದಾದರೂ ಹೇಗೆ?" ಎಂಬ ಸಿದ್ಧ ಮತ್ತು ಸಹಜ ಹಾರಿಕೆಯ ಉತ್ತರ ಬರುವುದು ಗ್ಯಾರಂಟಿ.


ಇನ್ನು ಪರಿಹಾರವೂ ಅಷ್ಟಕ್ಕಷ್ಟೆ. ಭಾರತದಲ್ಲಿ ವಿವಿಧ ಯೋಜನೆಗಳಿಂದ ಆಶ್ರಯ ಕಳೆದುಕೊಂಡ ಸಾವಿರಾರು ಕುಟುಂಬಗಳಿವೆ. ಅವುಗಳಲ್ಲಿ ಯಾರಿಗೂ ಸರಿಯಾದ ಪರಿಹಾರ, ಪುನರ್ವಸತಿ ಸಿಕ್ಕೇ ಇಲ್ಲ. ಸಿಕ್ಕರೂ ಕೇವಲ ನೆಪಮಾತ್ರ. ಅಂದರೆ, ಒಕ್ಕಲೆಬ್ಬಿಸುವ ತನಕ ಭಾರಿ ಆಶ್ವಾಸನೆ ಕೊಡುತ್ತಾರೆ. ನಂತರ ತಮ್ಮ ಯೋಜನೆಯನ್ನು ಜಾರಿಗೊಳಿಸಿ ನಿರ್ವಸಿತರಾದವರನ್ನು ಮರೆತೇ ಬಿಡುತ್ತಾರೆ. ಇದು ಸ್ವತಂತ್ರ ಭಾರತದ 60 ವರ್ಷಗಳ ಚರಿತ್ರೆ ತೋರಿಸಿರುವ ಸತ್ಯ. ಸರ್ಕಾರ ಮತ್ತು ವಿವಿಧ ಕಂಪೆನಿಗಳ ಪರಂಪರೆಯೇ ಈ ರೀತಿ ವಂಚನೆಯಿಂದ ಕೂಡಿರುವಾಗ ಧಾರವಾಡ, ಹುಬ್ಬಳ್ಳಿಯ ಜನರಿಗೆ ಪರಿಹಾರ ಕೊಡುತ್ತಾರೆನ್ನುವುದು ಬಿಸಿಲುಕುದುರೆಯಲ್ಲದೆ ಮತ್ತೇನಲ್ಲ.

ಹೋರಾಟಕ್ಕೆ ಜನರೂ ಸಿದ್ಧ

ಸರ್ಕಾರ ಮತ್ತ ಕಂಪೆನಿಗಳ ವಂಚಕ ಪರಂಪರೆಯಿಂದ ಪ್ರಾಯಶಃ ರೈತರೂ ಪಾಠ ಕಲಿತಿರಬೇಕು. ಹಾಗಾಗಿಯೇ, ಪಶ್ಚಿಮ ಬಂಗಾಳದಲ್ಲಿ ಟಾಟಾನ ವಿರುದ್ಧ, ಎಸ್‌ಇಜೆಡ್ ವಿರುದ್ಧ ರೈತರು ಮಿಲಿಟೆಂಟ್ ಹೋರಾಟಕ್ಕೆ ಇಳಿದಿದ್ದಾರೆ. 12 ಹೆಣಗಳು ಬಿದ್ದರೂ, ನೂರಾರು ಜನರನ್ನು ಜೈಲಿಗೆ ತಳ್ಳಿದ್ದರೂ ಹೋರಾಟ ಮಾತ್ರ ಮಿಲಿಟೆಂಟಾಗಿಯೇ ಸಾಗಿದೆ. ಹುಬ್ಬಳ್ಳಿ ಮತ್ತು ಧಾರವಾಡದ ಜನರೂ ಪಶ್ಚಿಮ ಬಂಗಾಳದ ರೈತರ ದಾರಿಯನ್ನೇ ಆಯ್ದುಕೊಳ್ಳುತ್ತಿದ್ದಾರೆ. ಅದಕ್ಕಾಗಿ ಕರ್ನಾಟಕ ರಾಜ್ಯ ಪಕ್ಷಾತೀತ ರೈತ ಹೋರಾಟ ಸಮಿತಿಯೊಂದು ಆವಿರ್ಭವಿಸಿದೆ. ಇದರಡಿಯಲ್ಲಿ ಜನರು ಯಾವ ಕಾರಣಕ್ಕೂ ರೈತರ ಭೂಮಿಯನ್ನು ಕಿತ್ತುಕೊಳ್ಳಲು ಬಿಡುವುದಿಲ್ಲವೆಂಬ ಪ್ರತಿಜ್ಞೆಯೊಂದಿಗೆ ಹೋರಾಟಕ್ಕೆ ಸಜ್ಜಾಗಿ ನಿಂತಿದ್ದಾರೆ. ಇನ್ನೊಂದೆಡೆಗೆ ವಿಮಾನ ನಿಲ್ದಾಣದಿಂದ ಮನೆ ಮಠ ಕಳೆದುಕೊಳ್ಳುವ ರೈತರು 'ವಿಮಾನ ನಿಲ್ದಾಣ ಸಂತ್ರಸ್ತರ ನಾಗರಿಕರ ಸೇವಾ ಸಮಿತಿ' ಎಂಬ ಸಂಘಟನೆಯ ನಾಯಕತ್ವದಲ್ಲಿ ಸಂಘಟಿತರಾಗುತ್ತಿದ್ದಾರೆ.

ಒಟ್ಟಿನಲ್ಲಿ ಕರ್ನಾಟಕದಲ್ಲಿ ನಂದಿಗ್ರಾಮಗಳು ಹುಟ್ಟಿಕೊಳ್ಳುವ ಎಲ್ಲ ಮುನ್ಸೂಚನೆಗಳೂ ಕಾಣುತ್ತಿವೆ. ಅಂತಹ ದುರಂತಗಳು ಸಂಭವಿಸದಂತೆ, ಅನ್ನ ಹಾಕಿದ ರೈತರಿಗೆ ಅನ್ಯಾಯವಾಗದಂತೆ ವರ್ತಿಸುವ ಹೊಣೆಗಾರಿಕೆಯನ್ನು ಸರ್ಕಾರ ಪ್ರದರ್ಶಿಸುತ್ತದೆಯೆ? ■

ಮೈಲಾರಿ ನಾಯಿಮರಿ



ಬೆಂಗಳೂರು ವಿಶ್ವವಿದ್ಯಾನಿಲಯದ ಅಂಗಳ ಸ್ವಲ್ಪ ಸ್ವಚ್ಛವಾಗಿದೆ. ಅಭಿನವ ಅಂಬೇಡ್ಕರ್ ಡಾ. ಬಿ.ಸಿ. ಮೈಲಾರಪ್ಪನವರನ್ನು 'ಸ್ವಲ್ಪ ದಿನ ಮನೇಲಿರಿ' ಎಂದು ಸೆನೆಟ್ ತೀರ್ಮಾನ ಮಾಡಿ ಸಸ್ಪೆಂಡ್ ಮಾಡಿದ್ದೂ ಆಗಿದೆ. ಆದರೆ ಯಾರಿಗೂ ಇನ್ನೂ ಅರ್ಥವಾಗದ ಸಂಗತಿ ಏನೆಂದರೆ ಬಿಜೆಪಿಯ ಎಂಎಲ್‌ಸಿ ನರಹರಿ ತಮಗೇ ಈ ಒದೆ ಬಿತ್ತೇನೊ ಎನ್ನುವಂತೆ ದುಗುಡದಿಂದ ಓಡಾಡುತ್ತಿರುವುದು. ಮೈಲಾರಪ್ಪನವರನ್ನು ಮತ್ತೆ ಅದೇ ಜಾಗಕ್ಕೆ ತಂದು ಕೂರಿಸಲು ಹಗಲುರಾತ್ರಿ ಶ್ರಮಿಸುತ್ತಿರುವ ನರಹರಿಯನ್ನು ನೋಡಿ ಸ್ವತಃ ಅವರ ಚೇಲಾಗಳಿಗೇ ಈಗ ಗಾಬರಿಯಾಗಿದೆ. ತಮ್ಮ ನಾಯಕನ ಒಳ ವ್ಯವಹಾರಗಳೇನಾದರೂ ಸಾಕ್ಷಿ ಸಮೇತ ಮೈಲಾರಪ್ಪನ ಹತ್ತಿರ ಸಿಕ್ಕಿಹಾಕಿಕೊಂಡಿರಬಹುದಾದ, ಇಲ್ಲದಿದ್ದರೆ ಅವರ‍್ಯಾಕೆ ಈ ಪಾಟಿ ಪರಿಪಾಟಲು ಪಡುತ್ತಾ 'ಮೈ' ಪರ ಲಾಬಿ ಮಾಡುತ್ತಿದ್ದಾರೆ ಅಂತಾ ಅವರ ಅನುಮಾನ.

ಅಂದಹಾಗೆ ಯೂನಿವರ್ಸಿಟಿ ತುಂಬ ಈಗ 'ನ...ರಿ ಮೈಲಾರಿ ನಾಯಿಮರಿ' ಎಂಬ ಪ್ರಾಸಬದ್ಧ ಮಾತು ಕೇಳಿಬರುತ್ತಿದೆ.

ಮಾವನ ಹಕ್ಕೂ ಹಾಗೂ ಮಾನವ ಹಕ್ಕು

ಕೊನೆಗೂ ರಾಜ್ಯ ಮಾನವ ಹಕ್ಕುಗಳ ಆಯೋಗ ಅಸ್ತಿತ್ವಕ್ಕೆ ಬರುತ್ತಿದೆ. ಅದರ ಅಧ್ಯಕ್ಷ/ಸದಸ್ಯರಾಗಬೇಕೆಂದು ಪ್ಲಾನ್ ಮಾಡಿಕೊಂಡಿದ್ದ ಅನೇಕರು ಮಾನವ ಹಕ್ಕೆಂದರೆ ಮಾವನ ಹಕ್ಕೆಂದು ಅರ್ಥಮಾಡಿಕೊಂಡು ಕನ್‌ಫ್ಯೂಷನ್‌ಗೆ ಒಳಗಾಗಿದ್ದರೆ, ಉಳಿದವರು ಅಧ್ಯಕ್ಷ ಸ್ಥಾನ ತಮ್ಮ ಹಕ್ಕೆಂದು ಬಹಳ ಹುರುಪಿನಿಂದ ಓಡಾಡಿದ್ದರು. ಕೆಲವರು ರಾತ್ರೋರಾತ್ರಿ, ಅನೇಕ ಮಾನವರ ಬಗ್ಗೆ ಅಧಿಕಾರಯುತ ಲೇಖನಗಳನ್ನು ಕಂಡುಹಿಡಿದದ್ದೂ ಉಂಟು.

ಆದರೆ ಈಗ ಅಧ್ಯಕ್ಷ ಸ್ಥಾನ ಯಾರೂ ಊಹಿಸಿರದಿದ್ದ ನಾಯಕ್ ಎಂಬುವರಿಗೆ ಹೋಗಿದೆ.

ಈಶ್ವರಪ್ಪನಿಗೆ ಎಸ್ಸೆಲ್ ಗ್ರೂಪಿನ ಎಲ್ಲೆಸ್ ಪ್ರಶಸ್ತಿ!

ಕರ್ನಾಟಕ ರಾಜಕಾರಣ ಕಂಡಂತಹ ಅಪೂರ್ವ ಮಂತ್ರಿ ಈಶ್ವರಪ್ಪನಿಗೆ ಜೀ ಕನ್ನಡ ಮತ್ತು ಎಸ್ಸೆಲ್ ಗ್ರೂಪಿನ ಎಸ್ಸೆಲ್ ಕರ್ನಾಟಕ ಶ್ರೇಷ್ಠ ಮಂತ್ರಿ ಪದವಿಯನ್ನು ನೀಡಿಬಿಟ್ಟಿತಂತಲ್ಲಾ. ಕರ್ನಾಟಕ ದೇಶದಲ್ಲೇ ಮೊದಲಬಾರಿಗೆ ಈ ಪ್ರಶಸ್ತಿ ಪಡೆದ ಮಾನ್ಯ ಈಶ್ವರಪ್ಪನವರನ್ನು ಮಾತನಾಡಿಸಿ ಅಭಿನಂದಿಸಬೇಕಾದದ್ದು ನಮ್ಮ ಕರ್ತವ್ಯವಲ್ಲವೆ. ಅದಕ್ಕಾಗಿ ಫೋನ್ ಮಾಡಿದಾಗ ರಿಂಗ್ ಟೋನ್ "ನಮಸ್ತೇ ಸದಾವತ್ಸಲೇ ಮಾತೃಭೂಮಿ...."

ಥೂತ್ತೇರಿ

ಯಾಹೂ

"ಹಲೋ ಯಾರು?"

"ನಾನು ಸಾರ್ ಪತ್ರಕರ್ತ."

"ಯಾವ ಪತ್ರಿಕೆ ಸಾರ್?"

"ಜನಿವಾರ ಅಂತ ಸಾರ್, ಹೊಸ ಪತ್ರಿಕೆ."

"ಏನಾಗಬೇಕು ಹೇಳಿ?"

"ನಿಮ್ಮದೊಂದು ಫೋಟೋ ಹಾಕಿ. ಯಾರೆಸಲ್ಲಾದ್ರು ಅಭಿನಂದನೆ ಪ್ರಕಟುಸ್ತಿನಿ, ಅದರ ಖರ್ಚು ಕೊಡಬೇಕು."


"ಖರ್ಚು ಎಷ್ಟಾದ್ರು ಆಗ್ಲಿ, ಒಳ್ಳೆ ಫೋಟೋ ಹಾಕಿ, ಚೆನ್ನಾಗಿ ನ್ಯೂಸ್ ಬರಿರಿ."

"ಆಯ್ತು ಸಾರ್. ಅಂಗೆ ಕಂಗ್ರಾಜುಲೇಷನ್ ಸಾರ್. ಅಂತ ಘಟಾನುಗಟಿ ಮಂತ್ರಿಗಳನ್ನೆಲ್ಲಾ ಸೈಡ್ ಹೊಡದು ಅಂತೂ ಎಲ್ಲೆಸ್ ಪ್ರೈಜ್ ಹೊಡದರಲ್ಲಾ ಸಾರ್."

"ಎಲ್ಲೆಸ್ ಅಲ್ಲ ಕಂಡ್ರಿ, ಎಸ್ಸೆಲ್ ಪ್ರಶಸ್ತಿ, ಎಲ್ಲಾ ನಮ್ಮ ಜನಗಳ ಕೋ ಆಪರೇಷನ್ನು."

"ಕುರುಬ ಜನಾಂಗದ ಕೋ ಆಪರೇಷನ್ನಾ ಸಾರ್?"

"ಅಯ್ಯೋ, ಕುರುಬರನಚ್ಚಿಗೊಂಡ್ರೆ ನಾನು ಕುರಿಕಾಯಬೇಕಾಯ್ತದೆ. ಅವುರಿಗೆ ಎಸ್ಸೆಮ್ಮೆಸ್ ಗೊತ್ತೇನ್ರೀ? ಹೋಗ್ಲಿ, ಜೀ ಕನ್ನಡ ಎಸ್ಸೆಲ್ ಗ್ರೂಪಿನ ಪ್ರಶಸ್ತಿ ಏನು ಅಂದ್ರೆ ಗೊತ್ತೇನ್ರಿ? ನಾನೇ ಯಲ್ಲಾನು ಹೇಳಿಕೊಟ್ಟು ಎಸ್ಸೆಮ್ಮೆಸ್ ಕಳಸೋ ವ್ಯವಸ್ಥೆನೂ ಮಾಡಬೇಕಾಯ್ತದೆ."



"ಅಂಗಿದ್ರೆ ಯಾರು ಸಪೋರ್ಟು ಮಾಡಿದ್ರು ಸಾರ್?"

"ಇನ್ಯಾರು? ನಮ್ಮ ಬಜೆಪಿ, ಆರೆಸ್ಸೆಸ್, ಭಜರಂಗದ ಜನ ಪ್ರಾಮಾಣಿಕವಾಗಿ ಎಸ್ಸೆಮ್ಮೆಸ್ ಕಳಿಸಲಾಗಿ ಈ ಪ್ರಶಸ್ತಿ ಬಂತು."

"ಪ್ರಶಸ್ತಿ ಪಡೆದಿದ್ದೆ ಏನನ್ನಸುತ್ತೆ ಸಾರ್?"

"ಮಾತಾಡಕ್ಕೇ ಆಗ್ತಾಯಿಲ್ಲ ಕಂಡ್ರಿ."

"ಈಗೇನು ತೊಂದ್ರೆಯಿಲ್ಲವಲ್ಲ ಸಾರ್. ತೊಂದ್ರೆ ಕೊಡತಿದ್ದ ಹಲ್ಲು ಕೀಳಿಸಿದ್ದಿರಿ, ನಾಲಿಗೆಲಿ ತುಟಸವರದ್ನು ಕಡಿಮೆ ಮಾಡಿದ್ದಿರಿ."

"ಥೂ, ಅದಲ್ಲ ಕಂಡ್ರಿ. ಕರ್ನಾಟಕದ ಸಮ್ಮಿಶ್ರ ಸರ್ಕಾರದಲ್ಲಿ ಇಷ್ಟೊಂದು ಜನ ಮಂತ್ರಿಗಳಿದ್ರು, ಶಾಸಕರಿದ್ರು, ಅಧಿಕಾರಿಗಳಿದ್ರು ಅಂಥ ಮಹಾನ್ ಪ್ರಶಸ್ತಿ ನನಿಗೆ ಬರೋ ಅಂತ ಪರಿಸ್ಥಿತಿ ನಿರ್ಮಾಣ ಆಯ್ತಲ್ಲಾ, ಅದಕ್ಕಾಗಿ ಸಂತೋಷದಿಂದ ಮಾತಾಡಕ್ಯಾಯ್ತಾಯಿಲ್ಲ."

"ಓ ಅಂಗ ಸಾರ್? ನೀವೇಳದು ನಿಜ ಸಾರ್. ಪ್ರಶಸ್ತಿ, ಪುರಸ್ಕಾರ, ಮಂತ್ರಿಗಿರಿ, ಯಾವುದ್ರು ಲಾಯಕ್ಕಲ್ಲದ ನಿಮಗೆ ಅದರಲ್ಲೂ ಇಂತ ಸಂಸ್ಥೆಯಿಂದ ಪ್ರಶಸ್ತಿ ಅಂದ್ರೆ ನಮಗೂ ನಂಬಕ್ಯಾಯ್ತಾಯಿಲ್ಲ, ಆದ್ರು ನಂಬಲೇಬೇಕಿದೆ. ಪ್ರಶಸ್ತಿಗೆ ಮಾನದಂಡ ಏನು ಸಾರ್?"

"ಒಳ್ಳೆ ಮಂತ್ರಿಯಂತೆ ನಾನು."

"ನಿಜ ಸಾರ್. ಮಂತ್ರಿಯಾದ ಕೂಡ್ಲೆ ತಮ್ಮ ಆಸ್ತಿ ಮರುಭೂಮಿ ತರ ವಿಸ್ತಾರ ಆಯ್ತಾ ಅದೆ. ಜೊತೇನೆ ಮಳೆ ಆಗಿ ನದಿಗಳೆಲ್ಲಾ ತುಂಬಿ ಹರಿತವೆ ಆದ್ರೂ ಭದ್ರಾನದಿ ಖಾಲಿ ಬಿದ್ದಿದೆ. ರೈತರು ಬಾಯಿ ಬಡಕತ್ತಾ ಅವ್ರೆ. ಯಾವ ಕಡಿಂದ ನೋಡಿದ್ರು ತಾವು ಸಮೃದ್ಧವಾಗಿ ಕಾಣ್ತಾಯಿದ್ದಿರಿ. ನಿಮಗೋಲಿಸಿದ್ರೆ ನಿಮ್ಮ ಜೊತೆ ಸ್ಪರ್ಧೆಲಿದ್ದೋರು ಜುಜುಬಿಗಳು ಸಾರ್."

"ಅದನ್ನ ನೀವೇ ಹೇಳಬೇಕು."

"ಹೇಳದೇನು? ಚಲುವರಾಯಸ್ವಾಮಿ ಹೊಡೆದ ದುಡ್ಡಲ್ಲಿ ದೇವೇಗೌಡ್ರ ಮನೆಗೆ ತಲುಪುಸುವಾಗ ಒಸಿ ದುಡ್ಡಿಗೆ ಕತ್ರಿ ಹಾಕಿದನಂತೆ. ಅದೂ ಅಲ್ದೆ ಈಚೆಗೆ ದೇವೇಗೌಡ ಮನೆತಕ್ಕೆ ಬರಬೇಡ ಅಂದಿದ್ದನಂತೆ. ಅವ್ನ ಕತೆ ಮುಗಿತು. ಇನ್ನ ಆ ಜಗದೀಶ್ ಶೆಟ್ಟರ್ ಎಷ್ಟೊ ಕಷ್ಟ ಇದ್ದಾಗ ಸೈಟ್ ತಗೊಂಡನಂತೆ. ಯಕ್ಷಗಾನದ ಓನರ್ ತರ ಕಾಣೊ ಅವ್ನಿಗೆ ಪ್ರಶಸ್ತಿ ಕೊಡಕ್ಯಾಯ್ತದ? ಇನ್ನು ಹೊರಟ್ಟಿ ಅನ್ನೋನು ಹೆಂಡತಿ ಬಿಟ್ಟು ಕಲೆಕ್ಷನ್ ಮಾಡ್ತಯಿದ್ದನಂತೆ. ಜೊತೆಗೆ ಇಂಗ್ಲಿಸ್ ಸ್ಕೂಲು, ಕನ್ನಡ ಸ್ಕೂಲು ಅಂತ ರಗಳೆ ಮಾಡಿಕೊಂಡು ಜುಬ್ಬದ ಜೋಬನ್ನ ಆಗಲ ಮಾಡಿಕೊಂಡಿದ್ದನಂತೆ. ಕಟ್ಟಾ ಸುಬ್ರ ಥೇಟ್ 'ಸುಬ್ರದಂಗೆ' ಅವ್ನೆ ಅಂತ ಸಾಬರ‍್ಯೆಲ್ಲ ಆಡಿಕೊಳ್ತಾ ಅವ್ರೆ. ಇನ್ನು ಎಂ.ಪಿ. ಪ್ರಕಾಶ್ ನೋಡಿ, ಪ್ರಶಸ್ತಿ ಕೊಡೋರಿಗೆ ಕನಿಕರ ಆಗೋತರ ಇದಾರೆ. ಅವರ ಖಾತೆಲಿರೊ ಎಸ್ಪಿಗಳುನ್ನೆಲ್ಲಾ ಬಾಲಕೃಷ್ಣೇಗೌಡ ಟ್ರಾನ್ಸ್‌ಫರ್ ಮಾಡ್ತನಂತೆ. ಅಡಿಷನಲ್ ಎಸ್ಪಿಗಳನ್ನು ರೇವಣ್ಣ ಮಾಡ್ತನಂತೆ. ಡಿವೈಎಸ್‌ಪಿಗಳನ್ನು ಡಾ. ರಮೇಶ್ ಅನ್ನೊ ಮುನ್ನಾಬಾಯಿ ಮಾಡ್ತನಂತೆ. ಪ್ರಕಾಶ್ ಪಿ.ಸಿ.ಗಳ ಟ್ರಾನ್ಸ್‌ಫರ್ ಮಾಡೋ ಪವರ್ ಮಾತ್ರ ಇಟಗೊಂಡವುರಂತೆ. ಇಂತವುರಿಗೆ ಶ್ರೇಷ್ಠ ಮಂತ್ರಿ ಪ್ರಶಸ್ತಿ ಕೊಟ್ರೆ ಎಸ್ಸೆಲ್ ಗ್ರೂಪು ಬದುಕೂದೆಂಗೆ ಸಾರ್. ಆದ್ರಿಂದ ನಿಮಗೆ ಇಂತ ಪ್ರಶಸ್ತಿ ಬಂದಿರೋದು ನೀರಾವರಿ ಕಾಲುವೆ ಕಾಮಗಾರಿ ಜನಕ್ಕೆಲ್ಲಾ ಸಂತೋಷದ ಸುದ್ದಿ ಸಾರ್."

"ಅಷ್ಟೇ ಅಲ್ಲ, ಇಡೀ ಭಾರತದ ಅಡ್ವಾನಿ, ನಮ್ಮ ಪಕ್ಷದ ಮೊದಲ ಪ್ರಧಾನಿ ವಾಜಪೇಯಿ, ನಮ್ಮ ಧರ್ಮಗುರು ಪೇಜಾವರಸ್ವಾಮಿ, ಎಲ್ಲರಿಗೂ ಸಂತೋಷವಾಗಿದೆ ಎಂಬ ತಕ್ಕಂತ ಮಾತ್ನ ಈ ಸಂದರ್ಭದಲ್ಲಿ ಹೇಳಕ್ಕೆ ಇಚ್ಛೆ ಪಡ್ತಿನಿ."

"ನಿಜ ಸಾರ್, ಸಾಹಿತಿಗಳಿಗೆ ಸಿಗೋ ಜ್ಞಾನಪೀಠ ಹೇಗೊ ಹಾಗೆನೆ ಎಸ್ಸೆಲ್ ಗ್ರೂಪ್ ಅವಾರ್ಡು."

"ಹೌದೇನ್ರಿ?"

"ಹೌದು ಸಾರ್, ಜ್ಞಾನಪೀಠಕ್ಕೆ ಯೋಗ್ಯರಾದ ತೇಜಸ್ವಿ, ಲಂಕೇಶ್, ಪುತಿನ ಅವುರೆಲ್ಲಾ ಇರುವಾಗ ಗಿರೀಶ್ ಕಾರ್ನಾಡರಿಗೆ ಜ್ಞಾನಪೀಠ ಸಿಕ್ತು, ಹಾಗೆ ರಾಜಕಾರಣದಲ್ಲಿ ಯಾರ‍್ಯಾರೊ ಇರುವಾಗ ನಿಮಗೆ ಸಿಕ್ತು."

"ರೀ ಯಾರೂ ಇರಲಿಲ್ಲ ಕಂಡ್ರಿ. ನನ್ನ ಬಯೋಡೇಟಾ ನಿಮಗೆ ಗೊತ್ತಿದ್ರೆ ನೀವೀತರ ಮಾತಾಡ್ತಯಿರಲಿಲ್ಲ. ನಾನು ಬಳ್ಳಾರಿಯಿಂದ ಹಕ್ಕಿಪಿಕ್ಕರ ತರ ಅಲಕೊಂಡು ಶಿವಮೊಗ್ಗದ ಕಡೆ ಹೋದೋನು. ಅದೇ ಟೈಮಿಗೆ ಮಂಡ್ಯ ಜಿಲ್ಲೆ ಬೂಕನಕೆರೆ ಕಡೆಯಿಂದ ಎಡೂರಪ್ಪ ಬಂದ. ಅಷ್ಟೊತ್ತಿಗಾಗ್ಲೆ ಶಂಕರಮೂರ್ತಿ ಅಂಗಡಿ ಬಾಗಲಾಯ್ತೊಂದು ಚೆಡ್ಡಿ ಹಿಕ್ಕಂಡು ಲಾಟಿ ಹಿಡಕೊಂಡು ನಿಂತಿದ್ರು. ನಮ್ಮನ್ನು ಸೇರಿಸಿಕೊಂಡ್ರು. ಸಂಘದ ಹುಡುಗರಾಗಿದ್ದ ನಾವು ಇವತ್ತು ಮಂತ್ರಿಗಳು. ಎಡೂರಪ್ಪ, ಶಂಕರಮೂರ್ತಿ ಅನ್ನೊ ಘಟಾನುಘಟಿಗಳನ್ನು ಹಿಂದಾಕಿ ನಾನು ಪ್ರಶಸ್ತಿ ತಗೊಂಡೆ ಅಂದ್ರೇ ಸಾಮಾನ್ಯವಾದ ಸಾಧನೆ ಏನ್ರಿ?"

"ಖಂಡಿತ ಅಲ್ಲ ಸಾರ್. ಇದು ಅಸಾಮಾನ್ಯ ಸಾಧನೆ. ಮುಂದಿನ ಸಾಧನೆ ಏನು ಸಾರ್?"

"ಮುಂದಿನ ಸಾಧನೆ ಏನಂದ್ರೆ ಒಳ್ಳೆ ಮುಖ್ಯಮಂತ್ರಿ ಅಂತ ಪ್ರಶಸ್ತಿ ತಗೊಬೇಕು."

"ಇದೇನ್ ಸಾರ್ ಹಿಂಗಂತಿರಿ? ಹಾಗಾದ್ರೆ ಎಡೂರಪ್ಪನ ಕತೆ?"

"ದೇವೇಗೌಡ್ರೇ ನಿರ್ಧಾರ ಮಾಡಬೇಕು."

"ಈ ಪ್ರಶಸ್ತಿಲಿ ದೇವೇಗೌಡರ ಕೈವಾಡ ಇಲ್ಲವಾ ಸಾರ್?"

"ಇದವುರಿಗೆ ಗೊತ್ತೆ ಆಗಲಿಲ್ಲ. ಗೊತ್ತಿದ್ರೆ ರೇವಣ್ಣನಿಗೆ ಕೊಡುಸ್ತಿದ್ರು."

"ಥೂ, ಥೂ, ಥೂತ್ತೇರಿ!! ■



1



2



3



4



5

ಕೋಲಾರ ಜೈಲಲ್ಲಿ ಕುಡಿದವನೇ ಜಾಣ

■ ರಾ. ಸೋಮನಾಥ್

ತುಮಕೂರು ಬಂದಿಖಾನೆಯ ಖೈದಿಗಳು ಕನ್ನ ಕೊರೆದು ಓಡಿಹೋದ ಸುದ್ದಿ ಕೇಳಿದ್ದೇ ತಡ, ಕೋಲಾರ ಜೈಲಿನ ಕ್ರಿಮಿನಲ್‌ಗಳೆಲ್ಲ ಹೊಟ್ಟೆ ಹಿಡಕೊಂಡು ನಕ್ಕರಂತೆ!

ಬುದ್ಧಿ ಬೇಡವಾ? ಯಾರೋ ಜೈಲಧಿಕಾರಿಗೆ ಒಂದಷ್ಟು ಕಾಸು ತಿನ್ನಿಸಿ ಕೋಲಾರ ಜೈಲಿಗೆ ಟ್ರಾನ್ಸ್‌ಫರ್ ಮಾಡಿಸಿಕೊಂಡಿದ್ದರೆ; ಬೇಕುಬೇಕಾದಾಗೆಲ್ಲ ಹೊರಗೆ ಹೋಗಿ ಮಜಾ ಉಡಾಯಿಸಿ ಬರಬಹುದಿತ್ತಾ? ದುಡ್ಡು ಕೊಟ್ರೆ ಜೈಲರ್ ನಾಗಯ್ಯನೇ ಮೊಬೈಲ್ ಫೋನ್ ತಂದು ಕೊಡುತ್ತಿದ್ದನಾ? ಇನ್ನು ಪ್ರತಿರಾತ್ರಿ ಎಣ್ಣೆ ಹೊಡಿಬೇಕು ಅಂದ್ರೆ ಅದನ್ನೂ ಕೋಲಾರ ಜೈಲಿನ ಸಿಬ್ಬಂದಿಯೆ ಸಪ್ಲೈ ಮಾಡಲ್ಲವಾ? ಅದನ್ನು ಬಿಟ್ಟು ಕನ್ನ ಕೊರೆದು ಓಡಿಹೋಗೋ ಮುಠ್ಠಾಳ ಕೆಲ್ಸ ಕ್ಯಾಕೆ ಇಳೀಬೇಕಿತ್ತು?

ಇದು ಕೋಲಾರ ಜೈಲಿನ ಬಹುತೇಕ ಖೈದಿಗಳ ಬಾಯಿಂದ ಬಂದ ಮಾತು. ಅಂದಹಾಗೆ ಬೆಂಗಳೂರಿನ ರೌಡಿಗಳನ್ನು ಕೋಲಾರ ಜೈಲಲ್ಲಿ ಮಡಗೋದೆಬೇಡ ಎಂಬ ನಿರ್ಧಾರಕ್ಕೆ ಕಾರಣ. ಇತ್ತೀಚೆಗಷ್ಟೇ ಇದೇ ಜೈಲಿನ ಖೈದಿಗಳು ಮುಷ್ಕರ ಹೂಡಿದ್ದು ಇಲ್ಲಿಗೆ ವಾರದ ಹಿಂದಷ್ಟೇ ಜಯನಗರದ ರೌಡಿ ಅಸಗರ್ ಇದೇ ಕೋಲಾರ ಜೈಲಿಂದಲೇ ಎಸ್ಕೇಪಾಗಿದ್ದು ಆತನ ಪರಾರಿಗೆ ನೆರವಾದರೆಂದು ಇಬ್ಬರು ಪೊಲೀಸರನ್ನು ಅದೆ ಜೈಲಿಗೆ ಹಾಕಿದ್ದು ಆ ಕಾರಣಕ್ಕೇ ಅಲ್ಲಿನ ಎರಡು ಖೈದಿ ಗ್ಯಾಂಗ್‌ಗಳು ಹೊಡೆದಾಡಿದ್ದು ಕೋಲಾರ ಸಬ್ ಜೈಲಿನ ಕುಖ್ಯಾತಿಗೆ ಇಲ್ಲಿನ ಕೆಲ ಫೋಟೋಗಳನ್ನೊಮ್ಮೆ ನೋದಿ-

ಈ ವರದಿಗಾರ ಉಪಾಯವಾಗಿ ಸೆರೆಹಿಡಿಸಿದ ಈ ಫೋಟೊಗಳ ಅಷ್ಟೂ ದೃಶ್ಯಾವಳಿಗಳು ಕೋಲಾರ ಜೈಲಿಗೆ ಸಂಬಂಧ ಪಟ್ಟದ್ದೇ! ಈ ಪೈಕಿ ಮೊದಲನೇ ಫೋಟೋದಲ್ಲಿ ಕೋಲಾರ ಜೈಲಿನ ಸೆಲ್ ಒಂದರ ಕಂಬ ಹಿಡಕೊಂಡು ಇನ್ನೊಂದು ಕೈಯಲ್ಲಿ ಟಿನ್‌ಬಿಯರ್ ಕುಡಿಯುತ್ತಿರುವ ಜೀನ್ಸ್ ಧಾರಿಯೊಬ್ಬನನ್ನು ಕಾಣುತ್ತೀರಿ. ಆತ ಬೇರೆ ಯಾರೂ ಅಲ್ಲ; ಬನಶಂಕರಿಯ ರೌಡಿ ಟ್ಯಾಕ್ಟರ್ ರಾಮನ ಹಂತಕ ಕೋತಿ ಬಾಬು ಉರ್ಫ್ ನಿರಂಜನಮೂರ್ತಿ. ಈತ ಕತ್ರಿಗುಪ್ಪೆಯ ಖತರ್‌ನಾಕ್ ರೌಡಿ. ಕೊರಂಗು ಮತ್ತು ಕತ್ರಿಗುಪ್ಪೆ ಲಿಂಗರ ಕಟ್ಟಾವೈರಿ ಕಿಲ್ಲರ್ ಬಳ್ಳನ ಜೊತೆ ಸೇರಿ ಟ್ಯಾಕ್ಟರ್ ರಾಮನನ್ನು ಕೊಂದು ಈಗ ಕಂಬಿ ಎಣಿಸುತ್ತಿದ್ದಾನೆ.

ಆತನ ಕಾಲ ಬುಡಕ್ಕೇ ಬನೀನುಧಾರಿಯೊಬ್ಬ ಕುಡಿದು ಚಿತ್ತಾಗಿ ಕೂತಿದ್ದಾನೆ. ಆತನ ಎದುರಿಗೇ ಬಸಲೇರಿ ಬಾಟಲಿ ಮತ್ತೊಂದು ಟಿನ್‌ಬಿಯರ್ ಕಾಣಿಸುತ್ತಿದೆಯೇ? ಇನ್ನೂ ಸ್ಪಷ್ಟವಾಗಿ ನೋಡಿದರೆ ಕಂಬ ಹಿಡಿದು ಬಿಯರ್ ಕುಡಿಯುತ್ತಿರುವ ಕೋತಿಬಾಬುವಿನ ಹಿಂಭಾಗದ ಗೋಡೆಯ ಎಲೆಕ್ಟ್ರಿಕಲ್ ಸ್ವಿಚ್ಚಿಗೆ ಮೊಬೈಲ್ ಫೋನಿನ ಚಾರ್ಜರ್ ಒಂದು ನೇತಾಡುತ್ತಿರುವುದು ಕಾಣಿಸುತ್ತಿದೆಯೇ? ಹಾಗೇ ಇಳಿಬಿದ್ದ ಮೊಬೈಲ್ ಚಾರ್ಜರ್‌ನ ಕೆಳ ಕೊಂದು ವಿಸ್ಕಿ ಬಾಟಲಿಯೂ ಇದೆ. ಅಲ್ಲೇ ಕುಡಿದು ಚಿತ್ತಾಗಿ ಕೂತಿರುವ ಬನೀನುಧಾರಿಯೇ ಹೊಸಕೋಟೆಯ ಹಂತಕ ರಾಬರಿ ಮುನಿಯಪ್ಪ!


ಈ ರಾಬರಿ ಮುನಿಯಪ್ಪನಿಗೆ ಎಂಟು ವರ್ಷಗಳ ಸಜೆಯಾಗಿದೆ. ಈ ಹಿಂದೆ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಲ್ಲಿದ್ದಾಗ ಕೋರ್ಟಿನಿಂದ ಜಾಮೀನು ಸಿಕ್ಕಂತೆ ನಕಲಿ ದಾಖಲೆ ಸೃಷ್ಟಿಸಿ ಎಸ್ಕೇಪಾಗಲು ಹೋಗಿ ಸಿಕ್ಕಿಬಿದ್ದಾತ!

ಏನೋ ಜೈಲಧಿಕಾರಿಗಳ ಕಣ್ತಪ್ಪಿಸಿ ವಿಸ್ಕಿ, ಬಿಯರ್ ತರಿಸಿ ಕುಡಿಯುತ್ತಿದ್ದಾರೆಂದೇ ಭಾವಿಸಿದರೆ ಅದು ಎಂಥಾ ಮೂರ್ಖತನ ಎಂಬುದನ್ನು ಉಳಿದ ಫೋಟೋಗಳು ಸಾರಿ ಹೇಳುತ್ತವೆ. ಎರಡನೇ ಫೋಟೋದಲ್ಲಿ ಇದೇ ಕೋತಿಬಾಬು ತನ್ನ ಬಲಗೈಯಲ್ಲಿ ವಿಸ್ಕಿ ಗ್ಲಾಸನ್ನೂ ಎಡಗೈಯಲ್ಲಿ ಮೊಬೈಲ್ ಫೋನನ್ನೂ ಹಿಡಕೊಂಡು ಸಾಕ್ಷಾತ್ ಪಾಳೇಗಾರನಂತೆ ಫೋಜು ಕೊಡುತ್ತಿದ್ದಾನೆ. ಆತನ ಪಕ್ಕಕ್ಕೇ ಶಟಲ್‌ಕಾಕ್‌ನ ರಾಕೆಟ್ಟುಗಳೂ ಬ್ಯಾಟೂ ಇದೆ. ಅದು ಕೋಲಾರ ಜೈಲಿನ ಒಳಾಂಗಣ. ಅಲ್ಲಿ ಶಟಲ್‌ಕಾಕ್ ಆಡಿದನಂತರ ಹೀಗೆ ಕುಡಿದು ವಿರಮಿಸುವುದು ವಾಡಿಕೆ. ಮೂರನೇ ಚಿತ್ರದಲ್ಲಿ ಇದೇ ಕೋತಿಬಾಬು ಕೋಲಾರ ಜೈಲಿನ ಸೆಲ್ಲೊಂದರಲ್ಲಿ ಮೊಬೈಲ್‌ನಿಂದ ಮಾತಾಡುತ್ತಿರುವ ದೃಶ್ಯವಿದೆ. ಹಾಗೇ ನಾಲ್ಕನೇ ಚಿತ್ರಕ್ಕೆ ಬಂದರೆ ಇದೇ ಕೋಲಾರ ಜೈಲಿನ ಕಲ್ಲುಗೋಡೆಯ ಹಿಂದೆ ಕಪ್ಪು ಕನ್ನಡಕಧಾರಿಯೊಬ್ಬ ಒಂದು ಕೈಯಲ್ಲಿ ವಿಸ್ಕಿಗ್ಲಾಸನ್ನೂ ಮತ್ತೊಂದು ಕೈಯಲ್ಲಿ ಮೊಬೈಲ್ ಫೋನನ್ನೂ ಹಿಡಿದಿದ್ದಾನೆ. ಆತ ಚಿಂತಾಮಣಿಯ ಕುಖ್ಯಾತ ಡಕಾಯಿತ ರಾಮಚಂದ್ರ ಉರ್ಫ್ ಬಂಗಾರ!

ಆಜೀವ ಪರ್ಯಂತ ಜೈಲು ಶಿಕ್ಷೆಗೀಡಾಗಿ ಸದ್ಯ ಇದೇ ಜೈಲಿನಲ್ಲಿ ಅಡುಗೆ ಮಾಡಿಕೊಂಡಿರುವ ಬಂಗಾರ ಅಲಿಯಾಸ್ ರಾಮಚಂದ್ರ ಕೂಡ ಇಲ್ಲಿನ ಪ್ರಭಾವಿ ಖೈದಿಗಳಂತೆ ವಿಸ್ಕಿ ಕುಡಿದು ಮೊಬೈಲ್ ಬಳಸದಿದ್ದರೆ ಹೇಗೆ?

ಈ ಡಕಾಯಿತ ಹಾಕಿದ್ದ ವಾಟಾಳ್ ಕನ್ನಡಕವನ್ನೇ ತೊಟ್ಟು ಮತ್ತೊಬ್ಬ ಟೀ ಶರ್ಟ್‌ಧಾರಿ ಇದೇ ಜೈಲಿನ ಕಲ್ಲು ಗೋಡೆಯ ಹಿಂದೆ ಫೋಜು ಕೊಡುತ್ತಿದ್ದಾನೆ (ಫೋಟೋ ನಾಲ್ಕು). ಆತ ಕೂಡ ಇದೇ ಕೋಲಾರ ಜೈಲಿನ ಖೈದಿ ಅಂತ ಏನಾದರೂ ಲೆಕ್ಕ ಹಾಕಿ ಬಿಟ್ಟರೆ ಶಾಂತಂ ಪಾಪಂ! ಆತ ಜೈಲಿನ ಆ್ಯಂಬುಲೆನ್ಸ್ ಡ್ರೈವರ್ ಸುರೇಶ. ಡಕಾಯಿತನ ಕೂಲಿಂಗ್ ಗ್ಲಾಸನ್ನೇ ತೊಟ್ಟು ಅದೇ ಮೊಬೈಲನ್ನು ತಾನೂ ಹಿಡಿದು ಪೋಜು ಕೊಡುತ್ತಿದ್ದಾನೆಂದರೆ ಕೋಲಾರ ಜೈಲಿನ ಸಿಬ್ಬಂದಿಗಳಿಗೂ ಅಲ್ಲಿನ ಖೈದಿಗಳಿಗೂ ಎಂಥಾ ನೆಂಟಸ್ತಿಕೆ ಅಂತೀರಿ?

ಹಕೀಕತ್ತೇನು ಗೊತ್ತೇ? ಕೋಲಾರ ಜೈಲಿನ ಪರಮ ಪಾತಕಿಗಳಿಗೆಲ್ಲ ಈ ರೀತಿ ವಿಸ್ಕಿ, ಬ್ರಾಂಡಿ, ರಮ್ಮು, ಚಿಕನ್ ಬಿರಿಯಾನಿ ಇತ್ಯಾದಿಗಳನ್ನೆಲ್ಲ ಪ್ರತಿನಿತ್ಯ ತಂದು ಕೊಡುವವನೇ ಈ ಡ್ರೈವರ್ ಸುರೇಶ!



ಜೈಲರ್ ನಾಗಯ್ಯ

ಇನ್ನು ಫೋಟೋ ನಂಬರ್ ಐದರಲ್ಲಿ ಇಳಿವಯಸ್ಸಿನ ಹಂತಕನೊಬ್ಬ ವಿಸ್ಕಿ ಗ್ಲಾಸ್ ಹಿಡಿದು ಮೊಬೈಲಿನಲ್ಲಿ ಮಾತಾಡುತ್ತಾ ಇದೇ ಕೋಲಾರ ಜೈಲಿನ ಕಲ್ಲುಗೋಡೆಗಳ ನಡುವೆ ಕಾಲಮೇಲೆ ಕಾಲು ಹಾಕಿ ಕೂತ ದೃಶ್ಯವನ್ನು ನೋಡಿ. ಹಾಗೇ ಶಟಲ್ ಕಾಕ್ ಆಡಿ ವಿರಮಿಸುತ್ತಿರುವವನು ಬೆಂಗಳೂರಿನ ವೈಟ್ ಫೀಲ್ಡ್ ಏರಿಯಾದ ಕಾಂಗ್ರೆಸ್ ಮುಖಂಡ ತಿಪ್ಪೇನಹಳ್ಳಿ ಕೃಷ್ಣಪ್ಪ. ಈತ ಮಹದೇವಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಯಣ್ಣನ ಖಾಸಾ ಅಣ್ಣ. ತನ್ನ ಮಗಳು ಯಾರೋ ಕೆಳಜಾತಿ ಯುವಕನನ್ನು ಪ್ರೀತಿಸಿದಳೆಂಬ ಒಂದೇ ಕಾರಣಕ್ಕೆ ಆಕೆಯನ್ನೂ ಆಕೆಯ ಪ್ರಿಯಕರನನ್ನೂ ಒಟ್ಟೊಟ್ಟಿಗೇ ಕೊಂದು ಜೈಲು ಸೇರಿದ ರಾಕ್ಷಸ!

ಇಂಥವನಿಗೆ ಕೋಲಾರ ಜೈಲು ಕಲ್ಪಿಸುವ ಶಿಕ್ಷೆಯ ಐಸಿರಿ ಹೇಗಿದೆ ನೋಡಿ!

ಒಂದು ಜೈಲು ಎಷ್ಟು ಕುಲಗೆಡಬಹುದೆಂಬುದಕ್ಕೆ ಇದಕ್ಕಿಂತ ಸಾಕ್ಷಿಬೇಕೆ? ಹೀಗೆ ಕೋಲಾರ ಜೈಲನ್ನು ಹಂತಕರು, ಡಕಾಯಿತರು, ಕಳ್ಳಕಾಕರ ಪಾಲಿಗೆ ಅಕ್ಷರಶಃ ಸ್ವರ್ಗವನ್ನಾಗಿ ಪರಿವರ್ತಿಸಿರುವವನು ಇದೇ ಜೈಲಿನ ಇನ್‌ಚಾರ್ಜ್ ಸೂಪರಿಂಟೆಂಡೆಂಟ್ ಮತ್ತು ಜೈಲರ್ ಎರಡೂ ಆಗಿರುವ ನಾಗಯ್ಯ. ಇಲ್ಲಿ ಪ್ರಕಟಿಸಿರುವ ಫೋಟೋಗಳನ್ನೇ ಸಾಕ್ಷಿಯಾಗಿಟ್ಟು ತನಿಖೆ ನಡೆಸಿದರೆ ಜೈಲರ್ ನಾಗಯ್ಯನನ್ನೇ ಮೊದಲು ಜೈಲಿಗೆ ಹಾಕಬೇಕಾಗುತ್ತದೆ. ಬಂದೀಖಾನೆ ಇಲಾಖೆಯ ಎಡಿಜಿಪಿ ರಮೇಶ್ ಮತ್ತು ಡಿಐಜಿ ಜಯರಾಮಯ್ಯ ಜೈಲುಗಳ ಸುಧಾರಣೆಯ ಬಗ್ಗೆ ಭಯಂಕರ ಭಾಷಣವನ್ನೇ ಬಗಿಯುತ್ತಾರೆ. ಜೈಲು ಖಾತೆಗೂ ಅಧಿಪತಿಯಾಗಿರುವ ಗೃಹ ಮಂತ್ರಿ ಎಂ.ಪಿ. ಪ್ರಕಾಶ್ ಆರ್ಡರುಗಳ ಮೇಲೆ ಆರ್ಡರ್ ಮಾಡುತ್ತಲೇ ಇದ್ದಾರೆ. ಪರಿಣಾಮ ಮಾತ್ರ ಈ ರೀತಿ?

ಇಲ್ಲಿಗೆ ವಾರದ ಹಿಂದಷ್ಟೇ ಬೆಂಗಳೂರಿನ ರೌಡಿಗಳನ್ನು ಮಡಗೋದೆಬೇಡ ಎಂದು ಕೋಲಾರ ಜೈಲಿನ ಖೈದಿಗಳು ಮುಷ್ಕರ ಹೂಡಿದ್ದು, ಅದರ ಫೋಟೋಸಹಿತ ವರದಿಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದು ಇತ್ಯಾದಿಗಳೆಲ್ಲಕ್ಕೂ ಬೇರೆಯದೇ ಕಾರಣವಿತ್ತು, ಸದ್ಯ ಇಡೀ ಕೋಲಾರ ಜೈಲನ್ನು ಆಳುತ್ತಿರುವವನು ಇದೇ ಕೋಲಾರದ ಹಂತಕ ವಡಗೂರು ನಾಗರಾಜ. ಈತ ಲೋಕಲ್ ಕಾಂಗ್ರೆಸ್ ಪುಢಾರಿ ಕೂಡ. ಇಲ್ಲಿಗೆ ವರ್ಷದ ಹಿಂದೆ ವಡಗೂರು ಪಂಚಾಯ್ತಿಯ ಕಾಂಗ್ರೆಸ್ ಲೀಡರ್ ದೊಡ್ಡಪ್ಪಯ್ಯನನ್ನು ಕೊಂದು ಜೈಲು ಸೇರಿದ ವಡಗೂರು ನಾಗರಾಜ ಹಾಲಿ ಕೋಲಾರದ ಎಂಎಲ್‌ಎ ಶ್ರೀನಿವಾಸಗೌಡನ ಬಲಗೈ ಬಂಟ. ಕಾಂಗ್ರೆಸ್ಸಿನಲ್ಲಿದ್ದರೂ ನಾಗರಾಜ ಕೇಂದ್ರ ಮಂತ್ರಿ ಮುನಿಯಪ್ಪನವರ ಬದ್ಧ ವೈರಿ.

ಪ್ರತಿನಿತ್ಯ ಕಮ್ಮಿಯೆಂದರೂ ಇನ್ನೂರು ಮುನ್ನೂರು ಮಂದಿ ನಾಗರಾಜನ ಬೆಂಬಲಿಗರು ಕೋಲಾರ ಜೈಲಿಗೆ ಬರುತ್ತಾರೆ. ಅವರ್‍ಯಾರನ್ನೂ ಜೈಲು ಸಿಬ್ಬಂದಿ ತಡೆಯುವುದೇ ಇಲ್ಲ, ಯಾವಾಗ ಬೇಕಾದರೂ ಜೈಲಿಂದ ಹೊರಬಿದ್ದು ತನ್ನ ಕೆಲಸ ಮುಗಿಸಿಕೊಂಡು ಶಾಸ್ತ್ರಕ್ಕೆಂದು ಜೈಲಿಗೆ ಬರುವ ನಾಗರಾಜನಿಗೆ ಕೋಲಾರ ಜೈಲೇ ಅಡ್ಡೆ. ಪ್ರತಿನಿತ್ಯ ದೂರು ತರುವ ಪುಢಾರಿಗಳನ್ನು ಜೈಲಿನ ಖೈದಿಗಳ ಮಧ್ಯೆಯೇ ಕೂಡ್ರಿಸಿ ಪಂಚಾಯ್ತಿ ಮಾಡುತ್ತಾನೆ. ಕಾಮಗಾರಿ ಕಾಂಟ್ರಾಕ್ಟು, ಬಲ್ ಸೆಟಲ್‌ಮೆಂಟು ಇತ್ಯಾದಿಗಳೆಲ್ಲವನ್ನೂ ಜೈಲಲ್ಲಿ ಕೂತೇ ನಿಭಾಯಿಸುವ ನಾಗರಾಜ ಬೆಂಗಳೂರಿನಿಂದ ಪದ್ಮಾ ಆಂಟಿ ಎಂಬಾಕೆ ಬಂದಿದ್ದೇ ತಡ, ಹೊತ್ತಲ್ಲದ ಹೊತ್ತಲ್ಲೂ ಜೈಲಿಂದ ಹೊರಬಿದ್ದು ಇನ್ನಾವತ್ತಿಗೋ ವಾಪಸ್ಸು ಬರುತ್ತಾನೆ.

ಹೀಗೆ ಇಡೀ ಜೈಲನ್ನೇ ತನಗೆ ಬಿಟ್ಟುಕೊಟ್ಟ ಜೈಲರ್ ನಾಗಯ್ಯನಿಗೆ ವಡಗೂರು ನಾಗರಾಜ ಕೇಳಿದ್ದೆಲ್ಲ ತಥಾಸ್ತು ಎನ್ನುತ್ತಾನೆ.

ಕೋಲಾರ ಜೈಲಲ್ಲಿ ವಡಗೂರು ನಾಗರಾಜ, ತಿಪ್ಪೇನಹಳ್ಳಿ ಕೃಷ್ಣಪ್ಪ, ಹೊಸಕೋಟೆಯ ಸೀರಿಯಲ್ ಕಿಲ್ಲರ್‌ಗಳಾದ ಶ್ಯಾಂ ಮತ್ತು ರವಿ, ರಾಬರಿ ಮುನಿಯಪ್ಪ, ಡಕಾಯಿತ ಬಂಗಾರ, ಶಬನಮ್ ಡೆವಲಪರ್ಸ್ ಮೇಲೆ ಗುಂಡು ಹಾರಿಸಿದ ರವಿ ಪೂಜಾರಿ ಗ್ಯಾಂಗಿನ ಕವಿರಾಜ್ ಮತ್ತು ಸದ್ಯ ಎಸ್ಕೇಪಾಗಿರುವ ಜಯನಗರದ ರೌಡಿ ಅಸಗರ್ ಮುಂತಾದವರದು ಒಂದು ಸಿಂಡಿಕೇಟಾದರೆ ಬೆಂಗಳೂರಿನ ಕೆಲ ರೌಡಿಗಳದು ಮತ್ತೊಂದು ಸಿಂಡಿಕೇಟು. ಇತ್ತೀಚೆಗಷ್ಟೇ ಬನಶಂಕರಿಯಲ್ಲಿ ಜಲ್ಲಿ ವೆಂಕಟೇಶನನ್ನು ಕೊಂದ ಅಲ್ಯೂಮಿನಿಯಂ ಬಾಬು, ಆತನ ಬಂಟ ಗಜೇಂದ್ರ, ಡೀಡಿ ರವಿಯ ತಮ್ಮ ಉಮಾಶಂಕರನನ್ನು ಕೊಂದ ರೌಡಿ ಮುಬಾರಕ್‌ನ ತಮ್ಮ ಸೀನ, ಅಬೀದ್ ಅಲಿ, ಡಲ್ಲು ಕುಮಾರ, ಆಲ್ಬರ್ಟ್, ಸೂರಿ, ಹೆಬ್ಬಾಳದ ರೌಡಿ ಹೇಮಂತ, ಶೂಟರ್ ಹಾವೇರಿ ಅಸ್ಲಂ, ವಿಲ್ಸನ್ ಗಾರ್ಡನ್ನಿನ ರೌಡಿ ಜಾನ್ ಮುಂತಾದವರೆಲ್ಲ ಶುರುವಿನಿಂದಲೂ ವಡಗೂರು ನಾಗರಾಜನ ಹಾವಳಿಯನ್ನು ವಿರೋಧಿಸಿಕೊಂಡೇ ಬಂದರು.

ಯಾವತ್ತು ಅಸಗರ್ ಎಸ್ಕೇಪಾದನೋ ಅದರಿಂದ ಬೆಂಗಳೂರಿನ ಖೈದಿಗಳಿಗೆ ಕೆಟ್ಟ ಹೆಸರಾಯಿತೆಂದು ಹಾವೇರಿ ಅಸ್ಲಂ ಮತ್ತು ಡೀಡಿ ರವಿಯ ವಿರೋಧಿ ಸೀನ ಸೇರಿಕೊಂಡು ನಿಮ್ಮಿಂದಾಗಿ ನಮಗೆಲ್ಲ ಕೆಟ್ಟ ಹೆಸರು ಎಂದು ಅಸಗರ್ ಶಿಷ್ಯ ಖಲೀಂ ಮತ್ತು ಆಲಿಗೆ ಆವಾಜ್ ಹಾಕಿದ್ದಾರೆ. ಅಸಗರ್ ಗ್ಯಾಂಗಿನ ಜೊತೆ ನಂಟಿದ್ದ ರವಿ ಪೂಜಾರಿಯ ಬಂಟ ಕವಿರಾಜ್‌ಗೆ ಇದು ತನ್ನ ದೌಲತ್ತಿಗೇ ಅವಮಾನ ಎನ್ನಿಸಿ 'ಏನ್ರೋ ನನ್ನ ಹುಡುಗರಿಗೇ ರೋಪ್ ಹಾಕ್ತೀರಾ? ಫೈರ್ ಮಾಡಿಸಿ ಬಿಡ್ತೀನಿ' ಎಂದು ರುಬಾಬು ಮಾಡಿದ್ದಾನೆ. ಎರಡೂ ಗ್ಯಾಂಗಿನ ನಡುವೆ ಜೈಲಲ್ಲೇ ಹೊಡೆದಾಟವಾಗಿದೆ. ಪುಗಸಟ್ಟೆ ಧಿಮಾಕು ಮಾಡಲು ಹೋಗಿ ಶೂಟರ್ ಕವಿರಾಜ್ ಮತ್ತು ಅಸಗರ್ ಶಿಷ್ಯ ಖಲೀಂ ಹಾವೇರಿ ಅಸ್ಲಂನಿಂದ ಒದೆ ತಿಂದಿದ್ದಾನೆ.


ಇದು ಘರ್ಷಣೆಯ ಮೂಲ. ಇದು ಗೊತ್ತಾಗಿದ್ದೇ ಕೆಂಡಾಮಂಡಲನಾದ ವಡಗೂರು ನಾಗರಾಜ ಬೆಂಗಳೂರಿನ ರೌಡಿಗಳ ವಿರುದ್ಧ ಮುಷ್ಕರ ಮಾಡಿಸಿಬಿಟ್ಟ.

ಜೈಲರ್ ನಾಗಯ್ಯನಿಗೂ ಇದೇ ಬೇಕಿತ್ತು, ಬೆಂಗಳೂರಿನ ರೌಡಿಗಳಿದ್ದರೆ ತಾನೇ ಕೋಲಾರ ಜೈಲಿನ ಅಕ್ರಮಗಳು ಹೊರಜಗತ್ತಿಗೆ ಗೊತ್ತಾಗೋದು? ಶೂಟರ್ ಕವಿರಾಜ್, ಸೀರಿಯಲ್ ಕಿಲ್ಲರ್‌ಗಳಾದ ಶ್ಯಾಂ ಮತ್ತು ರವಿ ಇತ್ಯಾದಿ ನಾಗರಾಜನ ನಿಷ್ಠ ಪಾತಕಿಗಳನ್ನೆಲ್ಲ ಕೋಲಾರದಲ್ಲೇ ಇಟ್ಟುಕೊಂಡು ಆತನಿಗೆ ಬೇಡವಾದವರನ್ನೆಲ್ಲ ಬೆಂಗಳೂರು ರೌಡಿ ಪಟ್ಟಕಟ್ಟಿ ಕಮಾನೆತ್ತಿಬಿಟ್ಟರು. ಅಲ್ಲಿಗೆ ಇಡೀ ಕೋಲಾರ ಜೈಲೇ ನಾಗರಾಜನ ಅಡ್ಡೆಯಾದಂತಾಗಿದೆ. ಶ್ಯಾಂ ಮತ್ತು ರವಿಗೊಂದು ಮೊಬೈಲ್, ಕವಿರಾಜನ ಕೈಯಲ್ಲಿ ಮತ್ತೊಂದು ಮೊಬೈಲು, ವಡಗೂರು ನಾಗರಾಜನಿಗೆ ಇನ್ನೊಂದು, ಹಂತಕ ತಿಪ್ಪೇನಹಳ್ಳಿ ಕೃಷ್ಣಪ್ಪನಿಗೊಂದು, ರಾಬರಿ ಮುನಿಯಪ್ಪನ ಬಳಿ ಮಗದೊಂದು; ಹೀಗೆ ಕೋಲಾರ ಜೈಲೊಂದರಲ್ಲೇ ಇಪ್ಪತ್ತಕ್ಕೂ ಹೆಚ್ಚು ಮೊಬೈಲುಗಳಿವೆ. ಸಂಜೆಯಾದರೆ ಸಾಕು ವಿಸ್ಕಿ ಬಾಟಲುಗಳದ್ದೇ ಝೇಂಕಾರ. ಜೈಲಲ್ಲೇ ಸೆಟಲ್‌ಮೆಂಟುಗಳು, ಲ್ಯಾಂಡ್ ಡೀಲುಗಳು, ಯಾವತ್ತು ಬೇಕಾದರೂ ಹೊರಹೋಗಿ ಏನು ಬೇಕಾದರೂ ಮಾಡಿ ಬೇಜಾರಾದಾಗಲಷ್ಟೇ ಜೈಲಿಗೆ ಬಂದು ಮುಖ ತೋರಿಸುವ ಸ್ವಾತಂತ್ರ್ಯವನ್ನು ಇಲ್ಲಿನ ಖೈದಿಗಳಿಗೆ ಕೊಟ್ಟವರ್‍ಯಾರು?

ಜೈಲು ಮಂತ್ರಿ ಎಂ.ಪಿ. ಪ್ರಕಾಶ್ ಈಗಾದರೂ ಕಣ್ಣುಬಿಡುತ್ತಾರಾ? ■


ಪೌರಕಾರ್ಮಿಕರ ಅರಣ್ಯರೋದನ

ಕರ್ನಾಟಕ ರಾಜ್ಯ ಪೌರಸೇವಾ ನೌಕರರ ಸಮಸ್ಯೆಗಳು ಹಾಗೂ ಸೇವಾ ವಿಚಾರಗಳನ್ನು ಪರಿಹರಿಸುವಲ್ಲಿ ಸರ್ಕಾರದ ವಿಳಂಬ ಧೋರಣೆಯನ್ನು ಖಂಡಿಸಿ ಇಡೀ ರಾಜ್ಯದಾದ್ಯಂತ ಪೌರಸೇವಾ ನೌಕರರು ಮುಷ್ಕರದ ಹಾದಿ ಹಿಡಿದಿದ್ದಾರೆ. ರಾಜ್ಯದ ಇನ್ನೂರ ಇಪ್ಪತ್ನಾಲ್ಕು ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯ್ತಿಗಳ ಸಹಸ್ರಾರು ನೌಕರರು ಈ ಮುಷ್ಕರದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವುದರಿಂದ ನಗರ ಪ್ರದೇಶಗಳ ಪೌರಸೇವೆಗಳಲ್ಲಿ ಭಾರೀ ವ್ಯತ್ಯಯವಾಗಲಿದ್ದು ಇಡೀ ನಗರ ಪ್ರದೇಶಗಳ ನಾಗರಿಕರಿಗೆ ಇದರ ಬಿಸಿ ನೇರವಾಗಿ ತಟ್ಟಲಿದೆ.


ಅಲಂಗೂರು ಶ್ರೀನಿವಾಸ್

ಪೌರಸೇವಾ ನೌಕರರಿಗೆ ಇದರ ಅರಿವಿದ್ದರೂ ಇದರ ನೇರ ಹೊಣೆಯನ್ನು ಸರ್ಕಾರ ಹೊರಬೇಕು. ನಮ್ಮ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸಿ, ಪರಿಹರಿಸದ ಕಾರಣ ನಮಗೀಗ ಮುಷ್ಕರದ ಹಾದಿ ಅನಿವಾರ್ಯವಾಗಿದೆ. ಸರ್ಕಾರ ತತ್‌ಕ್ಷಣ ನಮ್ಮ ಬೇಡಿಕೆಗಳನ್ನು ಆದ್ಯತೆಯ ಮೇರೆಗೆ ಪರಿಹರಿಸದ ಹೊರತು ಮುಷ್ಕರದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಕರ್ನಾಟಕ ರಾಜ್ಯ ಪೌರ ಸೇವಾ ನೌಕರರ ಸಂಘ ಬಿಗಿ ನಿಲುವು ತಳೆದಿದೆ.

ವಿಧಾನಸಭೆಯ ಅಧಿವೇಶನದಲ್ಲಿ ಪ್ರತಿಪಕ್ಷ ನಾಯಕರಾದ ಧರ್ಮಸಿಂಗ್, ಮಲ್ಲಿಕಾರ್ಜುನ ಖರ್ಗೆ, ಮಾಜಿ ಉಪಮುಖ್ಯಮಂತ್ರಿ ಸಿದ್ಧರಾಮಯ್ಯ, ಪಿ.ಜಿ.ಆರ್. ಸಿಂಧ್ಯಾ ಮುಂತಾದವರು ಮುಷ್ಕರ ನಿರತ ಪೌರಸೇವಾ ನೌಕರರ ಬೇಡಿಕೆ ಈಡೇರಿಕೆಗೆ ಸಂಬಂಧಿಸಿದಂತೆ ಸರ್ಕಾರ ಸ್ಪಷ್ಟ ಭರವಸೆ ನೀಡದಿರುವುದನ್ನು ಖಂಡಿಸಿ ಸಭಾತ್ಯಾಗ ಮಾಡಿದ್ದಾರೆ. ಪ್ರತಿಪಕ್ಷದ ನಾಯಕರುಗಳು ದಿನಗೂಲಿ ಪೌರಸೇವಾ ನೌಕರರ ಕಾಯಂಗೊಳಿಸುವ ಅಗತ್ಯ ಕುರಿತು ಪರಿಪರಿಯಾಗಿ ವಿವರಿಸಿದಾಗಲೂ ಪೌರಾಡಳಿತ ಸಚಿವ ಆಲಂಗೂರ್ ಶ್ರೀನಿವಾಸ್ ಸ್ಪಷ್ಟ ನಿಲುವನ್ನು ತಿಳಿಸಿಲ್ಲ.


ಮಂಜುನಾಥ್

ಗೃಹ ಸಚಿವ ಎಂ.ಪಿ. ಪ್ರಕಾಶ್ ಪೌರ ಸೇವಾ ನೌಕರರ ಕಾಯಮಾತಿ ವಿಷಯಕ್ಕೆ ಸಂಬಂಧಿಸಿದಂತೆ ಸಕಾರಾತ್ಮಕವಾಗಿ ಸ್ಪಂದಿಸಬೇಕೆಂದು ಹೇಳಿದಾಗಲೂ ಆಲಂಗೂರ್ ಶ್ರೀನಿವಾಸ್ ಕಾನೂನಿನ ತೊಡಕು, ಸುಪ್ರೀಂ ಕೋರ್ಟ್ ನಿರ್ದೇಶನ ಪಾಲನೆಯ ನೆಪ ಹೇಳಿ ಸರ್ಕಾರ ಏಕಾಏಕಿ ಭರವಸೆ ನೀಡಲಾಗದು ಎಂದು ಜಾರಿಕೊಂಡಿದ್ದಾರೆ.

ಮಾಧ್ಯಮಗಳಲ್ಲಿ ಮುಷ್ಕರದಿಂದ ನಾಗರಿಕರಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಪುಂಖಾನುಪುಂಖವಾಗಿ ವರದಿಗಳು ಬರುತ್ತಿವೆಯಾದರೂ ಇಡೀ ನಗರ ಪಟ್ಟಣ ಪ್ರದೇಶಗಳ ಜನತೆಗೆ ಅತ್ಯಗತ್ಯವಾದ ಪೌರಸೇವೆಗಳನ್ನು ಒದಗಿಸುವ ಪೌರಸೇವಾ ನೌಕರರ ಪರಿಸ್ಥಿತಿಗಳು, ಮತ್ತವರ ಬೇಡಿಕೆಗಳನ್ನು ಈಡೇರಿಸದಿರುವಲ್ಲಿ ಸರ್ಕಾರದ ಪಾತ್ರ ಏನೆಂಬುದರ ಕುರಿತು ಹೆಚ್ಚಿನ ಬೆಳಕು ಚೆಲ್ಲುತ್ತಿಲ್ಲ.

ಮುಷ್ಕರ ನಿರತ ಪೌರಸೇವಾ ಕಾರ್ಮಿಕರು ಐದನೇ ವೇತನ ಆಯೋಗದ ಆರ್ಥಿಕ ಸೌಲಭ್ಯಗಳನ್ನು ಯಥಾವತ್ತಾಗಿ ಪೌರಸೇವಾ ನೌಕರರಿಗೂ ವಿಸ್ತರಿಸಬೇಕು. 'ಸಿ' ಮತ್ತು 'ಡಿ' ದರ್ಜೆಯ ದಿನಗೂಲಿ ನೌಕರರನ್ನು ಸಕ್ರಮಗೊಳಿಸಬೇಕು. ಮುಂಬಡ್ತಿ ಸೇವಾ ವಿಚಾರಗಳನ್ನು ಇತ್ಯರ್ಥಗೊಳಿಸಬೇಕು. ಟೆಂಡರ್ ಪದ್ಧತಿಯನ್ನು ರದ್ದು ಮಾಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಈ ಎಲ್ಲಾ ಬೇಡಿಕೆಗಳೂ ಕಾನೂನು ಮತ್ತು ಸೇವಾನಿಯಮಾವಳಿಗಳ ಪ್ರಕಾರವೇ ಇತ್ಯರ್ಥಗೊಳಿಸಬಹುದಂತವುಗಳಾಗಿವೆ. ಸರ್ಕಾರ ಮಾತ್ರ ಕುಂಟುನೆಪಗಳನ್ನು ಹೇಳುತ್ತಾ ಮುಂದೂಡುತ್ತಿರುವುದೇಕೆ ಎಂಬುದೇ ಅರ್ಥವಾಗುತ್ತಿಲ್ಲ.

ಪೌರಸೇವಾ ನೌಕರರ ಕಾಯಮಾತಿ, ಸೇವಾಭತ್ಯೆ ಹಾಗೂ ಮುಂಬಡ್ತಿಗಳ ಸಮಸ್ಯೆಗಳನ್ನು ಇತ್ಯರ್ಥಪಡಿಸುವಲ್ಲಿ ಪ್ರಮುಖ ತೊಡಕಾಗಿರುವುದು ಪೌರಾಡಳಿತ ನಿರ್ದೇಶನಾಲಯ, ನಗರ ಅಭಿವೃದ್ಧಿ ಇಲಾಖೆಯ ವೈಟ್‌ಕಾಲರ್ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆ ಎಂಬುದು ಮುಷ್ಕರನಿರತ ಪೌರಸೇವಾ ಕಾರ್ಮಿಕರ ಆರೋಪ.

ಐದನೇ ವೇತನ ಆಯೋಗದ ಆರ್ಥಿಕ ಸೌಲಭ್ಯ ನೀಡುವಾಗ ಅನಗತ್ಯವಾಗಿ ಅಡ್ಡಿ ಮಾಡಲಾಗಿದೆ. 1999 ರಲ್ಲಿ ನಾಲ್ಕನೇ ವೇತನ ಆಯೋಗದ ಪರಿಷ್ಕೃತ ವೇತನ ಸೌಲಭ್ಯವನ್ನು ನೀಡುವಾಗ ಸರ್ಕಾರಿ ನೌಕರರಿಗೆ ಹೊರಡಿಸಿದ್ದ ಆದೇಶವನ್ನೇ ಪೌರಸೇವಾ ನೌಕರರಿಗೂ ವಿಸ್ತರಿಸಿ ಪರಿಷ್ಕೃತ ವೇತನ ನೀಡಲಾಗಿತ್ತು. ಐದನೇ ವೇತನ ಆಯೋಗದ ಶಿಫಾರಸ್ಸುಗಳ ಜಾರಿ ಮಾಡುವಲ್ಲಿ ವಿಳಂಬವಾದ ಕಾರಣ ಸರ್ಕಾರ ನೌಕರರಿಗೆ 2006 ರಲ್ಲಿ ಕೊಡಮಾಡಲ್ಪಟ್ಟ ಶೇ. 10 ರಷ್ಟು ಮಧ್ಯಂತರ ಪರಿಹಾರವನ್ನು ಪೌರಸೇವಾ ನೌಕರರಿಗೂ ನೀಡಲಾಗಿತ್ತು.

ಪ್ರಸ್ತುತ ಐದನೇ ವೇತನ ಆಯೋಗದ ಪೂರ್ಣ ಪರಿಷ್ಕೃತ ವೇತನ ಸೌಲಭ್ಯ ನೀಡುವ ಸಂದರ್ಭದಲ್ಲಿ ಸರ್ಕಾರ ಆದೇಶವೊಂದನ್ನು ಹೊರಡಿಸಿ ಸ್ಥಳೀಯ ಸಂಸ್ಥೆಗಳ ನೌಕರರಿಗೆ ಪರಿಷ್ಕೃತ ವೇತನ ಸೌಲಭ್ಯ ವಿಸ್ತರಿಸುವ ಕುರಿತು ನಗರಾಭಿವೃದ್ಧಿ ಇಲಾಖೆಯು ಆಯಾ ಸ್ಥಳೀಯ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಬೇಕೆಂದು ಸೂಚಿಸಿತು.

ರಾಜ್ಯ ಪೌರ ಸೇವಾ ನೌಕರ ಸಂಘದ ಪದಾಧಿಕಾರಿಗಳು ಕೊನೆಗೂ ಇಲಾಖೆಯ ಸಚಿವರು ಹಾಗೂ ಕಾರ್ಯದರ್ಶಿಗಳಿಗೆ ಈ ಕುರಿತು ಹಿಂದಿನ ಆದೇಶವನ್ನು ಪ್ರಸ್ತಾಪಿಸಿ ಐದನೇ ವೇತನ ಆಯೋಗದ ಪರಿಷ್ಕೃತ ವೇತನ ಸೌಲಭ್ಯ ನೀಡಲು ಪ್ರತ್ಯೇಕ ಆದೇಶದ ಅಗತ್ಯವಿಲ್ಲ ಎಂಬುದನ್ನು ಮನವರಿಕೆ ಮಾಡಿದ ನಂತರ ಅದೂ ಮುಷ್ಕರ ಪ್ರಾರಂಭವಾದ ನಾಲ್ಕು ದಿನಗಳ ಬಳಿಕ ಈ ಪರಿಷ್ಕೃತ ವೇತನ ಸೌಲಭ್ಯವನ್ನು ಹಾಲಿ ಕಾರ್ಯನಿರ್ವಹಿಸುತ್ತಿರುವ ಪೌರ ಸೇವಾ ನೌಕರರಿಗೆ ವಿಸ್ತರಿಸಲು ತಾತ್ವಿಕವಾಗಿ ಒಪ್ಪಿದೆ. ಇದೇ ಸೌಲಭ್ಯವನ್ನು ನಿವೃತ್ತ ಸರ್ಕಾರಿ ನೌಕರರಿಗೆ ವಿಸ್ತರಿಸಿದಂತೆ ನಿವೃತ್ತ ಪೌರ ಸೇವಾ ನೌಕರರಿಗೂ ವಿಸ್ತರಿಸಬೇಕೆಂಬ ಮನವಿಗೆ ಸ್ಪಂದಿಸಿಲ್ಲ. ಈ ತಾರತಮ್ಯ ಯಾಕೆ?

ದಿನಗೂಲಿ ನೌಕರರ ಕಾಯಂ


ಸ್ಥಳೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರನ್ನು ಸುಪ್ರೀಂಕೋರ್ಟ್ ಆದೇಶದ ಪರತ್ತುಗಳ ಪ್ರಕಾರವೇ ಸಕ್ರಮಗೊಳಿಸಲು ಯಾವ ಅಡತಡೆಯೂ ಇಲ್ಲ. ಸರ್ಕಾರವೇ 15.11.06 ರಲ್ಲಿ ಆದೇಶವೊಂದನ್ನು ಹೊರಡಿಸಿ 1.1.86 ಮತ್ತು ಅನಂತರ ವಿವಿಧ ದರ್ಜೆಗಳಲ್ಲಿ ಹಂಗಾಮಿಯಾಗಿ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರ ಸೇವೆಯನ್ನೂ ಸಕ್ರಮಗೊಳಿಸುವ ಬಗ್ಗೆ ಸಮಿತಿಗಳನ್ನು ರಚಿಸಿ ಸರ್ವೋಚ್ಚ ನ್ಯಾಯಾಲಯ ನೀಡಿರುವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲು ಸೂಚಿಸಿತ್ತು.

ಇದರ ಪ್ರಕಾರ ಕಳೆದ 25.1.2007 ರೊಳಗೆ ಜಿಲ್ಲಾಧಿಕಾರಿಗಳು 'ಡಿ' ಗ್ರೂಪ್ ನೌಕರರನ್ನು, ಪೌರಾಡಳಿತ ನಿರ್ದೇಶಕರು 'ಸಿ' ಗ್ರೂಪ್ ನೌಕರರನ್ನೂ ಮತ್ತು ಸರ್ಕಾರ 'ಸಿ' ಗ್ರೂಪ್ (ತಾಂತ್ರಿಕ) ದಿನಗೂಲಿ ನೌಕರರನ್ನೂ ಸಕ್ರಮಗೊಳಿಸಿ ಆದೇಶ ಹೊರಡಿಸಬೇಕಿತ್ತು.

ಸುಮಾರು 19 ಜಿಲ್ಲೆಗಳ ಜಿಲ್ಲಾಧಿಕಾರಿಗಳು 'ಡಿ' ಗ್ರೂಪ್ ನೌಕರರ ಸಕ್ರಮಕ್ಕೆ ಮಾತ್ರ ಕ್ರಮ ಕೈಗೊಂಡಿದ್ದಾರೆ. ಇನ್ನೂ 8 ಜಿಲ್ಲೆಗಳ ಜಿಲ್ಲಾಧಿಕಾರಿಗಳು 'ಡಿ' ಗ್ರೂಪ್ ನೌಕರರ ಸಕ್ರಮಗೊಳಿಸಲು ಪೂರ್ವಭಾವಿಯಾಗಿ ತೆಗೆದುಕೊಳ್ಳಬೇಕಾದ ಪ್ರಾಥಮಿಕ ಕ್ರಮಗಳನ್ನು ಕೈಗೊಂಡಿಲ್ಲ, ಸರ್ಕಾರದ ಆದೇಶದ ಗಡುವು ಮೀರಿದ್ದರೂ ಕೆಲಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು, ಮುಖ್ಯಾಧಿಕಾರಿಗಳು ಮಾಹಿತಿಯನ್ನು ಜಿಲ್ಲಾಮಟ್ಟದ ಸಭೆಗಳಿಗೆ ಒದಗಿಸಿಲ್ಲ, ಜಿಲ್ಲಾ ನಗರ ಅಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರುಗಳು ಸ್ಥಳೀಯ ಸಂಸ್ಥೆಗಳಿಂದ ಸಕಾಲಕ್ಕೆ ಮಾಹಿತಿ ಪಡೆದು ಸಭೆಗಳಲ್ಲಿ ಮಂಡಿಸಿಲ್ಲ, ಕೆಲ ಜಿಲ್ಲಾಧಿಕಾರಿಗಳು ಸುಪ್ರೀಂಕೋರ್ಟ್ ಪ್ರಕಾರ ನಾಲ್ಕು ಪರತ್ತುಗಳನ್ನು ಪೂರೈಸಿದ 'ಸಿ' ಗ್ರೂಪ್ ದಿನಗೂಲಿ ನೌಕರರ ಪ್ರಸ್ತಾವನೆಯನ್ನು ಪೌರಾಡಳಿತ ನಿರ್ದೇಶಕರಿಗೆ ಸಲ್ಲಿಸಿದ್ದರೂ ಈ ಕ್ಷಣದವರೆಗೂ ಸಕ್ರಮಗೊಳಿಸಲಾಗಿಲ್ಲ.

ಒಟ್ಟು ದಿನಗೂಲಿ ನೌಕರರನ್ನು ಕಾಯಂಗೊಳಿಸುವ ಅವಕಾಶಗಳಿದ್ದಾಗಲೂ ಬೇರೆಬೇರೆ ಹಂತಗಳಲ್ಲಿ ಅಧಿಕಾರಿ ವರ್ಗದ ನಿಸ್ಸೀಮ ನಿರ್ಲಕ್ಷ್ಯ ಧೋರಣೆಯಿಂದಾಗಿ ದಿನಗೂಲಿ ನೌಕರರ ಸಕ್ರಮಗೊಳಿಸುವ ವಿಷಯ ಮುಂದೂಡಲ್ಪಡುತ್ತಲೇ ಇದೆ.

ಕರ್ನಾಟಕ ಸ್ಥಳೀಯ ಸಂಸ್ಥೆ ಕಾಯ್ದೆ 1973 ರ ಪ್ರಕಾರ ನಿಯಮ 11, ಷೆಡ್ಯೂಲ್ 11 ರಲ್ಲಿ ನಿಗದಿಪಡಿಸಿದ ಹುದ್ದೆಗಳಲ್ಲಿ ನೀರು ಸರಬರಾಜು ಮತ್ತು ಇತರೆ ಹುದ್ದೆಗಳು ಇಲ್ಲದೇ ಇರುವುದರಿಂದ ಈ ನೌಕರರನ್ನು ಸಕ್ರಮಗೊಳಿಸಿಲ್ಲ. ಇದು ಕಾನೂನು ತೊಡಕಿನ ಪ್ರಶ್ನೆಯೇನೋ ಹೌದು. ಆದರೆ 10 ವರ್ಷ ಪೂರ್ಣಗೊಂಡಿದ್ದರೂ ಹುದ್ದೆಗಳು ಖಾಲಿ ಇಲ್ಲ ಎಂಬ ಒಂದೇ ಕಾರಣದಿಂದ ಅರ್ಹ ನೌಕರರನ್ನು ಕಾಯಂಗೊಳಿಸದಿರುವುದು ಯಾವ ಧೋರಣೆ.


ನಾರಾಯಣಚಾರ್

ರಾಜ್ಯ ಪೌರಸೇವಾ ನೌಕರರ ಸಂಘದ ಅಧ್ಯಕ್ಷ ಜಿ.ಎಸ್. ಮಂಜುನಾಥ್ "ಸರ್ಕಾರಕ್ಕೆ ದಿನಗೂಲಿ ನೌಕರರನ್ನು ಕಾಯಂಗೊಳಿಸುವ ಇಚ್ಛಾಶಕ್ತಿಯನ್ನು ನಿಜವಾಗಿ ಹೊಂದಿದ್ದರೆ ಕಾನೂನು ತೊಡಕುಗಳ ನಿವಾರಣೆ ಮಾಡಿಕೊಂಡು ಸಕ್ರಮಗೊಳಿಸಬಹುದಿತ್ತು. ಸ್ಥಳೀಯ ಸಂಸ್ಥೆಗಳಲ್ಲಿ 10 ಸಾವಿರ ಹುದ್ದೆಗಳು ಖಾಲಿ ಇವೆ. ಪ್ರಸ್ತುತ 6400 ದಿನಗೂಲಿ ನೌಕರರನ್ನು ಕಾಯಂಗೊಳಿಸಿ ಮಿಕ್ಕ ಖಾಲಿ ಹುದ್ದೆಗಳಿಗೆ ನೇರನೇಮಕಾತಿ ಮಾಡಿಕೊಳ್ಳಲು ಅವಕಾಶ ಇದ್ದೇ ಇದೆ" ಎನ್ನುತ್ತಾರೆ.

ಟೆಂಡರ್ ಪದ್ಧತಿ: ದಿನಗೂಲಿ ನೌಕರರ ಶೋಷಣೆ


ತಿಥಿಯೂಟದೊಂದಿಗೆ ಪ್ರತಿಭಟನೆ

ಪೌರಸಭೆಯ ನೇಮಕಾತಿ ನಿಯಮಾವಳಿಗಳ ಪ್ರಕಾರ ಪುರಸಭೆ ಹಾಗೂ ಪಟ್ಟಣ ಪಂಚಾಯತ್‌ಗಳಲ್ಲಿ ಸ್ವಚ್ಛತೆಗೆ ಟೆಂಡರ್ ಕರೆಯಲು ಅವಕಾಶವಿಲ್ಲ. ನಗರಸಭೆಗಳಲ್ಲಿ ಮಾತ್ರ ಶೇ. 50 ರಷ್ಟು ಟೆಂಡರ್‌ಗೆ ಅವಕಾಶವಿದೆ. ಆದರೆ ಬಹುತೇಕ ಸ್ಥಳೀಯ ಸಂಸ್ಥೆಗಳಲ್ಲಿ ಈ ನಿಯಮಾವಳಿಗೆ ವಿರುದ್ಧವಾಗಿ ಟೆಂಡರು ಮೂಲಕ ಸ್ವಚ್ಛತಾ ಕೆಲಸ ನಿರ್ವಹಿಸಲಾಗುತ್ತಿದ್ದು ದಿನಗೂಲಿ ನೌಕರರನ್ನು ಟೆಂಡರುದಾರರು ಶೋಷಿಸುತ್ತಿದ್ದಾರೆ.

ಈ ಸ್ವಚ್ಛತಾ ಕೆಲಸಗಳಲ್ಲಿ ಶೇ. 90 ಕ್ಕೂ ಹೆಚ್ಚು ನೌಕರರು ದಲಿತ ಸಮುದಾಯಕ್ಕೆ ಸೇರಿದವರೇ ಆಗಿದ್ದಾರೆ. ಟೆಂಡರುದಾರರು ತಮಗಿಷ್ಟಬಂದಂತೆ ನೀಡುವ ವೇತನ ಪಡೆದು ಅತ್ಯಂತ ಅಸಹನೀಯ ಹಾಗೂ ಒತ್ತಡದ ವಾತಾವರಣದಲ್ಲಿ ಕೆಲಸ ಮಾಡಬೇಕಾದ ಪರಿಸ್ಥಿತಿ ಇದೆ. ಈ ಟೆಂಡರು ಪದ್ಧತಿಯೆಂಬುದು ಅಪ್ಪಟ ದಲಿತ ವಿರೋಧಿ ನಿಲುವಾಗಿದೆ. ಸರ್ಕಾರ ಇದನ್ನು ಗಂಭೀರ ಪರಿಗಣಿಸಿ ಟೆಂಡರು ಪದ್ಧತಿ ಕೈಬಿಟ್ಟು ಈ ನೌಕರರನ್ನು ಸಕ್ರಮಗೊಳಿಸಬೇಕು.

ಮುಂಬಡ್ತಿ ತಾರತಮ್ಯ

ಪೌರಾಡಳಿತ ನಿರ್ದೇಶನಾಲಯದ ಮುಂಬಡ್ತಿಯನ್ನು ನೀಡುವಾಗ ಜೇಷ್ಠತಾ ಪಟ್ಟಿಯನ್ನು ಸಂಪೂರ್ಣವಾಗಿ ಕಡೆಗಣಿಸಿ ಲಕ್ಷಗಟ್ಟಲೇ ಲಂಚಕೊಟ್ಟ ನೌಕರರಿಗೆ ಮುಂಬಡ್ತಿ ನೀಡಲಾಗಿದೆ. ಹಿರಿಯರನ್ನು ಕಡೆಗಣಿಸಿ, ಕಿರಿಯರಿಗೆ ಮುಂಬಡ್ತಿ ನೀಡಿರುವ ಬಹಳಷ್ಟು ಪ್ರಕರಣಗಳು ನಿರ್ದೇಶನಾಲಯದಲ್ಲಿ ಬಾಕಿ ಇವೆ. ಇನ್ನೂ ಕೆಲ ನೌಕರರು ನ್ಯಾಯಾಲಯಕ್ಕೆ ಹೋಗಿ ಮುಂಬಡ್ತಿ ಆದೇಶಗಳನ್ನು ಪಡೆದಿದ್ದಾರೆ.

ಮುಂಬಡ್ತಿಯಿಂದ ವಂಚಿತನಾಗಿರುವ ಪ್ರತಿಯೊಬ್ಬ ನೌಕರನೂ ಹೋರಾಟ ಮಾಡಿಯೇ ನ್ಯಾಯ ಪಡೆದುಕೊಳ್ಳುವ ಈ ಪರಿಹಾರಕ್ಕೆ ತಡೆಹಾಕಿ ಸರ್ಕಾರ ಒಂದು ಸಮಿತಿಯನ್ನು ರಚಿಸಿ ಸೇವಾ ವಿಚಾರದಲ್ಲಿ ಆಗಿರುವ ಈ ಅನ್ಯಾಯವನ್ನು ಸರಿಪಡಿಸಬೇಕೆಂಬ ಬೇಡಿಕೆಯನ್ನು ಸರ್ಕಾರ ಇದುವರೆಗೂ ಪರಿಗಣಿಸಿಲ್ಲ.

ವೃಂದ ಮತ್ತು ನೇಮಕಾತಿಯ ಅನುಪಾತವನ್ನು ಉಲ್ಲಂಘಿಸಿ ಸಹಾಯ ಕಾರ್ಯಪಾಲ ಅಭಿಯಂತರು (ಎಇಇ)ಗಳಿಗೆ ಶೇ. 100 ರಷ್ಟು ಮುಂಬಡ್ತಿ ನೀಡಿರುವ ಸರ್ಕಾರ, ಪೌರಸೇವಾ ನೌಕರರಿಗೆ ಮಾತ್ರ ಅನುಪಾತದ ಪ್ರಕಾರವೇ ಮುಂಬಡ್ತಿ ನೀಡುವುದಾಗಿ ಹೇಳುತ್ತಿದೆ. ಯಾವಾವುದೋ ಇಲಾಖೆಯ ನೌಕರರನ್ನು ನಿಯೋಜಿಸುವ ಬದಲು ಮುಂಬಡ್ತಿಯಲ್ಲಿ ನೇರ ನೇಮಕಾತಿಗೆ ಮೀಸಲಿಟ್ಟಿರುವ ಹುದ್ದೆಗಳಿಗೆ ಹಿರಿಯ ಅನುಭವಿ ಪೌರಸೇವಾ ನೌಕರರನ್ನು ಮುಂಬಡ್ತಿ ಮಾಡಿಕೊಳ್ಳುವಲ್ಲಿ ಇರುವ ಅಡ್ಡಿ ಏನು? ಕಂತೆಗಟ್ಟಲೇ ಹಣ ಒಯ್ದು ಮುಂಬಡ್ತಿ ಪಡೆಯುವ ಇಂಜಿನಿಯರುಗಳ ಮುಂದೆ ಪೌರಸೇವಾ ನೌಕರರ ಮುಂಬಡ್ತಿ ವಿಚಾರ ಇತ್ಯರ್ಥವಾಗಲು ಸಾಧ್ಯವೇ? ಈ ಅನ್ಯಾಯ-ತಾರತಮ್ಯ ಪ್ರಶ್ನಿಸಿದರೆ ಇಂಜಿಯರುಗಳಿಗೆ ಬಡ್ತಿ ನೀಡುವುದರ ವಿರುದ್ಧ ಪೌರಸೇವಾ ನೌಕರರು ಹೋರಾಟ ಮಾಡುತ್ತಿದ್ದಾರೆಂದು ಒಡೆದಾಳುವ ಕೆಲಸವನ್ನು ಹಿರಿಯ ಅಧಿಕಾರಿಗಳು ಮಾಡುತ್ತಿದ್ದಾರೆ.

ಬಿಬಿಎಂಪಿ ಕುತ್ತು

ಕಳೆದ ಜನವರಿಯಲ್ಲಿ ಘೋಷಣೆಯಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 5 ವಲಯಗಳಲ್ಲಿ ಪೌರಸೇವಾ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಘೋಷಣೆಯಾದ ತಕ್ಷಣ ಬಿಬಿಎಂಪಿಯ ಹಿರಿಯ ಅಧಿಕಾರಿಗಳು ಮಾಡಿದ ಕೆಲಸವೆಂದರೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಪೌರಸೇವಾ ನೌಕರರ ಸ್ಥಳಗಳಲ್ಲಿ ಹಳೆಯ ಮಹಾನಗರ ಪಾಲಿಕೆಯಲ್ಲಿನ ನೌಕರರಿಗೆ ಮುಂಬಡ್ತಿ ನೀಡಿ ನಿಯೋಜಿಸಿದ್ದು. ಹೀಗೆ ನಿಯೋಜಿಸುವಾಗ ಪೌರಸೇವಾ ವೃಂದದ ರೆವಿನ್ಯೂ ಆಫೀಸರ್, ಕೆಎಂಎಸ್ ಅಧಿಕಾರಿಗಳು, ಅಧಿಕಾರ ಮೊಟಕುಗೊಳಿಸಿ ಹಾಲಿ ಇರುವ ವೇತನ ಶ್ರೇಣಿಗಿಂತ ಕಡಿಮೆ ವೇತನ ಶ್ರೇಣಿಯ ಹುದ್ದೆಗಳನ್ನು ನೀಡಲಾಗಿದೆ. ಇದರಿಂದ ಹದಿನೈದು ಇಪ್ಪತ್ತು ವರ್ಷಗಳಷ್ಟು ಸುದೀರ್ಘ ಸೇವೆ ಸಲ್ಲಿಸಿದ ಪೌರಸೇವಾ ನೌಕರರು ಮುಂಬಡ್ತಿ ಅವಕಾಶದಿಂದ ವಂಚಿತರಾಗಿದ್ದಾರೆ.

ರಾಜ್ಯ ಪೌರಸೇವಾ ನೌಕರರ ಸಂಘದ ಪದಾಧಿಕಾರಿಗಳು ಹೊಸದಾಗಿ ಜೇಷ್ಠತಾಪಟ್ಟಿ ತಯಾರಿಸಿ ಪೌರಸೇವಾ ನೌಕರರಿಗೂ ಮುಂಬಡ್ತಿ ನೀಡಬೇಕೆಂಬ ಅಹವಾಲು ಸಲ್ಲಿಸಿದಾಗ ಮುಂಬಡ್ತಿ ಆದೇಶವನ್ನು ರದ್ದುಪಡಿಸುವ ನಾಟಕವಾಡಿ ಅಳಿಯನಲ್ಲ ಮಗಳಗಂಡ ಎಂಬಂತೆ ಮುಂಬಡ್ತಿ ಹೊಂದಿರುವ ನೌಕರರನ್ನು ಅದೇ ಹುದ್ದೆಗಳಲ್ಲಿ ನಿಯಮಾವಳಿ 68 ರ ಪ್ರಕಾರ ಸ್ವಂತವೇತನ ಶ್ರೇಣಿಯ ಮೇಲೆ ಮುಂದುವರಿಸಲಾಗಿದೆ. ವಿಪರ್ಯಾಸವೆಂದರೆ ಬಿಬಿಎಂಪಿಯಲ್ಲಿ ಕ್ಲಾಸ್ 1, ಕ್ಲಾಸ್ 2 ಹುದ್ದೆಗಳನ್ನು ಸೃಷ್ಟಿಸಲಾಗಿದೆಯೇ ವಿನಃ ಅಗತ್ಯಸೇವೆಗಳ ಭಾಗವಾಗಿರುವ ಎರಡು ಸಾವಿರ ದಿನಗೂಲಿ ನೌಕರರನ್ನು ಸಕ್ರಮಗೊಳಿಸುವತ್ತ ಗಮನಹರಿಸಿಲ್ಲ. ಸರ್ಕಾರ ಮಾತ್ರ ಸರ್ಕಾರ ಮಾಡಬೇಕಾದುದನ್ನೆಲ್ಲಾ ಮಾಡಿದೆ. ಪೌರಸೇವಾ ನೌಕರರು ಮಾತುಕತೆಗೆ ಒಪ್ಪುತ್ತಿಲ್ಲ. ಅನಗತ್ಯವಾಗಿ ಮುಷ್ಕರ ನಡೆಸುತ್ತಿದ್ದಾರೆಂದು ಸಾರ್ವಜನಿಕ ಪ್ರಕಟಣೆ ನೀಡಿ ಮುಷ್ಕರನಿರತ ಪೌರಸೇವಾ ನೌಕರರ ವಿರುದ್ಧ ಸಾರ್ವಜನಿಕರ ಅಸಮಾಧಾನವನ್ನು ತಿರುಗಿಸುವ ಪ್ರಯತ್ನ ಮಾಡುತ್ತಿದೆ. ಇದು ಸಮ್ಮಿಶ್ರ ಸರ್ಕಾರದ ಕುತಂತ್ರವಲ್ಲದೇ ಬೇರೇನೂ ಅಲ್ಲ. ಪೌರಸೇವಾ ನೌಕರರು ಮಾತ್ರ ಬೇಡಿಕೆ ಈಡೇರಿಸಬೇಕೆಂದು ಪಟ್ಟು ಸಡಿಲಿಸುವ ಲಕ್ಷಣಗಳು ಗೋಚರಿಸುತ್ತಿಲ್ಲ.

-ವರದಿಗಾರ

ಮೂಲೆ ಸೇರಿರುವ ಐಪಿಡಿ ಸಾಲಪ್ಪ ಶಿಫಾರಸ್ಸುಗಳು

ಪೌರಸೇವಾ ನೌಕರರು ಅತ್ಯಂತ ಕಷ್ಟಕರ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಾರೆಂಬ ಹಿನ್ನೆಲೆಯಲ್ಲಿ ಪೌರ ಕಾರ್ಮಿಕರ ರಕ್ಷಣೆಯ ದೃಷ್ಟಿಯಿಂದ 1972 ರಲ್ಲಿ ಐಪಿಡಿ ಸಾಲಪ್ಪನವರ ನೀಡಿದ ಶಿಫಾರಸ್ಸು ವರದಿಯನ್ನು ಎಲ್ಲಾ ಸರ್ಕಾರಗಳು ಕಡೆಗಣಿಸಿವೆ.

- ಈ ಶಿಫಾರಸ್ಸುಗಳ ಪ್ರಕಾರ ಪೌರಸೇವಾ ಕಾರ್ಮಿಕರಿಗೆ ಗಮ್‌ಬೂಟ್ಸ್, ಹ್ಯಾಂಡ್ ಗ್ಲೌವ್ಸ್, ಮಾಸ್ಕ್ ಹಾಗೂ ಅಂಡರಗ್ರೌಂಡ್ ಡ್ರೈನೇಜ್ ಸಿಸ್ಟಮ್‌ನಲ್ಲಿ ಕಾರ್ಯನಿರ್ವಹಿಸುವವರಿಗೆ ಪೂರ್ಣಪ್ರಮಾಣದ ಬಾಡಿಗ್ಲೋವ್ಸ್ ಕೊಡಬೇಕು.
- ಪ್ರತಿ ಮೂರು ತಿಂಗಳಿಗೊಮ್ಮೆ ಡಿಸ್ಟ್ರಿಕ್ಟ್ ಸರ್ಜನ್‌ರವರ ಹಂತದ ವೈದ್ಯರುಗಳಿಂದ ಪೌರಕಾರ್ಮಿಕರ ಆರೋಗ್ಯ ತಪಾಸಣೆ ನಡೆಸಿ, ಕಾರ್ಮಿಕರ ವೈದ್ಯಕೀಯ ಸ್ಥಿತಿಗತಿಗಳ ಬಗ್ಗೆ ವರದಿ ನೀಡಬೇಕು.
- ಶೇ. 18 ರ ಅನುದಾನದಲ್ಲಿ ಉಚಿತ ನಿವೇಶನ ಮತ್ತು ಮನೆ ನಿರ್ಮಿಸಿ ಕೊಡಬೇಕು. ಇಂತಹ ಹಲವು ಶಿಫಾರಸ್ಸುಗಳನ್ನೂ ಜಾರಿ ಮಾಡಬೇಕೆಂಬ ಸರ್ಕಾರಿ ಆದೇಶವೇನೋ ಇದೆ. ಯಾವ ಸ್ಥಳೀಯ ಸಂಸ್ಥೆಗಳಲ್ಲೂ ಇವನ್ನು ಜಾರಿಗೊಳಿಸಿಲ್ಲ, ಜಾರಿಗೊಳಿಸದ ಪೌರಾಯುಕ್ತರು, ಮುಖ್ಯಾಧಿಕಾರಿಗಳ ಮೇಲೆ ಕಾನೂನುಕ್ರಮ ತೆಗೆದುಕೊಂಡ ನಿದರ್ಶನಗಳೂ ಇಲ್ಲ.

ಲಿಂಗಾಯತರಿಗೆ ಬಸವಣ್ಣ ಬಲಿ! ಯಡ್ಡಿ ಪಿತೂರಿ



'ಲಿಡು ದೇವಾ ಹೊರಗಣವರು' ಕೃತಿಯನ್ನು ನಿಷೇಧಿಸಬೇಕೆಂದು ಕೋ-ಚಿಚಿ ಸರ್ಕಾರ ನಿರ್ಧರಿಸಿಕೊಂಡಾಗಿತ್ತು, ಅದಕೆ ಅವಕಾಶ್ಮಿ ಮೊದಲೇ ಲೇಖಕ ಬಂಜಗೆರೆ ಜಯಪ್ರಕಾಶ್ 'ಪುಸ್ತಕದ ಈಗಿನ ಆವೃತ್ತಿಯನ್ನು ಹಿಂತೆಗೆಯುವುದಾಗಿಯೂ ಮುಂದೆ ಅಗತ್ಯಾನುಸಾರ ಪರಿಷ್ಕರಿಸಿ ಪ್ರಕಟಿಸುವುದಾಗಿಯೂ' ಹೇಳಿದ್ದಾರೆ.

ಈ ಬೆಳವಣಿಗೆಯಿಂದ ಪ್ರಗತಿಪರರಿಗೆ ಒಂದಷ್ಟು ವಿಷಾದವೆನಿಸಬಹುದು. ಆದರೆ ರಾಜಕೀಯವಾಗಿ ಇದರ ಪರಿಣಾಮ ಬೇರೆಯೇ ಇದೆ. ಉದಾಹರಣೆಗೆ ಜಯಪ್ರಕಾಶ್‌ರ ಈ ನಿರ್ಧಾರದಿಂದ ಉಪಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಭಾರಿ ನಿರಾಶೆಯಾಗಿದೆ. ದೇವೇಗೌಡ, ಈಶ್ವರಪ್ಪ ಮುಂತಾದ ಯಡ್ಡಿ ವಿರೋಧಿಗಳಿಗೆ ನಿರಾಳ ಎನಿಸಿದೆ. ವೀರಶೈವ ಮಹಾಸಭಾ ನಾಯಕ ಭೀಮಣ್ಣ ಖಂಡ್ರೆಗೆ ಖುಷಿ-ಬೇಸರ ಎರಡೂ ಆಗುತ್ತಿದೆ.

ಯಾಕೆ ಗೊತ್ತಾ?

ಅನುದೇವಾ ವಿರುದ್ಧ ಲಿಂಗಾಯತರನ್ನು ಎತ್ತಿಕಟ್ಟುವಂತೆ ಯಡ್ಡಿ ಕೊಟ್ಟಿದ್ದ 1 ಕೋಟಿ ದುಡ್ಡು ತನ್ನ ಜೇಬಲ್ಲೆ ಉಳಿಯಿತು ಎಂದು ಖುಷಿ. ಅದೇರೀತಿ ಈ ಹೋರಾಟದ ನೆಪದಲ್ಲಿ ಇನ್ನೊಂದಿಷ್ಟು ದುಡ್ಡುತ್ತುವ, ಟಿವಿಗಳಲ್ಲಿ ಮಿಂಚುವ ಅವಕಾಶ ತಪ್ಪಿತಲ್ಲಾ ಎಂಬ ಬೇಸರ ಖಂಡ್ರೆಗೆ.

ಅನುದೇವಾ ಬಿಡುಗಡೆಯಾದಾಗ ವಿವಾದ ಏಳುವುದೇ ಆದಲ್ಲಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಆಗಬೇಕಿತ್ತು, ಮೊದಮೊದಲು ಭಜರಂಗದಳದ ಸಂಶೋಧಕ ಡಾ. ಎಂ. ಚಿದಾನಂದಮೂರ್ತಿ, ಅಸಲಿ ಸಂಶೋಧಕ ಕಲ್ಬುರ್ಗಿ

ಆಗ ಯಡ್ಡಿ ಬಳಸಿಕೊಂಡಿದ್ದೇ 'ಅನುದೇವಾ' ವಿವಾದವನ್ನು.

ಕಳೆದ ಒಂದು ತಿಂಗಳಿಂದ ಅಲ್ಲಲ್ಲಿ ಪ್ರತಿಭಟನೆ, ಬಂದ್, ಪ್ರತಿಕೃತಿ ದಹನ ನಡೆಸುತ್ತಾ ಬಂದಿದ್ದ ಅಖಿಲ ಭಾರತ ವೀರಶೈವ ಮಹಾಸಭಾ ಹಾಗೂ ಲಿಂಗಾಯತ ತುಂಡು ಲೀಡರ್‌ಗಳಿಗೆ ಮುಂದೇನು ಮಾಡಬೇಕೆಂಬ ಸ್ಪಷ್ಟ ಯೋಜನೆ ಇರಲೇ ಇಲ್ಲ, ಆಗ ರಂಗಪ್ರವೇಶ ಮಾಡಿದ್ದು ಯಡ್ಡಿ!



ಖಂಡ್ರೆ, ವಾಗೀಶ್ ಮುಂತಾದ 'ವೀರ'ಶೈವರ ಪ್ರತಿಭಟನೆ

ಕಳೆದ ವಾರ ಖಂಡ್ರೆ, ಬಿ.ಎಸ್. ಮುದ್ದಪ್ಪ ಎಸ್.ಬಿ. ಮುದ್ದಪ್ಪ ಮುಂತಾದ ವೀರಾಗ್ರಣಿ ಲಿಂಗಾಯತರನ್ನು ತಮ್ಮ ಮನೆಗೆ ಕರೆಸಿಕೊಂಡ ಯಡ್ಡಿ ಲಿಂಗಾಯತನೊಬ್ಬ ಸಿಎಂ ಆಗದಂತೆ ದೇವೇಗೌಡ ಹೇಗೆ ಪ್ಲಾನ್ ಮಾಡುತ್ತಿದ್ದಾರೆಂಬುದನ್ನು ವಿವರಿಸಿದ್ದರು. ಆಗಲೇ ಜುಲೈ 25 ರ ವಿಧಾನಸೌಧ ಮುತ್ತಿಗೆ ರಾಜಭವನ ಚಲೋ ಮುಂತಾದ ರಾಜಕೀಯಪ್ರೇರಿತ ಹೋರಾಟದ ರೂಪುರೇಷೆ ರೆಡಿಯಾಯಿತು. ರಾಜ್ಯಾದ್ಯಂತ ಲಿಂಗಾಯತರನ್ನು ಹೊರಡಿಸಲು ಯಡ್ಡಿ ಅನಾಮತ್ತಾಗಿ ಒಂದು ಕೋಟಿ ರೂಪಾಯಿ ಖರ್ಚು ಮಾಡಲು ಒಪ್ಪಿಕೊಂಡಿದ್ದರು.

ಅಂಬುಜಮ್ಮ ಎಂಬಾಕೆಯ ಕೈಯಿಂದ ಚಪ್ಪಲಿಯಲ್ಲೂ ಹೊಡೆಸಲಾಗಿತ್ತು, ಅದಕ್ಕೂ ಮುನ್ನ ಚಿನ್ನಪ್ಪ ರೆಡ್ಡಿ ಆಯೋಗದ ವರದಿ ವಿರೋಧಿಸಿ ಗೌಡರು ಒಕ್ಕಲಿಗರನ್ನು ಎತ್ತಿಕಟ್ಟಿ ಭಾರಿ ಪ್ರತಿಭಟನಾ ರ್‍ಯಾಲಿಯನ್ನು ನಡೆಸಿದ್ದರು. ಮುಂದಿನ ಅಕ್ಟೋಬರ್‌ನಲ್ಲಿ ತಮಗೆ ಮುಖ್ಯಮಂತ್ರಿ ಕುರ್ಚಿ ಸಿಗಲೇಬೇಕೆಂದರೆ ಇಂತದ್ದೇ ಕುತಂತ್ರ ಮಾಡಬೇಕಾಗಬಹುದೆಂಬ ಯೋಚನೆಯಲ್ಲೇ ಯಡ್ಡಿ 'ಅನುದೇವಾ' ವಿರೋಧಿ ಹೋರಾಟಕ್ಕೆ ಒಳಗಿಂದೊಳಗೇ ಕುಮ್ಮಕ್ಕು ನೀಡುತ್ತಾ ಬಂದರು. ಆ ಮೂಲಕ ಲಿಂಗಾಯತರನ್ನು ಒಗ್ಗೂಡಿಸುವುದು, ಕೃತಿ ನಿಷೇಧವಾಗುವಂತೆ ನೋಡಿಕೊಂಡು ತಾವೇ


ಒಂದಷ್ಟು ಪ್ರತಿಕ್ರಿಯಿಸಿದರಾದರೂ ಬೇಗನೆ ಈ ಇಷ್ಯೂ ಲಿಂಗಾಯತ ಪುಢಾರಿಗಳ ಕೈಗೆ ಹೋಗಿತ್ತು, ಹೆಚ್ಚುಕಡಿಮೆ ಅದೇ ಸಮಯದಲ್ಲಿ ರಾಜ್ಯದಲ್ಲಿ ಅಧಿಕಾರ ಹಸ್ತಾಂತರದ ವಿಚಾರವೂ ಚಲಾವಣೆಯಲ್ಲಿತ್ತು, ಮುಖ್ಯವಾಗಿ ಕುಮಾರಸ್ವಾಮಿ ಮುಖ್ಯಮಂತ್ರಿ ಗಾದಿಯಿಂದ ಇಳಿದನಂತರ ಆ ಜಾಗಕ್ಕೆ ಬರಬೇಕಿದ್ದ ಯಡ್ಡಿಗೆ ಅಡ್ಡಿ ಆತಂಕ ಎದುರಾಗತೊಡಗಿತ್ತು, ಸಚಿವ ಇಕ್ಬಾಲ್ ಅನ್ಸಾರಿ, ಶಾಸಕ ವೆಂಕಟೇಶ್, ದತ್ತ, ಬಿ.ಸಿ. ಪಾಟೀಲರೆಲ್ಲಾ ಕುಮಾರಸ್ವಾಮಿಯೇ ಮುಖ್ಯಮಂತ್ರಿಯಾಗಿ ಮುಂದುವರೆಯಬೇಕು ಎನ್ನತೊಡಗಿದ್ದರು. ಮೊನ್ನೆ ಸಚಿವ ಡಿ.ಟಿ. ಜಯಕುಮಾರ್ 'ಯಡಿಯೂರಪ್ಪನವರಿಗೆ ಮುಖ್ಯಮಂತ್ರಿ ಹುದ್ದೆ ನಿಭಾಯಿಸುವಷ್ಟು ಸಾಮರ್ಥ್ಯ ಇಲ್ಲ' ಎಂದಿದ್ದರು. ಮತ್ತೊಂದೆಡೆ ವಿಚಿತ್ರ ಬುಡಕಟ್ಟು ಫ್ಯಾಮಿಲಿಯ ದೇವೇಗೌಡ ಅಂಡ್ ಸನ್ಸ್ ಕೂಡ ದಿನಕ್ಕೊಂದು ಹೇಳಿಕೆ ನೀಡಿ ಯಡ್ಡಿಗೆ ಇನ್ನಷ್ಟು ಗಾಬರಿ ಉಂಟು ಮಾಡುತ್ತಿದ್ದರು. ಮೊದಮೊದಲು ಇದನ್ನೆಲ್ಲಾ ತಾಳ್ಮೆಯಿಂದಲೇ ಸಹಿಸಿಕೊಂಡ ಯಡ್ಡಿ ಕೊನೆಗೆ ಪ್ರತಿತಂತ್ರ ರೂಪಿಸದೆ ಹೋದರೆ ತಮಗೆ ಉಳಿಗಾಲವಿಲ್ಲಾ ಎಂಬ ನಿರ್ಧಾರಕ್ಕೆ ಬಂದರು.



ಖಂಡ್ರೆ ಕೈಗೆ ಅಷ್ಟೂ ಹಣ ಸೇರಿದೆಯೆಂಬ ಗುಮಾನಿಯೂ ವೀರಶೈವ ಮಹಾಸಭಾದ ಕೆಲ ನಾಯಕರಿಗಿದೆ. ಅದು ಹೇಗೆಂದರೆ ಕಳೆದ ಶುಕ್ರವಾರ ಬಿಜೆಪಿ ಹೈಕಮಾಂಡ್‌ನ ಯಶವಂತ ಸಿನ್ಹಾ ಬೆಂಗಳೂರಿಗೆ ಬಂದಿದ್ದಾಗ ಖಂಡ್ರೆ ಹೋಗಿ ವೆಸ್ಟ್‌ಎಂಡ್ ಹೋಟೆಲ್‌ನಲ್ಲಿ ಅವರನ್ನು ಭೇಟಿಯಾಗಿ ಬಂದಿದ್ದಾರೆ. 'ಕರ್ನಾಟಕದ ಏಕೈಕ ಲಿಂಗಾಯತ ಲೀಡರ್ ಯಡಿಯೂರಪ್ಪನವರನ್ನೇ ಮುಂದಿನ ಸಿಎಂ ಆಗಿ ಆರಿಸಬೇಕು' ಎಂದು ತಮ್ಮ ಜಾತಿ ಸಂಘದ ಲೆಟರ್‌ಹೆಡ್‌ನಲ್ಲಿ ಪತ್ರ ನೀಡಿ ಬಂದಿದ್ದಾರೆ.

ಇದು ಒಳಗಿಂದೊಳಗೇ ನಡೆದ ಕರಾಮತ್ತು, ಆದರೆ ಬಾಹ್ಯದಲ್ಲಿ ತಮ್ಮ ಜಾತಿಯ ತೋಳ್ಬಲ ತೋರಿಸದಿದ್ದಲ್ಲಿ ಗೌಡರನ್ನು ಬಗ್ಗಿಸುವುದು ಕಷ್ಟ ಎಂಬುದು ಯಡ್ಡಿಗೆ ಚೆನ್ನಾಗಿ ಗೊತ್ತಿದೆ. 1994 ರಲ್ಲಿ ದೇವೇಗೌಡ ಮುಖ್ಯಮಂತ್ರಿಯಾದಾಗಲೂ ಸುಮಾರು ಮುವತ್ತು-ನಲವತ್ತು ಸಾವಿರದಷ್ಟು ಒಕ್ಕಲಿಗರನ್ನು ವಿಧಾನಸೌಧದೆದುರು ಕರೆತಂದು ಹೆಗಡೆಯನ್ನು ಬೆದರಿಸಿ ಗೌಡರು ಸಿಎಂಪಟ್ಟ ಗಿಟ್ಟಿಸಿಕೊಂಡಿದ್ದರೆಂಬುದು ಯಡ್ಡಿಗೆ ನೆನಪಿದೆ. ಅವತ್ತು ಹೆಗಡೆ ಕೂತಿದ್ದ ಕಾರಿಗೆ ಮುಂಡ್ಕದ

ಏಕೈಕ ಲಿಂಗಾಯತ ಲೀಡರ್ ಎಂಬಂತೆ ಏಕಕಾಲದಲ್ಲಿ ಜಾತಿ ಜನಕ್ಕೂ ಮೆಸೇಜ್ ನೀಡಿ, ದೇವೇಗೌಡರಿಗೂ ಎಚ್ಚರಿಕೆ ನೀಡುವುದು ಯಡ್ಡಿಯ ಅಸಲಿ ಪ್ಲಾನ್ ಆಗಿತ್ತು. ಅನುದೇವಾ ವಿರೋಧದ ಅಲೆಯಲ್ಲಿ ಪ್ರಚೋದಿಸಲ್ಪಡುವ ಲಿಂಗಾಯತ ಜಾತಿ ಭಾವನೆಯನ್ನೇ ಮುಂದಿನ ಮೂರ್ನಾಲ್ಕು ವಾರಗಳವರೆಗೆ ಹಾಗೇ ಜೀವಂತವಾಗಿಟ್ಟುಕೊಂಡು ತಮ್ಮ ತಕ್ಷಣದ ರಾಜಕೀಯ ಉದ್ದೇಶಕ್ಕೆ ಬಳಸಬೇಕೆಂದು ಯಡ್ಡಿ ಯೋಚಿಸಿಕೊಂಡಿದ್ದರು.




ಇತ್ತ ಗೌಡರ ಪಾಳಯದಲ್ಲಿ ಈಶ್ವರಪ್ಪನನ್ನೇ ಮುಂದಿನ ಮುಖ್ಯಮಂತ್ರಿ ಮಾಡುವ ಬಗ್ಗೆ ಖಡಕ್ ಚಟುವಟಿಕೆಗಳು ಶುರುವಾಗಿದ್ದವು. ಬಿಜೆಪಿಯೊಳಗೇ ಇರುವ ಯಡ್ಡಿ ವಿರೋಧಿಗಳನ್ನು ಎತ್ತಿ ಕಟ್ಟುವುದು ನಡೆದೇ ಇತ್ತು, ಇದರ ವಾಸನೆ ಹಿಡಿದ ಯಡ್ಡಿ ಅನುದೇವಾ ನಿಮ್ಮವನೆನ್ನುತ್ತಾ ಸೀದಾ ಬಸವಣ್ಣನನ್ನೇ ಹಿಡಿದುಕೊಂಡುಬಿಟ್ಟರು.

ಗೌಡರಿಗೀಗ ಹೇಳತೀರದ ಸಂಕಟ. ಯಡ್ಡಿಗೆ ಈ ಅವಕಾಶ ಸಿಗದಂತೆ ಮಾಡಬೇಕೆಂದು ಅನುದೇವಾ ಲೇಖಕ ಬಂಜಗೆರೆ ಮೇಲೆ ನಾನಾ ರೀತಿಯ ಒತ್ತಡ ತಂದಿದ್ದಾರೆ.

ಈಶ್ವರಪ್ಪನಿಗೆ ಗೌಡರ ಬೆಂಬಲ

ಮೊನ್ನೆ ಝೀ ಕನ್ನಡ ಚಾನಲ್ ಈಶ್ವರಪ್ಪನೇ ರಾಜ್ಯದ 'ಅತ್ಯುತ್ತಮ ಮಂತ್ರಿ' ಎಂದು ಆರಿಸಿ ಭಾರಿ ಪ್ರಚಾರ ನೀಡಿದ್ದು ನಿಮಗೆ ನೆನಪಿರಬಹುದು. ಇದು ಆಕಸ್ಮಿಕವಾಗಿ ನಡೆದಿರುವ ಘಟನೆ ಅಲ್ಲ, ಅರೇಂಜ್ ಮಾಡಿದ್ದು, ಕೆಲವರು ವ್ಯವಸ್ಥಿತವಾಗಿ ಮಾಡಿದ್ದು. ಬಿಜೆಪಿಗೆ ನಿಜವಾಗಲೂ ಅಧಿಕಾರ ಹಸ್ತಾಂತರಿಸುವುದೇ ಆದರೆ ಯಡ್ಡಿ ಬದಲಾಗಿ ಈಶ್ವರಪ್ಪನೇ ಸಿಎಂ ಆಗಲಿ ಎಂದು ಗೌಡ ಮತ್ತು ಸನ್ಸ್ ಈಗಾಗಲೇ ತೀರ್ಮಾನಿಸಿಕೊಂಡಿದ್ದಾರೆ. ಹಾಗೆ ಮಾಡುವ ಮೂಲಕ ಕುರುಬ ಸಮುದಾಯದ ವಿಶ್ವಾಸ ಮತ್ತೆ ಗಳಿಸುವುದು, ಸಿದ್ಧರಾಮಯ್ಯನವರ ಉಚ್ಚಾಟನೆ ಮಾಡಿದಾಗ ಆದ ನಷ್ಟ ತುಂಬಿಕೊಳ್ಳುವ ಲೆಕ್ಕಾಚಾರ ಇದು. ಜೊತೆಗೆ ಬಿಜೆಪಿಯೊಳಗೇ ಆಂತರಿಕ ಕಚ್ಚಾಟ ಹಚ್ಚಿಕೊಟ್ಟು, ಯಡ್ಡಿಗಿಂತಾ ದುರ್ಬಲ ನಾಯಕ, ಈಶ್ವರಪ್ಪನನ್ನೇ ಸಿಎಂ ಸೀಟಿಗೆ ತಂದು ಕೂರಿಸಿದರೆ ಆತ ತಮ್ಮ ಹತೋಟಿಯಲ್ಲೇ ಇರುತ್ತಾರಲ್ಲವೆ ಎಂಬ ಇರಾದೆ ಗೌಡರದ್ದು. ಈ ಈಶ್ವರಪ್ಪ ಒಂಥರಾ ಹೌದಪ್ಪ ಆಸಾಮಿ. ಮಜಾ ಏನೆಂದರೆ ಝೀ ಟೀವಿ ಇತ್ತ ಈಶ್ವರಪ್ಪನೇ ಬೆಸ್ಟ್ ಮಿನಿಸ್ಟರ್ ಎಂದು ಬಿಂಬಿಸುತ್ತಿರುವಾಗ ಅತ್ತ ವಿಧಾನಸಭೆಯ ಅಧಿವೇಶನದಲ್ಲಿ ಜೆಡಿಎಸ್ ಸಚಿವ ಡಿ.ಟಿ. ಜಯಕುಮಾರ್ 'ಯಡಿಯೂರಪ್ಪ ಅದಕ್ಷ ಹಣಕಾಸು ಸಚಿವ' ಅಂತಾ ಝಾಡಿಸುತ್ತಿದ್ದರು.



ಇನ್ನೊಂದು ತಮಾಷೆ ಏನು ಗೊತ್ತಾ?

ಝೀ ಟೀವಿಯವರ ಹತ್ತಿರ 'ಬೆಸ್ಟ್ ಮಿನಿಸ್ಟರ್' ಅನಿಸಿಕೊಳ್ಳಲು ಸಾರಿಗೆ ಸಚಿವ ಚೆಲುವರಾಯಸ್ವಾಮಿ ಹದಿನೈದು ಲಕ್ಷ ಖರ್ಚು ಮಾಡಿಕೊಂಡಿದ್ದು! ಅಷ್ಟು ದುಡ್ಡು ಯಾರು ತಿಂದರೋ ಏನೋ!

ಚಿತ್ರದುರ್ಗದ ಶರಣರು, ಕೆ. ಮರುಳಸಿದ್ದಪ್ಪ, ಬರಗೂರು, ಇಂದೂಧರ ಮುಂತಾದವರು ಕುಳಿತು ಚರ್ಚಿಸಿ ಕೃತಿಯನ್ನು ಪರಿಷ್ಕರಿಸಿ ಮರು ಪ್ರಕಟಿಸುವುದೇ ಸರಿ, ಇಲ್ಲದಿದ್ದಲ್ಲಿ ಈ ವಿವಾದ ರಾಜಕೀಯ ದುರುದ್ದೇಶ, ಜಾತಿ ಸಂಘರ್ಷಗಳಿಗೆ ದುರ್ಬಳಕೆಯಾಗಬಹುದೆಂದು ಹೇಳಿದ್ದರ ಮೇರೆಗೆ ಜಯಪ್ರಕಾಶ್ ಅದನ್ನು ಒಪ್ಪಿಕೊಂಡಿದ್ದಾರೆ.

ತೀರಾ ಶನಿವಾರ ಸಂಜೆ ಗೃಹಸಚಿವ ಎಂ.ಪಿ. ಪ್ರಕಾಶರ ಕಚೇರಿಯಿಂದ ಬಂಜಗೆರೆ ಮನೆಗೇ ಒಂದು ಫೋನ್ ಕರೆ ಬಂದಿದೆ.

"ಪರಿಸ್ಥಿತಿ ಕೈ ಮೀರುತ್ತಿದೆ, ವಿವಾದ ಡೆಡ್‌ಲೈನ್‌ಗೆ ಬಂದು ನಿಂತಿದೆ. ನೀವೇ ಏನಾದರೂ ಪರಿಹಾರ ಸೂಚಿಸಿ ಸಹಕರಿಸಿ" ಎಂಬರ್ಥದ ಸೂಚನೆ ಅದು.

ಈ ಮೆಸೇಜಿನ ಹಿಂದಿದ್ದ ರಾಜಕೀಯ ಲೆಕ್ಕಾಚಾರಗಳೇನೆಂದು ಅರಿಯದ ಸಜ್ಜನಿಕೆಯ ಬಂಜಗೆರೆ ಆಯಿತೆಂದು ಈಗ ಕೃತಿ ಹಿಂಪಡೆದುಕೊಳ್ಳುವುದಾಗಿ ಹೇಳಿದ್ದಾರೆ. ಹೀಗೆ, ಲಿಂಗಾಯತರ ಮೂರ್ಖತನ, ಯಡ್ಡಿಯ ಅಧಿಕಾರ ದಾಹ ಹಾಗೂ ಗೌಡರ ದಾಳಕ್ಕೆ ಬಸವಣ್ಣ 'ಬಲಿ'ಯಾಗಿದ್ದಾನೆ.

-ಬಿಳಿದಾಳೆ ಈಶ

ಬಂಜಗೆರೆಯನ್ನು ಏಕಾಂಗಿಯಾಗಿಸಿದ ಪ್ರಗತಿಪರರು

ಲಿದು ಅನುದೇವಾ ವಿವಾದ ಇರಬಹುದು, ಶಾಲಾ ಮಕ್ಕಳಿಗೆ ಮೊಟ್ಟೆ ಹಂಚುವ ಕಾರ್ಯಕ್ರಮವಾಗಬಹುದು, ಬಾಬಾಬುಡನ್‌ಗಿರಿ ವಿವಾದ ಇರಬಹುದು.... ಇಂಥ ಯಾವುದೇ ಜನಪರ, ಇಷ್ಯೂಗಳನ್ನು ನಮ್ಮ ಪ್ರಗತಿಪರರು ಗೆಲ್ಲಲು ಸಾಧ್ಯವಾಗಿಲ್ಲ, ಹೋರಾಡಿ ದಕ್ಕಿಸಿಕೊಳ್ಳಬೇಕೆಂಬ ಛಾತಿಯೂ ಯಾರಲ್ಲೂ ಕಂಡುಬರಲಿಲ್ಲ.


ಇಂಥ ವಿಚಾರಗಳು ಬಂದಾಗ ಒಟ್ಟಾಗಿ ನಿಂತು ದನಿಗೂಡಿಸುವ ಬದಲಾಗಿ ಆಯಾ ವಿಚಾರಕ್ಕೆ ಸಂಬಂಧಿಸಿದ ವ್ಯಕ್ತಿಗಳನ್ನು ಜಾತಿವಾದಿ, ಕೋಮುವಾದಿಗಳ ವಿರುದ್ಧ ಸೆಣಸಾಡಲು ಬಿಟ್ಟು ಉಳಿದವರೆಲ್ಲಾ ಮೂಕಪ್ರೇಕ್ಷಕರಂತೆ ಉಳಿದುಬಿಡುವುದು ಇತ್ತೀಚಿನ ರೋಗವಾಗಿ ಹೋಗಿದೆ.

ಬಂಜಗೆರೆ ವಿಚಾರದಲ್ಲಿ ಆದದ್ದೂ ಹೀಗೇನೆ. ಖಂಡ್ರೆ, ಮಾತೆ ಮಹಾದೇವಿ ಮುಂತಾದವರೆಲ್ಲಾ ಚೀರಲು ಶುರು ಮಾಡಿದ ನಂತರ ಚಿಡ್ಡಿ ಪ್ರಮೋದ ಮುತಾಲಿಕನೂ ನೆಗೆದು ಬಂದು ಆ ಗುಂಪನ್ನು ಸೇರಿಕೊಂಡ. ಬೇರೆ ಬೇರೆ ಊರುಗಳಲ್ಲಿ ಲಿಂಗಾಯತರ ಬಂದ್, ಪ್ರತಿಭಟನೆಗಳೂ ಶುರುವಾದವು.

ಆದರೆ ಪ್ರಗತಿಪರರು ಮಾಡಿದ್ದೇನು? ಒಂದೆರಡು ಪ್ರತಿಭಟನೆ, ನಾಲ್ಕಾರು ವಿಚಾರ ಸಂಕಿರಣಗಳಾದವೆಂಬುದನ್ನು ಬಿಟ್ಟರೆ ಎಲ್ಲರ ಶಕ್ತಿ ಸಾಮರ್ಥ್ಯ ಒಗ್ಗೂಡಿಸಿ ದನಿ ಎತ್ತುವ ಪ್ರಯತ್ನ ಆಗಲೇ ಇಲ್ಲ, ಕರ್ನಾಟಕದ ಗಲ್ಲಿಗಲ್ಲಿಗಳಲ್ಲಿ ಸಮಾಜವಾದಿಗಳು, ದಲಿತ ಚಳವಳಿಗಾರರು, ಕಮ್ಯುನಿಸ್ಟರು, ಲೋಹಿಯಾ ವಾದಿಗಳಿದ್ದಾರಲ್ಲವೆ?

ಅಭಿವ್ಯಕ್ತಿ ಸ್ವಾತಂತ್ರ್ಯದ ಪರ ಹಾಗೂ ಲಿಂಗಾಯತರ ಮೇಲ್ಜಾತಿ ದುರಹಂಕಾರ ಖಂಡಿಸಲು ಯಾರು ಯಾಕೆ ಒಗ್ಗೂಡಲಿಲ್ಲ?

ಬಂಜಗೆರೆಯಂಥವರು ಏಕಾಂಗಿತನ, ಅಸಹಾಯಕತೆಯತ್ತ ದೂಡಲ್ಪಡುವುದು ಅಂತ ಸನ್ನಿವೇಶಗಳಲ್ಲೇ ತಾನೆ.



ಎಎಸ್‌ಐ ವೆಂಕಟೇಶ್
ವಿಷಾದ ಹುಟ್ಟಿಸುವ ಸಾವು

ಆಗುಂಬೆಯ ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟರ್ ವೆಂಕಟೇಶ್‌ರನ್ನು ಬಲಿ ತೆಗೆದುಕೊಂಡ ಗುಂಡುಗಳು ಪೊಲೀಸರ ಬಂದೂಕಿನಿಂದ ಹಾರಿಸಿದ್ದಾ ಅಥವಾ ನಕ್ಸಲರೇ ಕೊಂದರಾ ಎಂಬ ಗೊಂದಲ ಈಗ ಉಳಿದಿಲ್ಲ.

ನಕ್ಸಲ್ ನಿಗ್ರಹ ದಳ ಹಾಗೂ ಸ್ಥಳೀಯ ಪೊಲೀಸರ ನಡುವಿನ ಸಮನ್ವಯದ ಕೊರತೆಗೆ ಅವರು ಬಲಿಯಾಗಿದ್ದಾರೆ. ಪೋಸ್ಟ್‌ಮಾರ್ಟಂ ವರದಿ ಬಂದನಂತರ ಎಲ್ಲಾ ಸ್ಪಷ್ಟವಾಗಲಿದೆ ಎಂದು ಹೇಳುತ್ತಿದ್ದ ಉನ್ನತ ಪೊಲೀಸ್ ಅಧಿಕಾರಿಗಳೂ ಈಗ ಬಾಯೇ ತೆರೆಯುತ್ತಿಲ್ಲ.

ವೆಂಕಟೇಶ್ ನಕ್ಸಲ್ ನಿಗ್ರಹ ಪಡೆಯ ಗುಂಡಿಗೆ ಬಲಿಯಾಗಿದ್ದಾರೆ. ಈ ದುರ್ಘಟನೆಗೆ ಪ್ರಚೋದನೆ ನೀಡಿರುವ ಪ್ರಕರಣವನ್ನು ನಾವಿಲ್ಲಿ ಗಮನಿಸಿದರೆ ಮಾತ್ರ ಇನ್ನಷ್ಟು ವಾಸ್ತವಾಂಶಗಳು ಕಾಣಲು ಸಾಧ್ಯ.


ಅದು ಜುಲೈ 15 ರ ರಾತ್ರಿ ತೀರ್ಥಹಳ್ಳಿಯ ತಲ್ಲೂರಂಗಡಿಯಲ್ಲಿ ನಡೆದ ದರೋಡೆ. ಉಮೇಶ, ನಾಗೇಶ ಹಾಗೂ ಇನ್ನಿಬ್ಬರ ಮನೆಗಳಿಗೆ ನುಗ್ಗಿದ ಆರು ಜನ ಹಣ ಒಡವೆ ಕಿತ್ತುಕೊಂಡು ಹೋಗಿದ್ದರು. ಅದು ನಕ್ಸಲರ ಕೃತ್ಯ ಎಂದು ಶಂಕಿಸಲಾಗಿತ್ತು. ಆದರೆ ಮಾವೋವಾದಿಗಳು ತಾವು ದರೋಡೆ ಮಾಡಿಲ್ಲ, ಅದು ತಮ್ಮ ಸಿದ್ಧಾಂತವೂ ಅಲ್ಲ ಎಂದಿದ್ದಾರೆ. ಅಷ್ಟೇ ಅಲ್ಲ, ಶಿವಮೊಗ್ಗ ಪೊಲೀಸರ ಕುಮ್ಮಕ್ಕಿನಿಂದ ಭಜರಂಗದಳದ ನಾಟಾಕಳ್ಳರು ಈ ಡಕಾಯಿತಿ ಮಾಡಿದ್ದಾರೆಂದು ಆರೋಪಿಸಿದ್ದಾರೆ. ಮಲೆನಾಡಿನಲ್ಲಿ ಭಜರಂಗದಳದ ದೇಶಭಕ್ತರು ಗಂಧಕಳ್ಳತನ, ನಾಟಾ ಕಳ್ಳ ಸಾಗಾಣಿಕೆಯಲ್ಲಿ ಮೊದಲಿಂದಲೂ ಇದ್ದಾರೆ. ಕೆಲವರ ಮೇಲೆ ಕೇಸುಗಳೂ ದಾಖಲಾಗಿವೆ. ತೀರಾ ಇತ್ತೀಚೆಗೆ ಮಂಗಳೂರಿನ ಭಜರಂಗಿಯೊಬ್ಬ ವೇಶ್ಯಾವಾಟಿಕೆ ನಡೆಸುತ್ತಾ ಸಿಕ್ಕಿಬಿದ್ದು ಜೈಲು ಸೇರಿದ್ದಾನೆ. ಕಳೆದ ವರ್ಷ ಚಿಕ್ಕಮಗಳೂರಿನ ಕಲ್ಲುಗುಡ್ಡದಲ್ಲಿ ಇದೇ ಭಜರಂಗಿಗಳು ನಕ್ಸಲರ ಹೆಸರಲ್ಲಿ ನಾಲ್ಕು ಮನೆ ದರೋಡೆ ಮಾಡಿ ಸಿಕ್ಕಿಬಿದ್ದು ಈಗ ಕೇಸು ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ತಲ್ಲೂರಂಗಡಿ ದರೋಡೆ ಪ್ರಕರಣವನ್ನೂ ಸರಿಯಾಗಿ ಚೆಕ್ ಮಾಡಿ ನೋಡಬೇಕಿದೆ.

ಏಕೆಂದರೆ ಈ ದರೋಡೆಗಳು ನಡೆಯುವ ಕೇವಲ 5 ದಿನಗಳ ಮುಂಚೆ ಮೆಣಸಿನಹಾಡ್ಯದಲ್ಲಿ ಪೊಲೀಸರು ಐವರನ್ನು ಕೊಂದಿದ್ದು ರಾಜ್ಯಾದ್ಯಂತ ಜನಾಭಿಪ್ರಾಯ ಪೊಲೀಸರ ವಿರುದ್ಧ ತಿರುಗಿತ್ತು. ಪರಿಸ್ಥಿತಿ ಹೀಗೆ ತಮಗೇ ಅನುಕೂಲಕರವಾಗಿದ್ದಾಗ ನಕ್ಸಲರೇಕೆ ಏಕಾಏಕಿ ಡಕಾಯಿತಿ ನಡೆಸಿ ತಾವೇ ಕೆಟ್ಟ ಹೆಸರು ತಂದುಕೊಳ್ಳುತ್ತಾರೆ? ಬದಲಾಗಿ ಆದಿವಾಸಿ ಹಾಗೂ ನಕ್ಸಲರ ಪರ ಇದ್ದ ಜನರ ಸಿಂಪಥಿಯನ್ನು ಕರಗಿಸಿಬಿಡಲು ಪೊಲೀಸರ ಕುಮ್ಮಕ್ಕಿನಿಂದ ಭಜರಂಗ ದಳದವರೇ ಈ ದರೋಡೆ ನಡೆಸಿರಬಾರದೇಕೆ ಎಂಬ ತರ್ಕವೂ ಹುಟ್ಟಿಕೊಂಡಿದೆ. ಈ ಅನುಮಾನಕ್ಕೆ ಪುಷ್ಟಿ ನೀಡುವಂತೆ ಶಿವಮೊಗ್ಗದ ಪೊಲೀಸ್ ಅಧಿಕಾರಿಯೊಬ್ಬ ಕಳೆದ 10 ದಿನದಿಂದ ಕೆಲಸಕ್ಕೆ ಬರದೆ ರಜೆ ಹಾಕಿ ಓಡಾಡುತ್ತಿದ್ದ ಎಂಬುದು ಇಲ್ಲಿ ಗಮನಾರ್ಹ. ಈತ ರಾಯಚೂರಿನಲ್ಲೂ ನಕ್ಸಲರ ದನಿ ಅಡಗಿಸುವಲ್ಲಿ ನಾನಾ ಉಪಾಯ, ತಂತ್ರ ಪ್ರಯೋಗಿಸಿ ಯಶಸ್ವಿಯಾಗಿದ್ದ ಅನುಭವಿ.

ವೆಂಕಟೇಶ್ ಸಾವು ವಿಷಾದ ಹುಟ್ಟಿಸುವುದು ಈ ಹಿನ್ನೆಲೆಯಲ್ಲೇ.

ಯಾವಾಗ ತಲ್ಲೂರಂಗಡಿಯಲ್ಲಿ ಡಕಾಯಿತಿ ಪ್ರಕರಣ ಸುದ್ದಿಯಾಯಿತೋ ತೀರ್ಥಹಳ್ಳಿ, ಆಗುಂಬೆ ಸುತ್ತಮುತ್ತ 'ನಕ್ಸಲರು ಅಲ್ಲಿದ್ದರು ಇಲ್ಲಿ ನೋಡಿದೆವೆಂಬ' ಅಸಂಖ್ಯಾತ ಗಾಳಿ ಸುದ್ದಿಗಳು ಕೇಳಿಬಂದಿದ್ದವು. ಇಂಥ ನೂರೆಂಟು ರೂಮರ್‌ಗಳ ಬೆನ್ನು ಹತ್ತಿ ತಲಾಶ್ ನಡೆಸಿ ನಡೆಸಿ ಬಳಲಿದ್ದ ವೆಂಕಟೇಶರಿಗೆ ಪೊಲೀಸ್ ಡ್ಯೂಟಿ ಬಗ್ಗೆಯೇ ಒಂದು ರೀತಿಯ ಜಿಗುಪ್ಸೆ ಬಂದು ಬಿಟ್ಟಿತ್ತೆಂಬುದೂ ಸತ್ಯ. ಅಂತಹ ಮಾಹಿತಿ ಬಂದಾಗೆಲ್ಲಾ 'ಸ್ಪಾಟ್‌ಗೆ ಹೋಗ್ರಿ' ಎನ್ನುವ ಮೇಲಾಧಿಕಾರಿಗಳ ಆದೇಶ. ಹೋಗದಿದ್ದರೆ ಕರ್ತವ್ಯಲೋಪದ ಭೀತಿ. ಈ ತೊಳಲಾಟದಲ್ಲಿಯೇ ತಮ್ಮ ನಿವೃತ್ತಿ ದಿನಕ್ಕೆ ಕಾಯುತ್ತಿದ್ದ ವೆಂಕಟೇಶ್ ಜುಲೈ 17 ರ ಸಂಜೆ ಯಾವುದೋ ಮಾಹಿತಿ ಆಧರಿಸಿ ಅಕ್ಕಲಬೈಲಿಗೆ ಹೋಗಿದ್ದಾರೆ. ಮಾಹಿತಿದಾರ ದೂರದಿಂದಲೇ ಅವರಿಗೆ ಮನೆ ತೋರಿಸಿ ಹೋಗಿದ್ದಾನೆ. ಹೆಚ್ಚಿನ ಪೊಲೀಸರಿದ್ದರೆ ಉತ್ತಮ ಎಂದು ಯೋಚಿಸಿದ ವೆಂಕಟೇಶ್ ಎಎನ್‌ಎಫ್‌ಗೆ ಸುದ್ದಿ ನೀಡಿದ್ದಾರೆ. ಅದರಂತೆ ಬರಬೇಕಿದ್ದ ಸಿಬ್ಬಂದಿಗಾಗಿ ಸುರಿಮಳೆಯಲ್ಲಿ ಕಾಯುತ್ತಾ, ಅರೆಗತ್ತಲಲ್ಲಿ ಅದರಲ್ಲೂ ಮಫ್ತಿಯಲ್ಲಿ ನಿಂತಿದ್ದ ವೆಂಕಟೇಶ್‌ಗೆ ಅದೇ ತಮಗೆ ಸಾವು ತಂದಿತೆಂದು ಹೇಗೆ ತಾನೆ ಗೊತ್ತಾಗಬೇಕು? ಇಂಥ ಸಂದರ್ಭಗಳನ್ನು ನಿಭಾಯಿಸಿ ಅನುಭವವಿರದ ವೆಂಕಟೇಶ್ ತಮ್ಮ ಇರುವಿಕೆಯನ್ನು ಸಿಗ್ನಲ್ ಮೂಲಕ ತಿಳಿಸಿದ ಕೂಡಲೇ ನಕ್ಸಲ್ ನಿಗ್ರಹ ದಳದ ಹುಂಬ ಹುಡುಗರು ನೇರ ಅವರಿಗೇ ಗುಂಡು ಹೊಡೆದಿದ್ದಾರೆ. ತಾನು ಒಬ್ಬ ಪೊಲೀಸ್ ಎಂದು ಹೇಳಿಕೊಳ್ಳುವಷ್ಟು ಅವಕಾಶ ಸಿಗದೆ ವೆಂಕಟೇಶ್ ಸತ್ತಿದ್ದಾರೆ.

ಹಣ ಮಾಡುವ ಬಗ್ಗೆ ವೆಂಕಟೇಶರಿಗೆ ಅಷ್ಟೇನೂ ಆಸಕ್ತಿ ಇರಲಿಲ್ಲ. ಹಾಗಾಗಿ ಇಲಾಖೆಯಲ್ಲೂ ಅವರು ಯಾರಿಗೂ ಬೇಡದವರಾಗಿ ಆಗುಂಬೆ ಔಟ್‌ಪೋಸ್ಟ್‌ಗೆ ದೂಡಲ್ಪಟ್ಟಿದ್ದರು. ಅದಕ್ಕೂ ಮೊದಲು ಷಣ್ಮುಖ ಎಂಬುವರು ಅಲ್ಲಿದ್ದು ಹಾರ್ಟ್ ಅಟ್ಯಾಕ್ ಆಗಿ ತೀರಿಕೊಂಡಿದ್ದರು. ಸ್ಪೆಂಡರ್ ಬೈಕ್ ಒಂದನ್ನು ಇಟ್ಟುಕೊಂಡಿದ್ದ ವೆಂಕಟೇಶ್ "ಜನ ಯಾಕೆ ನೀರು, ರಸ್ತೆ ವಿಚಾರಕ್ಕೆಲ್ಲಾ ಗಲಾಟೆ ಮಾಡಿಕೊಂಡು ನಕ್ಸಲರನ್ನು ಕರೆಸುತ್ತಾರೆ" ಎಂದು ಹತಾಶರಾಗುತ್ತಿದ್ದದ್ದೂ ಉಂಟು. "ನಮ್ಮ ರಾಜಕಾರಣಿಗಳ್ಯಾಕೆ ಇಂಥವನ್ನು ಪರಿಹರಿಸುತ್ತಿಲ್ಲ" ಎಂತೆಲ್ಲಾ ತಮ್ಮ ಆಪ್ತರ ಬಳಿ ದುಗುಡ ತೋಡಿಕೊಂಡಿದ್ದರು. ಹೀಗೆ ಭಜರಂಗದಳ ಸೃಷ್ಟಿಸಿದ ದರೋಡೆ ಪ್ರಕರಣ ಒಬ್ಬ ಪೊಲೀಸ್ ಅಧಿಕಾರಿಯನ್ನೇ ಬಲಿ ತೆಗೆದುಕೊಳ್ಳುವ ಮೂಲಕ ದುರಂತ ಅಂತ್ಯ ಕಂಡಿದೆ.



ಎಎಸ್‌ಐ ವೆಂಕಟೇಶ್

ಈ ನಕ್ಸಲ್ ನಿಗ್ರಹ ಪಡೆ ಹಾಗೂ ಕೂಂಬಿಂಗ್ ಆಪರೇಷನ್‌ನಲ್ಲಿ ಭಾಗವಹಿಸುತ್ತಿರುವವರ ಮುಖ, ಹಾವಭಾವಗಳನ್ನು ನೀವೂ ಒಮ್ಮೆ ಟಿವಿಯಲ್ಲಿ ಗಮನವಿಟ್ಟು ನೋಡಿ. ಅದರಲ್ಲಿ ಬಹುತೇಕರು 25 ವಯಸ್ಸಿನ ಯುವಕರೇ ಆಗಿದ್ದಾರೆ. ತಾವೊಂದು ಥ್ರಿಲ್ಲಿಂಗ್ ಆದ, **heroic** ಆದ ಸಾಹಸದಲ್ಲಿ ಪಾಲ್ಗೊಂಡಿದ್ದೇವೆಂಬ ಉಮೇದು ಅವರಲ್ಲಿ ಎದ್ದು ಕಾಣುತ್ತಿರುತ್ತದೆ. ಅಂಥವರಲ್ಲಿ ಸಂಯಮ, ಯೋಜಿತ ರೀತಿಯ ಕಾರ್ಯಾಚರಣೆಗಿಂತ ಟ್ರಿಗರ್ ಒತ್ತಿ ಗುಂಡು ಹಾರಿಸುವ ತೆವಲೇ ಜಾಸ್ತಿ ಇರುತ್ತದೆ. ಇಂಥ **temptation** ಗಳಿಂದಾಗೆ ಮುಂದಿನ ದಿನಗಳಲ್ಲಿ ಜನಸಾಮಾನ್ಯರೂ ಬಲಿಯಾಗುವ ಅಪಾಯ ಇದ್ದೇ ಇದೆ.

ಹತ್ತಡ್ಕದಲ್ಲಿ ಚಂದ್ರಶೇಖರ ಗೋರೆ ಎಂಬ ಕುಡುಕ ಮೆಂಟಲ್ ಗಿರಾಕಿ ಮನೇಲೂ ನಕ್ಸಲರಿರಬಹುದೆಂದು ನೂರಾರು ಪೊಲೀಸರು ಮನೆ ಸುತ್ತುವರಿದು ಬಂದೂಕು ರೆಡಿ ಮಾಡಿಟ್ಟುಕೊಂಡು ಕಾದ ಘಟನೆಯನ್ನು ಇನ್ನೊಮ್ಮೆ ನೆನಪಿಸಿಕೊಳ್ಳಿ. ಅದನ್ನು ನೋಡುತ್ತಿದ್ದ ಯಾರಾದರೂ ಜನ ಗಾಬರಿಬಿದ್ದು ಓಡಿದ್ದರೆ ಅವರಿಗೆ ಅವತ್ತು ಗುಂಡೇಟು ಬೀಳುವುದೂ ಖಚಿತವಾಗಿತ್ತು. ನಕ್ಸಲರ ಹೋರಾಟ ಹಾಗೂ ಆದಿವಾಸಿ ಗಿರಿಜನರ ಬೇಡಿಕೆಗಳ ಬಗ್ಗೆ ಸರ್ಕಾರ ಈಗಲಾದರೂ ಒಂದು ರಾಜಕೀಯ ಪರಿಹಾರ ಕಂಡುಕೊಳ್ಳುವತ್ತ ಗಂಭೀರವಾಗಿ ಯೋಚಿಸಬೇಕಿದೆ.

ಮುಗ್ಧ ಗಿರಿಜನರ ಹತ್ಯಾಕಾಂಡ ನಡೆಸಿ, ಅದನ್ನು ಮರೆಸಲು ಭಜರಂಗಿಗಳಿಂದ ದರೋಡೆ ಮಾಡಿಸಿ, ನಕ್ಸಲರನ್ನು ಹುಡುಕಲು ಗೊತ್ತುಗುರಿ ಇರದಂತೆ, ಪೊಲೀಸರನ್ನು ಕಳಿಸಿ ವೃತ್ತಿಪರತೆ ಇರದ ಬರಿ ಹುಮ್ಮಸ್ಸಿನ ಹುಡುಗು ಪೊಲೀಸರಿಂದ ವೆಂಕಟೇಶ್‌ರಂಥವರ ಸಾವಿಗೆ ಕಾರಣವಾಗುವುದರಿಂದ ಯಾವ ಪುರುಷಾರ್ಥವೂ ಸಾಧನೆಯಾಗುವುದಿಲ್ಲ.

ಬದರಿಯವರ ಇಂತಾ **modus operandi, manipulation** ಗಳು ಸರ್ಕಾರಕ್ಕೇ ಕೆಟ್ಟ ಹೆಸರು ತರುತ್ತವೆ ಅಷ್ಟೆ.

-ವರದಿಗಾರ


ಮೆಂಟಲ್ ಗೋರೆಗೆ 'ನಕ್ಸಲರ' ಭೇಟಿ!

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದೊಂದು ವಾರದಿಂದ ನಕ್ಸಲರದೇ ಸುದ್ದಿ. ಇಲಿ ಹೋದಲ್ಲಿ ಹುಲೀನೇ ಹೋಯಿತು ಎನ್ನುವಂತೆ ತಲೆಬುಡವಿಲ್ಲದ ಅಂತೆಕಂತೆಗಳ ಸಂತೆಯೊಂದು ಶುರುವಾಗಿ ಬಿಟ್ಟಿದೆ. ಮಹಾಭಾರತದ ಪ್ರಸಂಗವೊಂದರಲ್ಲಿ ಬಿಲ್ವಿದ್ಯೆ ಪರೀಕ್ಷೆಯ ಸಮಯದಲ್ಲಿ ಅರ್ಜುನನಿಗೆ ಪಕ್ಷಿಯ ಅಕ್ಷಿಯಲ್ಲದೇ ಬೇರೇನೂ ಕಾಣಿಸುತ್ತಿರಲಿಲ್ಲವಂತೆ. ಅಂತೆಯೇ, ಕಾನೂನು ಕಾಯುವ ನಮ್ಮ ಪೊಲೀಸರಿಗೆ ಮತ್ತು ಅವರ ಬೆನ್ನಹಿಂದೆಯೇ ಸುದ್ದಿಗಾಗಿ ತಿರುಗುವ ಮಲೆನಾಡಿನ ಬಹುತೇಕ ಪತ್ರಕರ್ತರಿಗೆ ನಕ್ಸಲರ ಹೊರತಾಗಿ ಬೇರೇನೂ ಕಾಣುತ್ತಿಲ್ಲ.

ತೀರಾ ಇತ್ತೀಚಿನ ನಕ್ಸಲ್ ಮೇನಿಯಾಕ್ಕೆ ಕಾರಣವಾಗಿರೋದು ಬೆಳ್ತಂಗಡಿ-ಪುತ್ತೂರು ಗಡಿ ಭಾಗದ ಹತ್ತಡ್ಕ ಎಂಬ ಗ್ರಾಮದ ನೆಕ್ಕರಡ್ಕ ನಿವಾಸಿ ಚಂದ್ರಶೇಖರ್ ಗೋರೆ ಮನೆಗೆ ಜುಲೈ 18ರಂದು ನಕ್ಸಲೀಯರು ಬಂದು ಗೋಡೆ ಬರಹವನ್ನೆಲ್ಲಾ ಬರೆದು ಹೋಗಿದ್ದಾರೆ ಎನ್ನುವುದು. ಈ ಸುದ್ದಿ ಮರುದಿನ ಬೆಳಗಾಗುವಷ್ಟರಲ್ಲಿ ಕಾಡ್ಗಿಚ್ಚಿನಂತೆ ಹಬ್ಬಿ ಎಸ್ಪಿಯಿಂದ ಹಿಡಿದು ಜಿಲ್ಲೆಯ ಪೊಲೀಸ್ ಬೆಟಾಲಿಯನ್, ಪತ್ರಕರ್ತರ ಬೆಟಾಲಿಯನ್ ಹತ್ತಡ್ಕ ಗ್ರಾಮಕ್ಕೆ ಲಗ್ಗೆ ಇಟ್ಟಿತು. ಬಂದ ಕುತೂಹಲಿಗರಿಗೆಲ್ಲ "ವಿಠ್ಠಲ್ ಹೆಗಡೆಯವರಿಗೆ ಹಣ ಕೊಡಿ" ಎಂದು ಇದ್ದಿಲಿನಲ್ಲಿ ಬರೆದ ಗೋಡೆಬರಹ ಮಾತ್ರ ಕಾಣಿಸಿತು. ಇದನ್ನು ನಕ್ಸಲರೇ ಬರೆದಿದ್ದಾರೆನ್ನುವುದು ಅವರೆಲ್ಲರ ಅಂಬೋಣ. ನಂತರದ್ದು ಚಂದ್ರಶೇಖರ್ ಗೋರೆ ಎಂಬ ಹುಂಬ ಹೇಳಿದ ನಕ್ಸಲ್ ದಾಳಿಯ ಚಂದಮಾಮ ಕತೆಗಳೇ 'ವಿಜಯ ಕರ್ನಾಟಕ' ಮತ್ತು 'ಉದಯವಾಣಿ' ಪತ್ರಿಕೆಗಳಿಗೆ ಸಂಶೋಧನಾ ವರದಿಗಳಾದವು.

ಗೋರೆಯ ಪ್ರಕಾರ ಅಂದು ರಾತ್ರಿ 12 ಗಂಟೆಯ ಸುಮಾರಿಗೆ ಬೀಡಿ ಸೇದುತ್ತಿದ್ದ ಇಬ್ಬರು ಯುವಕರು ಮತ್ತೊಬ್ಬ ಯುವತಿ ಇರುವ ನಕ್ಸಲ್ ತಂಡ ಆತನ ಮನೆಗೆ ಬಂದಿದೆ. ಗೋರೆ ಮನೆಯ ಬಾಗಿಲನ್ನು ತೆರೆಯದ ಕಾರಣ ನಕ್ಸಲರು ಹೊರಗಿನಿಂದಲೇ ಮನೆಯವರನ್ನು ಬೆದರಿಸಿ ಚಿನ್ನ, ಹಣ ಕೊಡುವಂತೆ ಕೇಳಿದ್ದಾರೆ. ಗೋರೆ ಅದನ್ನು ನಿರಾಕರಿಸಿದಾಗ ಅನ್ನ ನೀಡುವಂತೆ ಒತ್ತಾಯಿಸಿದ್ದಾರೆ. ಕೊನೆಗೆ ಶಿಶಿಲಕ್ಕೆ ಹೋಗುವ ದಾರಿ ಎಲ್ಲಿ? ತಾ.ಪಂ. ಸದಸ್ಯ ವಾಮನ್ ತ್ಥಾಮಣ್‌ಕರ್ ಮನೆ ಎಲ್ಲಿ? ಎಂದೆಲ್ಲಾ ವಿಚಾರಿಸಿ ಅಲ್ಲಿಂದ ತೆರಳಿದ್ದಾರೆ.

ಗೋರೆಯ ಪೂರ್ವಾಪರವನ್ನು ಬಲ್ಲವರು ಹೇಳುವಂತೆ ಒಂದೋ ಆತ ಸುಳ್ಳು ಹೇಳುತ್ತಿದ್ದಾನೆ, ಇಲ್ಲವೇ ಆತನನ್ನು ನಕ್ಸಲರ ಹೆಸರಲ್ಲಿ ಯಾರೋ ಹೆದರಿಸಿದ್ದಾರೆ. ಏಕೆಂದರೆ, ಚಿನ್ನ ಮತ್ತು ಹಣ ದೋಚುವುದಕ್ಕಾಗಿಯೇ ಅವರು ಬಂದಿದ್ದರೆ, ನೂಕಿದರೆ ಬಿದ್ದು ಹೋಗುವ ಸ್ಥಿತಿಯಲ್ಲಿರುವ ಗೋರೆ ಮನೆಯ ಕದವನ್ನು ಕಿತ್ತು ಒಳಗೆಬರುವುದು ಅವರಿಗೆ ಕಷ್ಟವಾಗುತ್ತಿರಲಿಲ್ಲ. ಬಂದವರು ನಕ್ಸಲರೇ ಆಗಿದ್ದಿದ್ದರೆ "ವಿಠ್ಠಲ್ ಹೆಗಡೆಗೆ ಧನ ನೀಡಿ" ಎಂದು ಬರೆಯುತ್ತಿರಲಿಲ್ಲ. ವಾಸ್ತವದಲ್ಲಿ ಈ ಬರಹವನ್ನು ನಕ್ಸಲ್ ನಿಗ್ರಹ ಪಡೆ ಮತ್ತು ಪೊಲೀಸರೇ ಒಂದು ಜೋಕ್ ಆಗಿ ತೆಗೆದು ಕೊಂಡಿದ್ದಾರೆ.



ಆದರೆ, ನಕ್ಸಲರು ಬಂದಿದ್ದನ್ನು, ಕಣ್ಣಾರೆ ಕಂಡವರಂತೆ ಬರೆಯಲಾರಂಭಿಸಿದ ಉದಯವಾಣಿ ಮತ್ತು ವಿಜಯ ಕರ್ನಾಟಕ ಪತ್ರಿಕೆಗಳ ಪುತ್ತೂರು ವರದಿಗಾರರಿಗೆ ಹತ್ತಡ್ಕದಲ್ಲಿ ನಕ್ಸಲರನ್ನು ಸೃಷ್ಟಿಸುವ ಬಗ್ಗೆ ಸ್ಪರ್ಧೆಯೇ ನಡೆದುಬಿಟ್ಟಿದೆ. ಮಲೆನಾಡಿನಿಂದ ಒಳನಾಡಿಗೆ ಬಂದ ನಕ್ಸಲರು ಬ್ರಾಹ್ಮಣರನ್ನೇ ಗುರಿಯಾಗಿಟ್ಟುಕೊಂಡು ದಾಳಿ ನಡೆಸುತ್ತಿದ್ದಾರೆ; ಒಂದು ವರ್ಷದ ಹಿಂದೆಯೇ ಅವರೆಲ್ಲ ಇಲ್ಲಿ ಕಾಣಿಸಿಕೊಂಡಿದ್ದರು ಎಂದೆಲ್ಲಾ ರಂಜಕ, ರೋಚಕ ತನಿಖಾ(!) ವರದಿಗಳನ್ನು ವಿಜಯ ಕರ್ನಾಟಕದ ವರದಿಗಾರ ಹೆಣೆದುಬಿಟ್ಟ. ಪೈಪೋಟಿಯಲ್ಲಿ ತಾನೆಲ್ಲಿ ಹಿಂದೆ ಬೀಳುತ್ತೇನೋ ಎಂಬ ಆತಂಕದಿಂದ ಉದಯವಾಣಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಬಂದುಹೋದ ನಕ್ಸಲರ ಪೈಕಿ ಒಬ್ಬಾಕೆಯ ಫೋಟೋವನ್ನೇ ಪ್ರಕಟಿಸಿತು. ಈ ಫೋಟೋ ಯಾರದ್ದು ಗೊತ್ತೇ? ನಾಲ್ಕು ವರ್ಷಗಳ ಹಿಂದೆ ನಕ್ಸಲ್ ಚಟುವಟಿಕೆಗೆ ಸಂಬಂಧಿಸಿದಂತೆ ಮೂಡಿಗೆರೆ ಪೊಲೀಸರು ಬಾಳೆಹೊನ್ನೂರಿನ ವನಜಾಕ್ಷಿಯಾನೆ ಜ್ಯೋತಿ ಎಂಬಾಕೆಯನ್ನು ಬಂಧಿಸಿದ್ದರು. ಸದ್ಯ ಜೈಲಿನಲ್ಲಿರುವ ಈಕೆ ಅದ್ಹೇಗೆ ಗೋರೆ ಮನೆ ಮುಂದೆ ಪ್ರತ್ಯಕ್ಷಳಾದಳು? ಟಾರ್ಚ್ ಲೈಟನಲ್ಲಿ ಗೋರೆ ಅದ್ಹೇಗೆ ಅವಳನ್ನು ಗುರುತಿಸಿದ?! ಆ ಉದಯವಾಣಿಯ ಪತ್ರಕರ್ತನೇ ಬಲ್ಲ.

ಗೋರೆ ಹೇಳುವ ಚಂದಮಾಮ ಕಥೆಯನ್ನು ಆಲಿಸುವ ಮೊದಲು ಆತನ ಬಗ್ಗೆಯೂ ಒಂದಿಷ್ಟು ಗೊತ್ತಿದ್ದರೆ ಒಳ್ಳೆಯದು. ವಾಸ್ತವದಲ್ಲಿ ಈತ 'ಮೆಂಟಲ್ ಗೋರೆ' ಎಂಬ ಅಡ್ಡ ಹೆಸರಿನಿಂದಲೇ ಊರಿನಲ್ಲಿ ಚಿರಪರಿಚಿತ. ದಿನ ಬೆಳಗಾದರೆ ಒಬ್ಬರಿಗಾದರೂ ತೊಂದರೆ ಕೊಡದಿದ್ದರೆ ಇವನಿಗೆ ತಿಂದ ಅನ್ನ ಕರಗುವುದಿಲ್ಲ. ಹೀಗಾಗಿ ಇವನಿಗೆ ಊರಿನಲ್ಲಿ ಮಿತ್ರರಿಗಿಂತ ಶತ್ರುಗಳೇ ಜಾಸ್ತಿ. ಆದ್ದರಿಂದ ಶಿಕಾರಿಗೆ ಹೋಗುವವರು, ಆತನಿಗೆ ಆಗದವರು ಯಾರೋ ಈ ಕೀಟಲೆಯ ಕೆಲಸ ಮಾಡಿರಬಹುದೆಂಬ ಅಭಿಪ್ರಾಯ ಊರಿನವರದು. ಈ ಘಟನೆಯ ಹಿಂದಿನ ದಿನವಷ್ಟೇ ವೈನ್ ಸ್ಟೋರ್‌ನಲ್ಲಿ ಕಂಠಪೂರ್ತಿ ಕುಡಿದು, ಹೆಬ್ಬಾರ್ ಎಂಬುವರ ರೊಟ್ಟಿದಲ್ಲಿ ತನ್ನ ಆರ್ಥಿಕ ಸಂಕಷ್ಟವನ್ನು ತಪಿಸುತ್ತಾ "ನಾವೆಲ್ಲ ನಕ್ಸಲೈಟ್ ಆಗಬೇಕಷ್ಟೆ" ಎಂದು ಭವಿಷ್ಯ ನುಡಿದದ್ದನ್ನು ನೋಡಿದರೆ ಇದೆಲ್ಲಾ ಚಂದ್ರಶೇಖರ್ ಎಂಬ ಮೆಂಟಲ್ ಹೆಣೆದ ನಾಟಕವೇ ಎಂಬ ಗುಮಾನಿ ದಟ್ಟವಾಗುತ್ತದೆ.

-ವರದಿಗಾರ

ನೀನು ಮಾಡದೇ ಇದ್ದ ಅಪರಾಧಕ್ಕೆ ಅನುಭವಿಸುವ ಶಿಕ್ಷೆಯೇ ಬಡತನ -ಹ್ಯಾರಿ ಕೆಂಪ್

ಶಿಕಾರಿಪುರ ಈಗ ಭಿಕಾರಿಪುರ

400 ಕೋಟಿ ಗುಳುಂ



ಸರಿಸುಮಾರು 3 ಲಕ್ಷ ಮತದಾತರ, 173 ಹಳ್ಳಿಗಳ, ಯಡಿಯೂರಪ್ಪನವರಂಥ ದಿಗ್ಗಜರನ್ನು ಉಪಮುಖ್ಯಮಂತ್ರಿ ಗಾದಿಗೇರುವ ತನಕ ಬೆಂಬಲಿಸಿ ಕೊಂಡೇ ಬಂದ ಶಿಕಾರಿಪುರದಂಥ ತಾಲ್ಲೂಕೊಂದನ್ನು ಸ್ವರ್ಗವನ್ನಾಗಿ ಮಾಡಲು ಎಷ್ಟು ಕೋಟಿ ಬೇಕು?

ನೂರು ಕೋಟಿ? ಇನ್ನೂರು ಕೋಟಿ? ಅಥವಾ ಮುನ್ನೂರು ಕೋಟಿ?

ಇಷ್ಟೆಲ್ಲ ಕೋಟಿ ಸುರಿದೂ ಶಿಕಾರಿಪುರ ಒಂದಿಂಚೂ ಬದಲಾಗಲಿಲ್ಲ ಎಂದರೆ ಅದನ್ನು ಏನೆನ್ನಬೇಕು?

ಅದು ಶಿಕಾರಿಪುರದ ದೌರ್ಭಾಗ್ಯ ಮತ್ತು ಉಪ ಮುಖ್ಯಮಂತ್ರಿ, ಯಡ್ಡಿ ಬಂಟರ ಸೌಭಾಗ್ಯಗಳೆರಡೂ ಒಟ್ಟೊಟ್ಟಿಗೇ ಫಲಿಸಿದ್ದರ ಪರಿಣಾಮ. ಇನ್ನೂ ಕರಾರು ವಾಕ್ಕಾಗಿ ಹೇಳಬೇಕೆಂದರೆ ಶಿವಮೊಗ್ಗ ಜಿಲ್ಲೆಯ ಅತ್ಯಂತ ಬರಗೆಟ್ಟ ತಾಲ್ಲೂಕಾದ ಶಿಕಾರಿಪುರವೊಂದಕ್ಕೇ ನಾನೂರು ಕೋಟಿ ರೂಪಾಯಿಗಳ ಭಾರೀ ಪ್ಯಾಕೇಜು ಮಂಜೂರಾಗಿದೆ. 2.80 ಲಕ್ಷದಷ್ಟು ಮತದಾರರ, ಐದು ಹೋಬಳಿಗಳ, ಒಟ್ಟೂ 43 ಗ್ರಾಮ ಪಂಚಾಯ್ತಿಗಳ, ಒಂದೇ ಒಂದು ಕಾರ್ಖಾನೆ, ಕಂಪೆನಿ, ಉದ್ಯೋಗ ಸಂಸ್ಥೆಗಳಿಲ್ಲದ, ಉಳುಮೆ ಬಿಟ್ಟರೆ ಬದುಕಲು ಬೇರಾವುದೇ ಕಸುಬಿಲ್ಲದ ಶಿಕಾರಿಪುರಕ್ಕೆ ಹರಿದುಬಂದ ನಾನೂರು ಕೋಟಿಯಲ್ಲಿ ಸರಿಸುಮಾರು ಇನ್ನೂರೈವತ್ತು ಕೋಟಿ ರೂಪಾಯಿ ಈಗಾಗಲೇ ಖರ್ಚಾಗಿ ಹೋಗಿದೆ. ಯಡ್ಡಿಯ ಮಕ್ಕಳ, ದುಷ್ಟ ಕಂಟ್ರಾಕ್ಟರ್‌ಗಳ ಹಿಂಡು ಬಿಲ್ಲುಗಳ ಮೇಲೆ ಬಿಲ್ಲು ನುಂಗಿ ಕಾಮಗಾರಿಗಳ ಶಾಸ್ತ್ರವನ್ನು ಮುಗಿಸಿಬಿಟ್ಟಿದೆ. ಆದರೆ ಶಿಕಾರಿಪುರ ಮಾತ್ರ ಬಿಕಾರಿಪುರವಾಗೇ ಉಳಿದುಬಿಟ್ಟಿದೆ!



ಯಡ್ಡಿ ಮಗ ರಾಘವೇಂದ್ರ



ಶಾಂತವೀರಪ್ಪ ಗೌಡ

ಉಪಮುಖ್ಯಮಂತ್ರಿಯ ಕ್ಷೇತ್ರಕ್ಕೆ ಹರಿದುಬಂದ ನಾನೂರು ಕೋಟಿಯ ಪ್ಯಾಕೇಜಿನ ದುರಂತ ಕತೆಯನ್ನು ಅಲ್ಲಿನ ಪ್ರತಿಕಲ್ಲೂ, ಪ್ರತಿ ರಸ್ತೆಯೂ, ಹಳ್ಳಿಹಳ್ಳಿಗಳ ಕೆರೆಕಟ್ಟೆಗಳೂ ಸಾರಿ ಹೇಳುತ್ತವೆ.

ಸರ್ಕಾರಿ ದಾಖಲೆಗಳ ಪ್ರಕಾರ ಶಿಕಾರಿಪುರದ ವಿವಿಧ ಕಾಮಗಾರಿಗಳಿಗೆಂದು ರಾಜ್ಯ ಸರ್ಕಾರವೊಂದೇ 450 ಕೋಟಿ ರೂ. ಪ್ಯಾಕೇಜ್ ಕೊಟ್ಟಿದೆ. ಜೊತೆಗೆ ಕೇಂದ್ರದ ಬರಪರಿಹಾರ ನಿಧಿ, ವಿದರ್ಭ ಪ್ಯಾಕೇಜ್ ಇತ್ಯಾದಿಗಳಿಂದ ಮೈನರ್ ಇರಿಗೇಷನ್‌ಗೆಂದು, ಕೂಲಿಗಾಗಿ ಕಾಳಿಗೆಂದು, ರಸ್ತೆ ಕಾಮಗಾರಿಗಳ ನೆಪದಲ್ಲಿ ಶಿವಮೊಗ್ಗ ಜಿಲ್ಲೆಗೆಂದೇ 2000 ಕೋಟಿ ರೂಪಾಯಿಗಳ ಇನ್ನೊಂದು ಪ್ಯಾಕೇಜ್ ಮಂಜೂರಾಗಿದೆ. ಈ ಎರಡು ಸಾವಿರ ಕೋಟಿಯಲ್ಲಿ ಶಿಕಾರಿಪುರಕ್ಕೆ ಬಂದ ದುಡ್ಡೆಷ್ಟು? ಉಳಿದಂತೆ ಶಿವಮೊಗ್ಗ ಜಿಲ್ಲೆಯ ಎಲ್ಲೆಲ್ಲಿಗೆ ಎಷ್ಟು ದುಡ್ಡು ಹೋಯಿತು? ಇತ್ಯಾದಿ ಯಾವ ಬಗ್ಗೆಯೂ ಅಧಿಕಾರಿಗಳು ಲೆಕ್ಕ ಕೊಡುತ್ತಿಲ್ಲ.

ರಾ. ಸೋಮನಾಥ್

ಇರಲಿ, ರಾಜ್ಯ ಸರ್ಕಾರದ 450 ಕೋಟಿಯಲ್ಲಿ ಮಂಜೂರಾದ 400 ಕೋಟಿಗಳ ಪೈಕಿ ಈಗ ಖರ್ಚಾಗಿರುವ ಇನ್ನೂರೈವತ್ತು ಕೋಟಿಯಲ್ಲೇ ಶಿಕಾರಿಪುರವೆಂಬ ಊರು ಸ್ವರ್ಗವಾಗಬೇಕಿತ್ತು. ಅಂದರೆ ಶಿಕಾರಿಪುರದ ಪ್ರತಿ ಮತದಾರನ ಲೆಕ್ಕಕ್ಕೆ ಈಗಾಗಲೇ ತಲಾ 83 ಸಾವಿರ ರೂಪಾಯಿ ಖರ್ಚಾಗಿದೆ. ಹೀಗೆ ಖರ್ಚಾದ ದುಡ್ಡು ಏನಾಯ್ತು? ಎಲ್ಲಿಗೆ ಹೋಯ್ತು? ಅಂತ ಯಾರಾದರೂ ಪ್ರಶ್ನೆಯಿಟ್ಟರೆ ಯಡ್ಡಿ ನಿರರ್ಗಳವಾಗಿ ದೊಡ್ಡ ಪಟ್ಟಿಯನ್ನೇ ಕೊಡುತ್ತಾರೆ.



ವಿಜಯಲಕ್ಷ್ಮಿ

ಒಂದಾನೊಂದು ಕಾಲಕ್ಕೆ 'ಬತ್ತದ ಕಣಜ'ವೆಂದೇ ಹೆಸರುಗಳಿಸಿದ್ದ ಶಿಕಾರಿಪುರದ ಜೀವನಾಡಿಗಳೆಂದರೆ; ಕುಮುದ್ವತಿ ನದಿಗೆ ಅಡ್ಡಲಾಗಿ ಕಟ್ಟಿದ ಅಂಜನಾಪುರ ಜಲಾಶಯ ಮತ್ತು ಕಲ್ಲೊಟ್ಟು ಕೆರೆಯ ಅಂಬ್ಲಿಗೊಳ್ಳ ಜಲಾಶಯಗಳು. ಈ ಪೈಕಿ ಅಂಜನಾಪುರವೊಂದೇ 1.82 TMC ಜಲ ಸಂಗ್ರಹಿಸಿ ಶಿಕಾರಿಪುರದ 28 ಸಾವಿರ ಹೆಕ್ಟೇರ್ ಭೂಮಿಗೆ ನೀರುಣಿಸುತ್ತದೆ. ಅಂಬ್ಲಿಗೊಳ್ಳ 6.7 TMC ನೀರು ಶೇಖರಿಸಿ ಅದನ್ನು ಹದಿನಾಲ್ಕು ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಹಂಚುತ್ತದೆ. ಈ ಎರಡೂ ಜಲಾಶಯಗಳಲ್ಲಿ ಅಂಜನಾಪುರ ಬಲದಂಡೆ ಕಾಲುವೆಯ 40 ಕಿ.ಮೀ. ಉದ್ದದ ಚಾನಲ್ ಮತ್ತು ಅಂಬ್ಲಿಗೊಳ್ಳದ 25 ಕಿ.ಮೀ. ಉದ್ದದ ಮತ್ತೊಂದು ಕಾಲುವೆಗಳ ದುರ್ಗತಿಯ ವಿರುದ್ಧ ಹತ್ತಾರು ವರ್ಷಗಳಿಂದ ಹೋರಾಡಿಕೊಂಡೇ ಬಂದ ಯಡಿಯೂರಪ್ಪ ತಾನು ಉಪಮುಖ್ಯಮಂತ್ರಿಯಾಗಿದ್ದೇ ತಡ, ಈ ಎರಡೂ ಕಾಲುವೆಗಳ ದುರಸ್ತಿಗೆಂದು 150 ಕೋಟಿಯ ಭಾರೀ ಕಾಮಗಾರಿಯನ್ನೇ ಮಂಜೂರು ಮಾಡಿಸಿಕೊಂಡರು. ಅದನ್ನು ಕೇಳಿದ ರೈತರು ಕುಣಿದು ಕುಪ್ಪಳಿಸಿಬಿಟ್ಟರು. ಕಾಮಗಾರಿಗೆ ವಿಜೃಂಭಣೆಯಿಂದಲೇ ಪೂಜೆ ನಡೆಯಿತು. ಟೆಂಡರ್ ಕರೆದು ಕಾಂಟ್ರಾಕ್ಟ್ ಹಂಚಿಕೆಯೂ ಆಯಿತು.

ಆದರೆ ಈ ರೀತಿ ತುಂಡು ತುಂಡು ಕಾಮಗಾರಿಗಳ ಗುತ್ತಿಗೆ ಹಿಡಿದವರಲ್ಲಿ ಬಿಜೆಪಿಯ ಕಾರ್ಯಕರ್ತರು ಮತ್ತು ಯಡ್ಡಿಯ ಬಂಟರೇ ತುಂಬಿಕೊಂಡರು. ಎರಡೇ ತಿಂಗಳಲ್ಲಿ ಅಂಜನಾಪುರ ಬಲದಂಡೆ ಕಾಲುವೆಯ ಮತ್ತು ಅಂಬ್ಲಿಗೊಳ್ಳ ಚಾನಲ್‌ನ 95 ಕೋಟಿ ರೂಪಾಯಿಗಳ ಕಾಮಗಾರಿ ಮುಗಿದು ಬಿಲ್ಲೂ ಮಂಜೂರಾಯಿತು. ಉಳಿಕೆ 55 ಕೋಟಿಯ ಕಾಮಗಾರಿಯಷ್ಟೇ ಬಾಕಿಯಿತ್ತು. ಆದರೆ ಮೊನ್ನೆಯಷ್ಟೆ ಸಣ್ಣದೊಂದು ಮಳೆ ಬತ್ತು ನೋಡಿ-ಮಕ್ಕಳು, ಆಟಕ್ಕೆ ಕಟ್ಟಿದ ಉಸುಕಿನ ಗುಡ್ಡೆಗಳಂತೆ ಚಾನೆಲ್ಲಿಗೆ ಹಾಕಿದ ಸಿಮೆಂಟು, ಗಾರೆ, ಸೇತುವೆಗಳೆಲ್ಲ ಉದುರುದುರಿ ಬಿದ್ದು ಹೋದವು.

ಅಲ್ಲಿಗೆ ಯಡ್ಡಿ ಗ್ಯಾಂಗಿನ 95 ಕೋಟಿ ರೂ. ಮೊತ್ತದ ಸಣ್ಣ(!) ರಾಬರಿಯೊಂದನ್ನು ಶಿಕಾರಿಪುರಕ್ಕೆ ಶಿಕಾರಿಪುರವೇ ಕಣ್ಣಾರೆ ಕಂಡಂತಾಯ್ತು!

ಅಂಜನಾಪುರ ಬಲದಂಡೆ ಚಾನಲ್‌ನ 1200 ಮೀಟರ್ ಲೈನಿಂಗ್ ಕಾಮಗಾರಿಯೊಂದಕ್ಕೇ 40 ಲಕ್ಷ ರೂಪಾಯಿಯಂತೆ ಟೆಂಡರ್ ನಿಗದಿಯಾಗಿತ್ತು. ಕಾಲುವೆಯ ದಂಡೆಗಳಿಗೆ ಕಬ್ಬಿಣದ ಕಂಬಿಗಳನ್ನು ಹಾಕಬೇಕು. ಅದರ ಮೇಲೆ ಕಾಂಕ್ರಿಟ್ ಕೂರಿಸಬೇಕು. ಹಾಗೇ ಕಟ್ಟಿದ ಕಾಲುವೆ ಕಮ್ಮಿಯೆಂದರೂ ನೂರು ವರ್ಷ ಬಾಳಬೇಕು. ಆದರೆ ಕಾಲುವೆಯು ಈಸೂರು ಮತ್ತು ಗಾಮ ಎಂಬ ಹಳ್ಳಿಗಳ ಮಧ್ಯೆ ಕಟ್ಟಿದ ಎರಡೇ ತಿಂಗಳಿಗೆ ಸಣ್ಣದೊಂದು ಮಳೆಯನ್ನೂ ತಾಳಿಕೊಳ್ಳದೇ ಉದುರಿ ಬಿದ್ದಿತ್ತು!

ಶಿಕಾರಿಪುರದ ಮಧ್ಯೆಯೇ ಹಾದು ಹೋಗುವ ಚಾನಲ್ ವಿನಾಯಕ ನಗರದ ಬಳಿಯೇ ಬಿರುಕು ಬಿಟ್ಟು ಒಡೆದು ಹೋಯಿತು. ಹೀಗೆ ಮುಂದುವರಿದ ಅಂಜನಾಪುರ ಬಲದಂಡೆ ಕಳಪೆ ಕಾಮಗಾರಿಯ ಐಸಿರಿ ಹೇಗಿತ್ತೆಂದರೆ, ಬೇಗೂರು-ಬಂಡೆಕಟ್ಟೆ




ಯಡ್ಡಿಯ ಯಡವಟ್ಟುಗಳು



ಒಂದು ತಿಂಗಳಲ್ಲಿ ಕಿತ್ತು ಬಂದ ಮೋರಿ



ಕಟ್ಟಿದ ಎರಡೇ ತಿಂಗಳಲ್ಲಿ ಒಡೆದುಬಿದ್ದ ಅಂಜನಾಪುರ ಕಾಲುವೆ



ಅರಿಶಿಣಗೆರೆ ಸೇತುವೆಯೇ ತೂತು ಬಿದ್ದಿರುವುದು

ಯಡ್ಡಿ-ಚೆಡ್ಡಿಗಳ ದೇಶಭಕ್ತಿ!

ಶಿಕಾರಿಪುರಕ್ಕೆಂದೇ ಸೃಷ್ಟಿಯಾದ 450 ಕೋಟಿಯ ಪ್ಯಾಕೇಜ್ ಬಹುಶಃ ಬಿಜೆಪಿಯ ಕಳ್ಳಕಂಟ್ರಾಕ್ಟರ್‌ಗಳ ಉದ್ಧಾರಕ್ಕೆಂದೇ ಹುಟ್ಟಿಕೊಂಡದ್ದೇ? ಶಿಕಾರಿಪುರದ ಒಳಿತಿಗಿಂತಲೂ ಸಂಘಪರಿವಾರದ ಕಾರ್ಯಕರ್ತರನ್ನು ಕಾಮಗಾರಿಯ ನೆಪದಲ್ಲಿ ಕೊಬ್ಬಿಸುವುದು ಯಡ್ಡಿ ಹುನ್ನಾರವೇ?

ಶಿಕಾರಿಪುರದಲ್ಲಿ ಸದ್ಯ ಕ್ಲಾಸ್ ಒನ್ ಕಂಟ್ರಾಕ್ಟರ್‌ಗಳು ಅಂತಿರುವುದು ಮೂವರು ಮಾತ್ರ. ಜಯಣ್ಣ, ಶಿವಾನಂದಪ್ಪ ಮತ್ತು ಸುಬ್ಬಣ್ಣ; ಈ ಮೂವರೂ ಹಾರ್ಡ್‌ಕೋರ್ ಚಡ್ಡಿಗಳೆ. ವೇದಿಕೆ ಸಿಕ್ಕರೆ ಭ್ರಷ್ಟಾಚಾರದ ವಿರುದ್ಧ ಮುಕುಳಿ ಹರಿಯುವಂತೆ ಭಾಷಣ ಕುಟ್ಟುತ್ತಾರೆ. ಹಾಗೆ ಪೋಜು ಕೊಟ್ಟುಕೊಂಡೇ ಕಾಮಗಾರಿ ಗಿಟ್ಟಿಸಿ ಅಂಜನಾಪುರ ಜಲಾಶಯವೇ ಕೊಚ್ಚಿ ಹೋಗುವಂತೆ ಕಳಪೆ ಕಾಮಗಾರಿ ಮಾಡಿದ್ದಾರೆ. ಈಗ ಶಿಕಾರಿಪುರದಲ್ಲಿನ ಬಹುತೇಕ ಕಾಮಗಾರಿಗಳನ್ನು ಕೊಳ್ಳೇಗೈದವರೆಲ್ಲ ಇವರ ಶನಿಸಂತತಿಗಳೆ.

ಈ ಪೈಕಿ ಮಹೇಂದ್ರ ಮತ್ತು ದಿವಾಕರ ಎಂಬ ಎರಡನೇ ದರ್ಜೆಯ ಕಂಟ್ರಾಕ್ಟರ್‌ಗಳಿಗೆ ತಲಾ ಐದು ಕೋಟಿ ಟೆಂಡರ್ ಸಿಕ್ಕಿದೆ. ಐದು ಪರ್ಸೆಂಟ್ ಕೂಡ ಖರ್ಚಿಲ್ಲದೆ ಕಳಪೆ ಕಾಮಗಾರಿ ಮಾಡಿ ಬಿಲ್ಲು ದೋಚಿದ್ದಾರೆ. ಇವರಿಬ್ಬರೂ ಹೇಳಿಕೇಳಿ ಹುಟ್ಟಾ ಆರೆಸ್ಸೆಸ್ ಚಡ್ಡಿಗಳು. ಸರಿಸುಮಾರು ಮೂರು ಕೋಟಿಯಷ್ಟು ಕಂಟ್ರಾಕ್ಟನ್ನು ಬೇನಾಮಿಯಾಗಿ ದೋಚಿದ ಮತ್ತೊಬ್ಬ ಖದೀಮನ ಹೆಸರು ಸುರೇಶ. ಈ ಕ್ಲಾಸ್ ಒನ್ ಕಂಟ್ರಾಕ್ಟರ್ ಜಯಣ್ಣನ ಮಗ ಮತ್ತು ಯಡ್ಡಿ ಮಗ ರಾಘವೇಂದ್ರನ ಬಲಗೈ ಬಂಟ. ಮತ್ತೊಬ್ಬ ಕಂಟ್ರಾಕ್ಟರ್ ಭೋಜರಾಜ ಪಾಟೀಲ ಲೋಕಲ್ ಬಿಜೆಪಿ ಮುಖಂಡ.

ಮತ್ತೊಬ್ಬ ಲೋಕಲ್ ಬಿಜೆಪಿ ಲೀಡರ್ ಮತ್ತು ಎಪಿಎಂಸಿ ಅಧ್ಯಕ್ಷ ರಾಜಪ್ಪನ ಮಗ ಗೋಪಿಗೆ ನಾಲ್ಕು ಕೋಟಿಯ ಕಳಪೆ ಕಾಂಟ್ರಾಕ್ಟ್ ಸಿಕ್ಕರೆ, ಬಿಜೆಪಿಯ ಮತ್ತೊಬ್ಬ ನಾಯಕ ಭೂಕಾಂತ(ಈತ ಬಿಜೆಪಿಯ ಅಂಜನಾಪುರದ ಜಿ.ಪಂ.ಸದಸ್ಯೆ ಶಾಂತಲಾಳ ಗಂಡ) ರಾಜಪ್ಪನ ತಮ್ಮ ಶಿವಶಂಕರ, ದೇವಣ್ಣ; ಇತ್ಯಾದಿ ಹುಟ್ಟಾ ಸಂಘಪರಿವಾರದ ಕ್ರಿಮಿಗಳೇ ಶಿಕಾರಿಪುರದ ಖದೀಮ ಕಂಟ್ರಾಕ್ಟರ್‌ಗಳಾಗಿ ಉದ್ಭವಿಸಿದ್ದಾರೆ. ಕೋಟಿಗಟ್ಟಲೇ ದೋಚಿದ್ದಾರೆ.

ಈ ಪೈಕಿ ಯಡ್ಡಿಯ ಪಿಎ ಗುರುಮೂರ್ತಿ ಒಬ್ಬನೇ ಬೇನಾಮಿಯಾಗಿ ಮೂರೂವರೆ ಕೋಟಿಯ ಕಾಂಟ್ರಾಕ್ಟ್ ಗಿಟ್ಟಿಸಿದ್ದಾನೆ. 450 ಕೋಟಿಯ ಪ್ಯಾಕೇಜ್ ಕಳಪೆ ಕಾಮಗಾರಿಯ ಬಗ್ಗೆ ಸಿಬಿಐ ತನಿಖೆಯಾಗಿದ್ದೇ ಆದರೆ ಇವರೆಲ್ಲರ ಸಮೇತ ಯಡ್ಡಿ ಜೈಲಿಗೆ ಹೋಗಲೇಬೇಕು!

ತಮಾಷೆಯೆಂದರೆ ಈ ಹಿಂದೆ ಧರ್ಮಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ತನ್ನ ಸೋಲಿಸಿ ಶಾಸಕನಾಗಿದ್ದ ಮಾಲಿಂಗಪ್ಪ ಕಳಪೆ ಕಾಮಗಾರಿ ಮಾಡಿದ್ದಾನೆಂದು ಯಡ್ಡಿ ಶಿಕಾರಿಪುರದಲ್ಲಿ ರಸ್ತೆ ತಡೆ ಮಾಡಿ ಕೂಗಾಡಿದ್ದರು. ಹೆದರಿದ ಧರ್ಮಸಿಂಗ್ ಹೆಲಿಕಾಪ್ಟರಿನಲ್ಲಿ ಧಾವಿಸಿ ಬಂದರು. ಆವತ್ತು ಧರ್ಮಸಿಂಗ್ ಎದುರಿಗೇ ಕಾಂಗ್ರೆಸ್ ಬೆಂಬಲಿತ ಕಂಟ್ರಾಕ್ಟರ್ ಒಬ್ಬನನ್ನು ಯಡ್ಡಿ ಹಿಡಿದು ಬಡಿದಿದ್ದರು. ಇವತ್ತು ಯಡ್ಡಿ ಗ್ಯಾಂಗ್ ಕಳಪೆ ಕಾಮಗಾರಿ ಹಾಳಾಗಲಿ, ಸಣ್ಣದೊಂದು ಮಳೆಯನ್ನೂ ತಾಳದ ಹಾಗೇ ಅದಕ್ಕಿಂತಲೂ ಮೋಸದ ಕಾಮಗಾರಿಗಳ ಸರಮಾಲೆಯನ್ನೇ ಸೃಷ್ಟಿಸಿದೆ.

ಯಾರು ತನಿಖೆ ಮಾಡಬೇಕು? ಯಡ್ಡಿ ಗ್ಯಾಂಗಿಗೆ ಯಾರು ಬಡಿಯಬೇಕು?



ಯಡ್ಡಿ ಪಿಎ ಗುರುಮೂರ್ತಿ

...ಮಾಡಿದ ಬಳಿ ಮುಂದೆ ...ವನಸಪುರದಲ್ಲಿ ...ಳ್ಳೆವರಲ್ಲಿ ಕುಸಿದು ಬಿದ್ದಿವೆ. ಇನ್ನು ಅಂಬ್ಲಗೊಳ್ಳ ಕಾಲುವೆಯ ದುಸ್ಥಿತಿ ...ವಕ್ಕಿತಲೂ ಅಸತ್ಯ. ಮೊನ್ನೆ ಸುರಿದ ಸಣ್ಣಮಳೆಯನ್ನೇ ...ಕೊಳ್ಳದ ಅಂಬ್ಲಗೊಳ್ಳ ಚಾನಲ್ ಇನ್ನು ಬೇಸಿಗೆಯಲ್ಲಿ ನೀರು ಬಿಟ್ಟರೆ ಖಂಡಿತ ...ಂದಿಯೆದ್ದು ಬೀಳಲಿದೆ. ...ಮ 150 ಕೋಟಿಯಲ್ಲಿ ಈಗಾಗಲೇ ಚಾನಲ್ ನವೀಕರಣದ ಹೆಸರಲ್ಲಿ ಲೂಟಿ ಹೊಡೆದ 95 ಲಕ್ಷದ ಕತೆಯಾದರೆ, ಇನ್ನು ಭಾರೀ ನೀರಾವರಿ ಇಲಾಖೆಯಿಂದ ಮಂಜೂರಾದ ಶಿಕಾರಿಪುರದ ಕೆರೆಗಳು ಮತ್ತು ಮೈನರ್ ಇರಿಗೇಷನ್ ಯೋಜನೆಗಳಡಿಯಲ್ಲಿ ಬಿಲ್ಲು ಪಡೆದು ನುಂಗಿ ಹಾಕಿದ ಸಣ್ಣಪುಟ್ಟ ಕಾಲುವೆಗಳ ದುರಂತವೇ ಮತ್ತೊಂದು ಅಧ್ಯಾಯವಾಗುತ್ತದೆ.

ಹಿತ್ಲಗ್ರಾಮದ ದೊಡ್ಡಕೆರೆಯ ಏರಿಗೆ ಕಲ್ಲು ಹಾಸು (ರಿವಿಟ್‌ಮೆಂಟ್) ನಿರ್ಮಿಸುವ 15 ಲಕ್ಷದ ಕಾಮಗಾರಿಯನ್ನು ಯಡ್ಡಿ ತನ್ನ ಪರಮಾಪ್ತ ಕಂಟ್ರಾಕ್ಟರ್ ಭೋಜರಾಜ ಪಾಟೀಲನಿಗೆ ಕೊಟ್ಟಿದ್ದಾರೆ. ಈ ಭೋಜರಾಜ ಶಾಸ್ತ್ರಕ್ಕಷ್ಟೇ ಕಲ್ಲು ಮಣ್ಣು ಜೋಡಿಸಿ ಪೂರ್ತಿ ಬಿಲ್ಲಿನ ಮೊತ್ತವನ್ನು ನುಂಗಿ ಅದರಲ್ಲಿ ಒಂದು ಪಾಲನ್ನು ಯಡ್ಡಿ ಪುತ್ರ ರಾಘವೇಂದ್ರನಿಗೆ ತಿನ್ನಿಸಿದ್ದಾನೆ. ವಿಕಟವೆಂದರೆ ರಿವಿಟ್ ಮಾಡಿದ ಮೂರೇ ತಿಂಗಳಲ್ಲಿ ಜೋಡಿಸಿದ ಪುಡಿ ಕಲ್ಲುಗಳೆಲ್ಲ ಕುಸಿದು ಬಿದ್ದಿವೆ. ಇಡೀ ಶಿಕಾರಿಪುರದ ಎಲ್ಲ ಕೆರೆಗಳ ಹೂಳೆತ್ತಿ ದಂಡೆಗೆ ಕಲ್ಲು ಹಾಸು ನಿರ್ಮಿಸಲೆಂದೇ ತಲಾ ಕೆರೆಯೊಂದಕ್ಕೆ 30 ಲಕ್ಷದಂತೆ ಮಂಜೂರಾಗಿದೆ. ಇಂಥ 70 ಕೆರೆಗಳಿಗೆಂದು ಕಿರು ನೀರಾವರಿ ಇಲಾಖೆಯಿಂದ 21 ಕೋಟಿ ಮಂಜೂರಾಗಿರುವುದು ಒಂದೆಡೆಯಾದರೆ, ಮತ್ತೊಂದೆಡೆ ಭಾರಿ ನೀರಾವರಿಯಿಂದ ದೊಡ್ಡ ಕೆರೆಯೊಂದರ ಕಾಮಗಾರಿಗೆಂದು 50 ಲಕ್ಷದಂತೆ ಒಟ್ಟೂ 25 ಕೆರೆಗಳಿಗೆ ಹನ್ನೆರಡೂವರೆ ಕೋಟಿಯ ಇನ್ನೊಂದು ಪ್ಯಾಕೇಜ್ ಬಿಡುಗಡೆಯಾಗಿದೆ. ಈ ಪೈಕಿ ಅರಿಶಿನ ದೊಡ್ಡಕೆರೆಗೆ ಮಂಜೂರಾದ 30 ಲಕ್ಷ, ಯಳಗೆರೆ ಕೆರೆಯ 25 ಲಕ್ಷ, ಕದೇ ನಂದಿಹಳ್ಳಿ ಕೆರೆಗೆ 25 ಲಕ್ಷ, ಬಳ್ಳಿಗಾವಿ ಬಸವಣ್ಣನ ಕೆರೆಯ 25 ಲಕ್ಷ, ಗೊಗ್ಗ ಹೊನ್ನಾಳಿ ರಸ್ತೆಯ 25 ಲಕ್ಷ, ಮುದ್ದನಹಳ್ಳಿಕೆರೆ ಕೋಡಿ ರಿಪೇರಿಗೆಂದು ಮಂಜೂರಾದ 50 ಲಕ್ಷ ಇತ್ಯಾದಿಗಳೆಲ್ಲ ಕೇವಲ ಕಾಗದಪತ್ರಕ್ಕಷ್ಟೇ ಸೀಮಿತವೇ ಹೊರತು ಕಾಟಾಚಾರಕ್ಕೂ ಕೆಲಸ ನಡೆದಿಲ್ಲ.



ಸಿಮೆಂಟಿಗೆ ಬದಲು ಮಣ್ಣಿನ ಕಾಂಕ್ರೀಟ್



ಗಾಮದ ಕೆರೆ ರಿವಿಟ್‌ಮೆಂಟ್ ಉದುರಿರೋದು

ಬಿಜೆಪಿ ದುಷ್ಟರ ಹಿಂದು ಬಿಲ್ಲು ನುಂಗಿದ್ದು ಬಿಟ್ಟರೆ ಕೆರೆಗಳು ಉದ್ಧಾರವಾಗಲಿಲ್ಲ. ಒಬ್ಬ ಉಪಮುಖ್ಯಮಂತ್ರಿ ತನ್ನ ಆಸ್ಥಾನಕ್ಕೆ ತಂದ ಊರನ್ನು ಇಷ್ಟೊಂದು ನಿರ್ಲಜ್ಜವಾಗಿ ಕೊಳ್ಳೆ ಹೊಡೆಯುತ್ತಾನೆಂದರೆ ಅದು ಶಿಕಾರಿಪುರದ ದೌರ್ಭಾಗ್ಯವಲ್ಲದೇ ಮತ್ತೇನು?

ಇದು ನೀರಾವರಿಯ ಕತೆಯಾದರೆ ಶಿಕಾರಿಪುರದ ಒಟ್ಟೂ 43 ಗ್ರಾಮ ಪಂಚಾಯ್ತಿಗಳಿಗೆ ತಲಾ ಒಂದೊಂದು ಕೋಟಿಯಂತೆ ಬಿಡುಗಡೆಯಾದ ಒಟ್ಟೂ ನಲವತ್ಮೂರು ಕೋಟಿ ರೂಪಾಯಿಗಳ ಬಗ್ಗೆ ತನಿಖೆಯಾದರೆ ಉಪಮುಖ್ಯಮಂತ್ರಿ ಯಡ್ಡಿ, ಆತನ ಮಕ್ಕಳು ಮತ್ತು ಯಡ್ಡಿ ಬಾಲಬಡುಕ ಬಿಜೆಪಿ ದುಷ್ಟರ ಒಂದು ಹಿಂಡೇ ಕಂಬಿ ಎಣಿಸಬೇಕಾಗುತ್ತದೆ.

ಶಿಕಾರಿಪುರ ಟೌನ್ ಒಂದಕ್ಕೇ ಒಳಚರಂಡಿ ವ್ಯವಸ್ಥೆಗೆಂದು ಹತ್ತೂವರೆ ಕೋಟಿ ಮಂಜೂರಾಗಿದೆ. ಹೀಗೆ ನಿರ್ಮಿಸಿದ ಬಾಕ್ಸ್ ಚರಂಡಿಯೊಂದು ನಾಯಿ ತುಳಿದ ಮಾತ್ರಕ್ಕೇ ಮೊನ್ನೆಯಷ್ಟೇ ಕುಸಿದುಬಿತ್ತು. ಶಿಕಾರಿಪುರದಿಂದ ಗಾಮ ಎಂಬ ಹಳ್ಳಿಯ ಒಟ್ಟೂ ನಾಲ್ಕು ಕಿ.ಮೀ. ಉದ್ದದ ರಸ್ತೆಗೆ ಕಿ.ಮೀ. ಒಂದಕ್ಕೆ ಎಂಟು ಲಕ್ಷದಂತೆ ಒಟ್ಟೂ 32 ಲಕ್ಷ ರೂಪಾಯಿ ಮಂಜೂರಾಗಿದೆ. ಬಿಲ್ಲೂ ಬಿಡುಗಡೆಯಾಗಿದೆ. ಹೀಗೆ ಟಾರ್ ಹಾಕಿದ ರಸ್ತೆ ಮೊನ್ನೆ ಬಿದ್ದ ಸಣ್ಣ ಮಳೆಯಲ್ಲಿ ಪೂರ್ತಿಯಾಗಿ ಕೊಚ್ಚಿ ಹೋಗಿದೆ. ಶಿವಮೊಗ್ಗ ನಂದಿಹಳ್ಳಿ ರಸ್ತೆಗೆ ಹದಿಮೂರೂವರೆ ಲಕ್ಷ ರೂಪಾಯಿ ಕಾಮಗಾರಿ ಕಾಂಟ್ರಾಕ್ಟ್ ಹಿಡಿದವನು ಯಡ್ಡಿಯ ಪಕ್ಕಾ ಛೇಲಾ ಜಯಣ್ಣನ ಮಗ ಸುರೇಶ. ಪೇಪರ್ ದೋಸೆ ಹುಯ್ದಂತೆ ಮರಳಿನ ಪುಡಿ ಚೆಲ್ಲಿ ಅದರ ಮೇಲೆ ನೀರು ಸಿಂಪಡಿಸಿದಂತೆ ಟಾರ್ ಬಳಿದಿದ್ದು, ಕೇವಲ ಐದೇ ತಿಂಗಳಲ್ಲಿ ಕಿತ್ತುಬಿದ್ದಿದೆ. ಸದ್ಯ ಆ ರಸ್ತೆಯಲ್ಲಿ ಮನುಷ್ಯರಿರಲಿ, ನಾಯಿ ನರಿಗಳೂ ಓಡಾಡಲಿಕ್ಕಾಗುತ್ತಿಲ್ಲ!

ಶಿವಮೊಗ್ಗ ರಸ್ತೆಯ ತಿಮ್ಮಲಾಪುರದಲ್ಲೇ ಯಡ್ಡಿಯ ವಿವೇಕಾನಂದ ವಿದ್ಯಾಸಂಸ್ಥೆ ಮತ್ತು ಕುಮುದ್ವತಿ ಕಾಲೇಜುಗಳಿವೆ. ಕನಿಷ್ಠ ತನ್ನ ಕಾಲೇಜಿಗೆ ಬರುವುದಕ್ಕಾದರೂ ನೆಟ್ಟಗೊಂದು ರಸ್ತೆಬೇಕಲ್ಲವೆ? ಅದಕ್ಕೆಂದೇ 22 ಲಕ್ಷದ ಎಸ್ಟಿಮೇಟ್ ಮಾಡಿಸಿ ತನ್ನ ಮಗ ರಾಘವೇಂದ್ರನಿಗೇ ಬೇನಾಮಿಯಾಗಿ ಕಾಂಟ್ರಾಕ್ಟ್ ಕೊಟ್ಟರು. ತಮಾಷೆಯೆಂದರೆ ಯಡ್ಡಿಯ ಕಾಲೇಜಿಗೆ ಹೋಗುವ ರಸ್ತೆಯ ಟಾರು ಐದೇ ತಿಂಗಳಲ್ಲಿ ಕೊಚ್ಚಿ ಹೋಯಿತು!

ಕೆಂಗಟ್ಟೆ ರಸ್ತೆಗೆ 10 ಲಕ್ಷದ ಕಾಂಟ್ರಾಕ್ಟು, ಹಿತ್ಲ ಗ್ರಾಮದಿಂದ ಅರಿಶಿಣಗೆರೆ ರಸ್ತೆಯ 18 ಲಕ್ಷದ ಕಾಮಗಾರಿ, ಅರಿಶಿಣಗೆರೆಯಿಂದ ಸಾಲೂರಿಗೆ ಹೋಗುವ ಒಳರಸ್ತೆಯ 50 ಲಕ್ಷದ ಕಾಂಟ್ರಾಕ್ಟು, ಅರಿಶಿಣಗೆರೆ ದೊಡ್ಡಕೆರೆಯಿಂದ ಹುಂಗ್ಯಾಳಕೆರೆ ದಾರಿಯ 40 ಲಕ್ಷದ ಮತ್ತೊಂದು ಕಾಮಗಾರಿ, ಚನ್ನಳ್ಳಿ ರಸ್ತೆಯಿಂದ ಯಡ್ಡಿಯ ಮಾವನ ತೋಟಕ್ಕೆ ಹೋಗುವ 35 ಲಕ್ಷದ ಮಗದೊಂದು ಟೆಂಡರ್, ಶಿವಮೊಗ್ಗ ರೋಡ್ ತರಲಘಟ್ಟದಿಂದ ಹಳೇ ತರಲಘಟಕ್ಕೆ ಹೋಗುವ 8.50 ಲಕ್ಷದ 40 ಲಕ್ಷದ ಕಾಂಟ್ರಾಕ್ಟ್, ಸಾಲೂರು-ಅಂಬ್ಲಗೊಳ್ಳದ 25 ಲಕ್ಷದ ರಸ್ತೆ ನಿರ್ಮಾಣ- ಇತ್ಯಾದಿ ಕಾಮಗಾರಿಗಳನ್ನೆಲ್ಲ ಶೇ. 40 ರಷ್ಟು ಕಮೀಷನ್ ಮುರಿದುಕೊಂಡೇ ಕುಂದಾಪುರದ ಖದೀಮ ಕಂಟ್ರಾಕ್ಟರ್ ಶರತ್‌ಶೆಟ್ಟಿ ಎಂಬಾತನಿಗೆ ಯಡ್ಡಿ ಕೊಡಿಸಿಕೊಟ್ಟರು. ಈ ಶರತ್‌ಶೆಟ್ಟಿ ಬಿಜೆಪಿ ರಾಜ್ಯಾಧ್ಯಕ್ಷ ಸದಾನಂದಗೌಡರ ಬಲಗೈ ಬಂಟ. ಎರಡೇ ತಿಂಗಳಲ್ಲಿ ಬಿಲ್ಲೂ ಮಂಜೂರಾಯಿತು. ವಿಚಿತ್ರವೆಂದರೆ ಬಿಲ್ಲಿನ ದುಡ್ಡು ಮಂಜೂರಾಗುವ ಮೊದಲೇ ರಸ್ತೆ ಹದಗೆಟ್ಟು ಎಲ್ಲೆಂದರಲ್ಲಿ ಹೊಂಡಬಿದ್ದಿತ್ತು. ಅಂಬ್ಲಗೊಳ್ಳ ಮುಖ್ಯರಸ್ತೆಯಂತೂ ಅದೆಷ್ಟು ಕುಲಗೆಟ್ಟಿತ್ತೆಂದರೆ ಬಿದ್ದ ಮಳೆಗೆ ಮಣ್ಣು ಕುಸಿದು ಲಾರಿಯೊಂದು ಮೂರು ಅಡಿ ಆಳಕ್ಕೆ ಸಿಕ್ಕಿಹಾಕಿಕೊಂಡು, ಅದನ್ನು ಹೊರತೆಗೆಯುವುದಕ್ಕೇ ನಾಲ್ಕು ದಿನ ಹಿಡಿಯಿತು!



ಎರಡೇ ತಿಂಗಳಲ್ಲಿ ಕಿತ್ತುಹೋದ ಅರಿಶಿಣಗೆರೆ-ಹುಂಗ್ಯಾಳ ...

ಶಿಕಾರಿಪುರದ ದುರಂತಕ್ಕೆ ಇದಕ್ಕಿಂತ ಬೇಕೆ? ಈ ಹಿಂದೆ ಸಿದ್ದರಾಮಯ್ಯ ಉಪಮುಖ್ಯಮಂತ್ರಿಯಾದಾಗ ತಮ್ಮ ಚಾಮುಂಡೇಶ್ವರಿ ಕ್ಷೇತ್ರಕ್ಕೆಂದೇ ಇನ್ನೂರೈವತ್ತು ಕೋಟಿಯ ಪ್ಯಾಕೇಜ್ ದಕ್ಕಿಸಿಕೊಂಡಾಗಲೂ ಇಷ್ಟೊಂದು ನಿರ್ಲಜ್ಜವಾಗಿ ದೋಚಿರಲಿಲ್ಲ. ಆದರೆ ಯಡ್ಡಿಗೆ ನಾಚಿಕೆಯೂ ಇಲ್ಲ, ಮಾನ ಮೊದಲೇ ಇಲ್ಲ. ಮಹಾನ್ ದೇಶಭಕ್ತರಾದ ಬಿಜೆಪಿಯ ಕಂಟ್ರಾಕ್ಟರ್‌ಗಳಂತೂ ಬೇರೆಲ್ಲಾ ಕಂಟ್ರಾಕ್ಟರ್‌ಗಳ ದಾಖಲೆಯನ್ನೇ ಸಾರ್ವಕಾಲಿಕವಾಗಿ ಮುರಿದಿದ್ದಾರೆ. ನಾನೂರೈವತ್ತು ಕೋಟಿಯ ಶಿಕಾರಿಪುರದ ಪ್ಯಾಕೇಜಿನಲ್ಲಿ 250 ಕೋಟಿ ಬಿಜೆಪಿ ಖದೀಮರ ಹೊಟ್ಟೆ ಸೇರಿದೆ

... ಮಾಡುವವರ್‍ಯಾರು?

ಪತಿಭಟಿಸಬೇಕಿದ್ದ ಕಾಂಗ್ರೆಸ್ಸು ಏಕೆ ಕಣ್ಣುಮುಚ್ಚಿ ಕೂತಿದೆ?

ಏಕೆ ಯಾವ ಪತ್ರಿಕೆಗಳೂ ಈ ...

ಮಿನಿ ವಿಧಾನಸೌಧದ ಮರ್ಮ?

ಯಡ್ಡಿಯ ದಗಲುಬಾಜಿತನಕ್ಕೆ ಇವತ್ತಿಗೂ ಮೂಕಸಾಕ್ಷಿ ಅಂತಿದ್ದರೆ ಅದು ಶಿಕಾರಿಪುರದ ಮಿನಿ ವಿಧಾನಸೌಧ!

ಈ ಹಿಂದೆ ಜೆ.ಎಚ್. ಪಟೇಲ್ ಮುಖ್ಯಮಂತ್ರಿಯಾಗಿದ್ದಾಗ 1 ಕೋಟಿ, ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಮತ್ತೊಂದು ಕೋಟಿ, ತದನಂತರ ಧರ್ಮಸಿಂಗ್ ಮುಖ್ಯಮಂತ್ರಿಯಾದ ಮೇಲೆ ಮಗದೊಂದು ಕೋಟಿಯಂತೆ ಮಿನಿವಿಧಾನಸೌಧದ ಉದ್ಧಾರಕ್ಕೆಂದು ಯಡ್ಡಿ ಮಂಜೂರು ಮಾಡಿಸಿಕೊಂಡಿದ್ದಾರೆ. ಕಾಮಗಾರಿಯ ಕಾಂಟ್ರಾಕ್ಟನ್ನೂ ತಮ್ಮ ಮಗ ರಾಘವೇಂದ್ರನಿಗೇ ಬೇನಾಮಿಯಾಗಿ ಕೊಟ್ಟಿದ್ದಾರೆ. ಬಿಲ್ಲಿನ ದುಡ್ಡನ್ನೂ ನುಂಗಿದ್ದಾರೆ.

ಅಷ್ಟಾಗ್ಯೂ ಮಿನಿ ವಿಧಾನಸೌಧ ಉದ್ಧಾರವಾಗಲೇ ಇಲ್ಲ. ಈಗ ತಾವೇ ಉಪಮುಖ್ಯಮಂತ್ರಿಯಾದ ಮೇಲೆ ನಾಲ್ಕನೇ ಬಾರಿ ಅದಕ್ಕೆಂದು ಮೂರು ಕೋಟಿ ಮಂಜೂರು ಮಾಡಿ ಸದ್ಯದ ಗುತ್ತಿಗೆಯನ್ನೂ ಯಥಾಗತ ಮಗ ರಾಘವೇಂದ್ರನಿಗೇ ಒಪ್ಪಿಸಿದ್ದಾರೆ. ಮಗ ರಾಘವೇಂದ್ರ ಈಗಾಗಲೇ 83 ಲಕ್ಷ ರೂಪಾಯಿಯ ಬಿಲ್ಲನ್ನು ಜೇಬಿಗಿಳಿಸಿದ್ದಾನಾದರೂ ಮಿನಿ ವಿಧಾನಸೌಧದ ದುರ್ಗತಿ ಮಾತ್ರ ಹಾಗೇ ಮುಂದುವರಿದಿದೆ. ಹೆಚ್ಚೆಂದರೆ ಹಳೇ ಕಟ್ಟಡಕ್ಕೇ ಗೋಡೆಯ ಪ್ಲಾಸ್ಟರ್ ಕೆರೆದು ಹೊಸ ಪ್ಲಾಸ್ಟರ್ ಹಾಕಬಹುದು. ಒಂದೆರಡು ಗೋಡೆ ಕೆಡವಿ ಹಳೇ ಇಟ್ಟಿಗೆಯನ್ನೇ ಜೋಡಿಸಿ ಮತ್ತೆ ಹೊಸ ಗೋಡೆ ನಿರ್ಮಿಸಬಹುದು. ಈಗ ಯಡ್ಡಿ ಮಗ ಇದರ ಹೊರತಾಗಿ ಬೇರೇನನ್ನೂ ಮಾಡುತ್ತಿಲ್ಲ. ಹೆಚ್ಚೆಂದರೆ ಅದಕ್ಕೆ ಐದು ಲಕ್ಷ ಖರ್ಚಾಗಬಹುದು.



ಹಳೇಕಟ್ಟಡಕ್ಕೇ ಸುಣ್ಣಬಣ್ಣ ಬಳಿದು ಮೂರು ಕೋಟಿಯ ಬಿಲ್ಲು ಹಾಕಿ ನುಂಗುವುದು ಯಡ್ಡಿ ಮಗನ ತಂತ್ರ. ಈಗಾಗಲೇ 83 ಲಕ್ಷ ರೂಪಾಯಿಯನ್ನು ಯಾವ ಕಾರಣಕ್ಕೆಂದು ಕೊಟ್ಟರು? ಮೂರು ಕೋಟಿಯ ಸುಳ್ಳು ಎಸ್ಟಿಮೇಟ್ ಕೊಟ್ಟವರ್‍ಯಾರು? ಹಿಂದೆಲ್ಲ ಮಾಡಿದ ಕಾಮಗಾರಿ ಏನಾಯಿತು? ಆ ಬಗ್ಗೆ ತನಿಖೆ ಏಕಿಲ್ಲ? ಈಗ ವಿಧಾನಸೌಧದ ಹೆಸರಲ್ಲಿ ನಡೆಯುತ್ತಿರುವ ಹಗಲು ದರೋಡೆಯನ್ನು ಯಾರೂ ಏಕೆ ಕೇಳುತ್ತಿಲ್ಲ?

ಇಂಥ ಯಾವ ಪ್ರಶ್ನೆಗಳಿಗೂ ಶಿಕಾರಿಪುರದಲ್ಲಿ ಉತ್ತರವಿಲ್ಲ. ಏಕೆಂದರೆ ಲೆಕ್ಕ ಕೇಳಿದವನಿಗಲ್ಲಿ ಉಳಿಗಾಲವಿಲ್ಲ!

ಕಳ್ಳನು ಕೊಟ್ಟ ಬಂಗಲೆ ಗಿಫ್ಟ್!


450 ಕೋಟಿ ಪ್ಯಾಕೇಜನ್ನು ಚೆಡ್ಡಿ ದೇಶಭಕ್ತರ ಗ್ಯಾಂಗ್ ನುಂಗಿ ಹಾಕಿದ ನೆನಪಿಗಾಗಿ ಸಣ್ಣದೊಂದು ಬಂಗಲೆ ಬೇಡವೆ?

ಹಿಂದೆ ಅಂಜನಾಪುರ ಡ್ಯಾಮ್ ಕೊಚ್ಚಿ ಹೋಗಿ ಮತ್ತೊಂದು ಪ್ಯಾಕೇಜ್ ಕಾಮಗಾರಿ ನಡೆದಾಗಲೂ ನಡೆದ ಕಮೀಷನ್ನಿನಲ್ಲಿ ಯಡ್ಡಿ ಮಂಗಳ ಭವನ ಎಂಬ ಕಲ್ಯಾಣ ಮಂಟಪ ಕಟ್ಟಿಸಿದ್ದರು. ಈಗ 450 ಕೋಟಿಯ ಪ್ಯಾಕೇಜ್ ಕಾಣಿಕೆಯಾಗಿ ಚನ್ನಹಳ್ಳಿ ರಸ್ತೆಯ ಅರಸುನಗರಲ್ಲೊಂದು ಭರ್ಜರಿ ಬಂಗಲೆ ಕಟ್ಟಿಸುತ್ತಿದ್ದಾರೆ. 80x100 ಅಳತೆಯ ನಿವೇಶನದಲ್ಲಿ ಸರಿಸುಮಾರು ಎರಡು ಕೋಟಿ ವೆಚ್ಚದಲ್ಲಿ ಈ ಬಂಗಲೆ ಕಟ್ಟಿಸಿಕೊಡುತ್ತಿರುವವನು ಕುಂದಾಪುರದ ಕೇಡಿ ಕಂಟ್ರಾಕ್ಟರ್ ಶರತ್‌ಶೆಟ್ಟಿ.

ಈಗಾಗಲೇ ಶಿಕಾರಿಪುರದಲ್ಲಿ ಯಡ್ಡಿಗೆ ಮೂರು ಬಂಗಲೆಗಳಿವೆ. ಸಾಲದ್ದಕ್ಕೆ, ಈಗ ಗಿಫ್ಟಾಗಿ ಬರುತ್ತಿರುವ ಶೆಟ್ಟಿಯ ಬಿಟ್ಟಿ ಬಂಗಲೆ. 2 ಕೋಟಿಯ ಬಂಗಲೆಯನ್ನೇ ಗಿಫ್ಟ್ ಕೊಟ್ಟ ಶೆಟ್ಟಿ ಇನ್ನೆಷ್ಟು ದೋಚಿರಲಿಕ್ಕಿಲ್ಲ? ಒಬ್ಬ ಕಂಟ್ರಾಕ್ಟರನೇ ಬಂಗಲೆ ಕೊಡುತ್ತಾನೆಂದರೆ ಮಿಕ್ಕೆಲ್ಲರೂ ಸೇರಿ ಇನ್ನೆಷ್ಟು ಕಮೀಷನ್ ಕೊಟ್ಟಿಲ್ಲ? 450 ಕೋಟಿಯಲ್ಲಿ ಕನಿಷ್ಠ 20 ಪರ್ಸೆಂಟ್ ಕಮೀಶನ್ ಸಿಕ್ಕರೂ ಅದೇ 90 ಕೋಟಿ. ಇನ್ನು ಶಿವಮೊಗ್ಗ ಜಿಲ್ಲೆಯ ... ಕೇಂದ್ರದ ... ಕಾಮಗಾರಿಯ 2000 ಕೋಟಿಯಲ್ಲಿ ಬರುವ ಪಾಲೆಷ್ಟು?

ಚನ್ನಹಳ್ಳಿ ರಸ್ತೆಯ ಅರಸುನಗರದ ಭರ್ಜರಿ ಬಂಗಲೆ





ಹಿತ್ಲ ಗ್ರಾಮದ ...

ಫ್ರೋಟೋದಲ್ಲಿ ನೋಡೋದಕ್ಕೆ ಥೇಟ್ ರೌಡಿ ಬನ್ನಂಜೆ ರಾಜಾನಂತೆ ಕಾಣುವ ಈತ ಬನ್ನಂಜೆ ರಾಜಾನಂತೂ ಅಲ್ಲ. ಆದರೆ ಭೂಗತದೊರೆ ಮುತ್ತಪ್ಪ ರೈಯನ್ನೇ ಯಾಮಾರಿಸಿದ ಭೂಪ! ಊರು ಬೆಳ್ಳಾರೆ. ಹೆಸರು ನಳಿನ್‌ಕುಮಾರ್ ರೈ. ಉದ್ಯೋಗ ಅರಸಿ ಮಂಗಳೂರಿಗೆ ಬಂದು ಕಾಲವಾಯಿತು. ಕೂಳೂರಿನ ವೈನ್‌ಸ್ಟೋರ್‌ವೊಂದರಲ್ಲಿ ಮದ್ಯ ಸುರಿದು ಕೊಡುವ ಕೆಲಸ ಮಾಡುತ್ತಿದ್ದವನ್ನು ಹಳೆಯ ನೆನಪು. ಆನಂತರ ಅದು ಹೇಗೋ ಸುಮ ಸೌರಭ ಎಂಬ ಪಾಕ್ಷಿಕ ಪತ್ರಿಕೆಯ ಎಂ.ಜೆ. ರಾವ್ ಸಂಪರ್ಕವಾಗಿ, ವೈನ್‌ಸ್ಟೋರ್ ಕೆಲಸ ಬಿಟ್ಟು ಪತ್ರಿಕೆ ಬಂಡಲು ಕಟ್ಟುವುದು, ಪತ್ರಿಕೆ ಹಂಚುವುದು, ಬಿಲ್ ಕಲೆಕ್ಷನ್ ಇತ್ಯಾದಿ ಮಾಡುತ್ತಿದ್ದ.



ತೂಗುಬಿಟ್ಟಿದ್ದೂ ಆಯಿತು. ಆನಂತರ ಶುರುವಿಟ್ಟಿದ್ದೇ ಉದ್ಯೋಗ ಹಂಚುವ ಭರ್ಜರಿ ಕಾಯಕ. ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಮಾರಾಟ. ಈತನ ಉದ್ಯೋಗ ಅವತಾರಗಳ ಬಣ್ಣದ ಜಾಹೀರಾತನ್ನು ನಂಬಿ ಕಚೇರಿಗೆ ಬರುವ ಅಮಾಯಕ ಯುವಕ-ಯುವತಿಯರ ಕೈಯಲ್ಲಿ ದಾಖಲಾತಿ ಫೀಸು ಎಂದು ರೂ. 250 ರಂತೆ ವಸೂಲಿ. ಕೆಲಸ ಸಿಕ್ಕಿದರೆ ಪ್ರಥಮ ತಿಂಗಳ ಸಂಬಳದ ಸುಲಿಗೆ. 'ಉದ್ಯೋಗ ದರ್ಶನ'ದ ಹೆಸರಲ್ಲಿ ಈತನ ಉದರಪೋಷಣೆ ಮತ್ತು ಅಮಾಯಕ ಯುವಕ- ಯುವತಿಯ ಶೋಷಣೆ ಒಂದೆಡೆಯಾದರೆ ಈ ಸ್ತ್ರೀಲೋಲನ 'ಮ್ಯಾರೇಜ್ ಬ್ಯೂರೋ' ಅಂತೂ ಯಾಮಾರಿದ ಮುಗ್ಧ

ಮಾಜಿ ಮ್ಯಾನೇಜರ್ ಕೂಡಾ ಸೇರಿಕೊಂಡಿದ್ದಾನೆ. ಪ್ರತೀ ತಿಂಗಳು ಒಂದೊಂದು ದಿಕ್ಕಿಗೆ ಇವರ ವ್ಯವಸ್ಥಿತ ದಾಳಿ. ಆ ಏರಿಯಾದಲ್ಲಿರುವ ಬಂಟರೆಲ್ಲರ ಪಟ್ಟಿ ತಯಾರಿಸಿ, ನಮ್ಮದು ಸ್ವಜಾತಿ ಬಾಂಧವರ ಪತ್ರಿಕೆ ಎಂದೆಲ್ಲಾ ಸಂದರ್ಶನ-ಗುಣಗಾನ ಮಾಡಿ, ಜಾಹೀರಾತು-ಡೊನೇಶನ್ ಅಂತ ವಸೂಲಿಬಾಜಿ ನಡೆಸಿ, ಬಂದ ಕಲೆಕ್ಷನ್ ಹಣವನ್ನು ಊಟ-ತಿಂಡಿ-ತೀರ್ಥದ ಖರ್ಚು ಕಳೆದು ನಿಯಮಿತವಾಗಿ ಹಂಚಿಕೊಳ್ಳುವುದು ಇವರ ಕಾಯಕ. ಹೀಗೆ ಅವರು ಬಂಟರ ಸಂಗಾತಿ ಹೆಸರಲ್ಲಿ ದುಬೈಯ ಬಿ.ಆರ್. ಶೆಟ್ಟಿಯಿಂದ ಹಿಡಿದು ಬಿಡದಿಯ ಮುತ್ತಪ್ಪ ರೈತನಕ ಯಾರನ್ನೂ ಬಿಡದೆ ಸುಲಿದಿದ್ದಾರೆ. ಸುಲಿಯುತ್ತಲೂ ಇದ್ದಾರೆ.

ಯಾವಾಗ ಈತನಿಗೆ ಬಂಟರ ಸಂಗಾತಿ ಹೆಸರಲ್ಲಿ ಜಾತಿ ಬಾಂಧವರನ್ನು ಸುಲಿಯುವ ರುಚಿ ಸಿಕ್ಕಿತೋ ಆನಂತರ ಈತ ಬಹುಸಂಖ್ಯೆಯಲ್ಲಿರುವ ಒಕ್ಕಲಿಗರನ್ನು ಸುಲಿಯಲು ಶುರುವಿಟ್ಟುಕೊಂಡ. ಅದಕ್ಕೆ ವೇದಿಕೆ

ಹುಷಾರ್ ಈತ ನಯವಂಚಕ ನಳಿನ್‌ಕುಮಾರ್ ರೈ!

ಕಲೆಕ್ಷನ್ ಹಣ ಕಿಸೆ ಸೇರುತ್ತಲೇ ದುರಾಸೆ ಮೊಳೆಯಿತು. ಮುಂದೊಂದು ದಿನ ಅಷ್ಟೂ ಹಣವನ್ನು ಕಿಸೆಗಿಳಿಸಿ ಈಚೆಗೆ ಬಂದವನು ಮತ್ತೆ ಅತ್ತ ಹೋಗಲಿಲ್ಲ. ಸುಮ ಸೌರಭದಲ್ಲಿ ಕೆಲಸ ಕಳಕೊಂಡು ಬೀದಿಗೆ ಬಿದ್ದ ನಳಿನ್‌ಕುಮಾರ್‌ಗೆ ಆ ಹೊತ್ತಿಗೆ ಬೆಂಬಲಕ್ಕೆ ನಿಂತ ಅನಾಥ ರಕ್ಷಕನ ಹೆಸರು ಭಾಸ್ಕರ್ ಬಲ್ಯಾಯ. ಆಗಿನ್ನು ಸುಮ ಸೌರಭದ ಪುಟಗಳನ್ನು ತುಂಬುವ ಕಾಯಕದಲ್ಲಿ ತೊಡಗಿದ್ದ ಈ ಬಲ್ಯಾಯ 'ನವಭಾರತ' ಪತ್ರಿಕೆ ವರದಿಗಾರನಾಗಿ, ಮಂಗಳಾ ಪತ್ರಿಕೆ ಸರ್ಕ್ಯೂಲೇಷನ್ ಮ್ಯಾನೇಜರ್ ಆಗಿ ಅಲ್ಲೂ 7,200 ರೂ. ವಂಚಿಸಿ ಈಚೆಗೆ ಬಂದವನು. ಬಲ್ಯಾಯನೇ ಹೇಳಿಕೊಂಡು ತಿರುಗುವಂತೆ ಆತ 'ಹಾಯ್ ಬೆಂಗಳೂರು'ನ ಉಪಸಂಪಾದಕನಂತೆ. ಅದರ ಸತ್ಯಾಸತ್ಯತೆ ಏನೇ ಇರಲಿ ಅದೆಲ್ಲ ಆತನ ಉದರನಿಮಿತ್ತ ಮಾತುಗಳು.

ಇಂತಹ ಬಲ್ಯಾಯ ಬೀದಿಗೆ ಬಿದ್ದ ನಳಿನ್ ಕುಮಾರ್‌ನನ್ನು ಕರೆದು 'ನೀನೊಂದು ಮದುವೆಯಾಗು. ಬಂದ ವರದಕ್ಷಿಣೆ ಹಣದಲ್ಲಿ ಸ್ವಂತದೊಂದು ಬ್ಯುಸಿನೆಸ್ ಅಥವಾ ಪತ್ರಿಕೆ ನೀನೇ ಶುರು ಮಾಡು. ಜತೆಗೆ ನಾನಿದ್ದೇನೆ' ಎಂದು ಧೈರ್ಯ ತುಂಬಿದ್ದೇ ತಡ, ನಳಿನ್‌ಕುಮಾರ್ ಮದುವೇನೂ ಆದದ್ದಾಯಿತು. ಗುರು ಬಲ್ಯಾಯನ ಮಾರ್ಗದರ್ಶನದಲ್ಲಿ ಸುಮ ಸೌರಭ ಕಚೇರಿಯ ಪಕ್ಕ ಓಲ್ಡ್ ಕೊಂಟ್ ರಸ್ತೆಯಲ್ಲಿ ಕಚೇರಿ ತೆರೆದು ಅದರ ಮುಂದೆ 'ಉದ್ಯೋಗ ದರ್ಶಕ' ಹೆಸರಿನ ನಾಮಫಲಕವನ್ನು

ಯುವತಿಯರ ಮಾನ ಕಳೆಯುವ ವೇದಿಕೆಯಾಗಿತ್ತು. ಮದುವೆಯಾಗುವ ಹುಡುಗನನ್ನು ತೋರಿಸುವ ನೆಪದಲ್ಲಿ ಕಾರವಾರದ ಹುಡುಗಿಯೋರ್ವಳನ್ನು ಕೆಡಿಸಿದ್ದು ಸೇರಿದಂತೆ 4 ವಂಚನಾ ಕೇಸುಗಳು ಈತನ ವಿರುದ್ಧ ಪಾಂಡೇಶ್ವರ ಠಾಣೆಯಲ್ಲಿ ದಾಖಲಾಗಿವೆ.

ಮಂಗಳೂರು

ಬೆಳಕಿಗೆ ಬಾರದ್ದು ಅದೆಷ್ಟೋ! ಹೆಂಡತಿ ಹೆಸರೆತ್ತಿದರೆ ಥರಥರ ನಡುಗುವ ನಳಿನ್ ಕುಮಾರ್ ರೈ ಪ್ರಭಾದೇವಿ ಎನ್ನುವ ಪತ್ನಿಯ ಅಮ್ಮಾವ್ರ ಗಂಡ. ಶೂರ್ಪನಖಿ ಸ್ವಭಾವದ ಈಕೆ ಕೂಡಾ ಉದ್ಯೋಗ ಅರಸಿ ಕಚೇರಿಗೆ ಬರುವ ಅಮಾಯಕ ಹುಡುಗಿಯರನ್ನು ಮನೆಕೆಲಸಕ್ಕೆ ನೇಮಿಸಿ ಹಿಂಸಿಸುವ ರಾಕ್ಷಸಿ!

ಒಂದಕ್ಷರ ಬರೆಯಲು ಬಾರದಿದ್ದರೂ, ಪತ್ರಿಕೆಯ ಸಂಪಾದಕನಾಗಬಹುದು ಎನ್ನುವುದಕ್ಕೆ ಉತ್ತಮ ನಿದರ್ಶನವೇ ಈ ನಳಿನ್‌ಕುಮಾರ್ ರೈ. ಕನ್ನಡಿಗರ ಸಂಗಾತಿ ಈತನ ಪ್ರಥಮ ಪತ್ರಿಕೆ. ಅದು ಒಂದು ವರ್ಷದಲ್ಲೇ ಅಕಾಲ ನಿಧನ ಹೊಂದಿದ ಬಳಿಕ ಹುಟ್ಟಿದ್ದೇ ಬಂಟರ ಸಂಗಾತಿ. ಆ ಮೂಲಕ ತನ್ನ ಸ್ವಜಾತಿ ಬಂಟರ ಸಾರಾಸಗಟು ಸುಲಿಗೆ. ತನ್ನ ಕಚೇರಿ ಪಕ್ಕದಲ್ಲೇ ಒಂದು ಫ್ಲಾಟು, ಓಡಾಡಲು ಕಾರು ಎಲ್ಲಾ ಹೊಂದಿರುವ ಈ ನಳಿನ್‌ಕುಮಾರನೊಂದಿಗೆ ನಾಲ್ವರ ವಂಚಕ ಗ್ಯಾಂಗ್ ಕೂಡ ಇದೆ. ಅದರಲ್ಲಿ ಭಾಸ್ಕರ ಬಲ್ಯಾಯನದ್ದು ಬರೆಯುವುದಷ್ಟೇ ಕೆಲಸ. ಅದಕ್ಕಾತ ಪಡೆಯುವ ಸಂಭಾವನೆ ಕ್ವಾಟರ್ ವಿಸ್ಕಿ ಮಾತ್ರ. ಜತೆಗೊಬ್ಬ ಸರ್ಕಾರಿ ಸಂಘದ

ಆಗಿದ್ದೇ 'ಗೌಡರ ಮಿತ್ರ' ಎನ್ನುವ ಇನ್ನೊಂದು ಪತ್ರಿಕೆ. ಗೌಡರ ಪತ್ರಿಕೆಗೊಬ್ಬ ಗೌಡ ಇರಲಿ ಎಂದು ಪ್ಲಾನ್ ಹಾಕಿದ ಈ ಪ್ರಳಯಾಂತಕ ಸುಳ್ಯದ ಎಂ.ಬಿ. ಸದಾಶಿವರನ್ನು ಗೌರವ ಸಂಪಾದಕ ಮಾಡಿದ. ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಸದಾಶಿವ 'ಗೌಡರ ಮಿತ್ರ' ಪತ್ರಿಕೆಯ ಸಂಪಾದಕ ಎನ್ನುವ ಹೆಮ್ಮೆಯಲ್ಲಿ ಬೀಗುತ್ತಿರುವಾಗಲೇ ಈ ನಳಿನ್ ಕುಮಾರ್ ಡಿ.ಕೆ. ಶಿವಕುಮಾರ್ ಎಸೆದ ಎಂಜಲು ಕಾಸಿಗಾಗಿ ಕುಮಾರಸ್ವಾಮಿಯನ್ನು ತೆಗಳಿ ಬರೆದ. ಸದಾಶಿವ ಆನಂತರ ಈತನ ನೆರಳು ಕಂಡರೂ ತಪ್ಪಿಸಿಕೊಳ್ಳುವಂತಾಯಿತು.

ಇಷ್ಟೆಲ್ಲಾ ಆಗುವಾಗ ಈತನಲ್ಲಿ ಯಾವುದಕ್ಕಾದರೂ ಅಧ್ಯಕ್ಷನಾಗುವ ಖಯಾಲಿಯೊಂದು ಅದೆಲ್ಲಿಂದಲೋ ಮೊಳೆಯಿತು. ಕಾ.ವಿ. ಕೃಷ್ಣರಾವ್ ಎಂಬುವರ ನೇತೃತ್ವದಲ್ಲಿ 'ಮಂಗಳ ಕಲಾ ಸಾಹಿತ್ಯ ವೇದಿಕೆ' ಅಸ್ತಿತ್ವದಲ್ಲಿರುವಾಗ, ಅದೇ ಹೆಸರಿನ ನಳಿನ್‌ಕುಮಾರ್ ರೈ ಅಧ್ಯಕ್ಷನಾಗಿರುವ ವೇದಿಕೆಯೊಂದು ಹುಟ್ಟಿಕೊಂಡಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಟ್ಯಾಬ್ಲಾಯ್ಡ್ ಪತ್ರಿಕೆಗಳ ಸಂಪಾದಕರುಗಳೇ ಸೇರಿ 'ಎಡಿಟರ್ಸ್ ಕ್ಲಬ್' ಎಂಬ ಸಂಘವೊಂದನ್ನು ರಚಿಸಿಕೊಂಡಿದ್ದಾರೆ. ಕಳೆದ ಒಂದು ವರ್ಷದಿಂದ ಅದರಲ್ಲಿ ಈ ನಯವಂಚಕ ನಳಿನ್‌ಕುಮಾರನೂ ಸದಸ್ಯನಾಗಿದ್ದ. ಇತ್ತೀಚೆಗೆ ಅದರ ಪದಾಧಿಕಾರಿಗಳ ಬದಲಾವಣೆ ಸಂದರ್ಭದಲ್ಲಿ ನಳಿನ್‌ಕುಮಾರ್‌ನಿಗೂ ಅಧ್ಯಕ್ಷನಾಗು ಆಸೆ ಹುಟ್ಟಿದೆ. ಆದರೆ ಈತನ ನಾಯಿಬುದ್ಧಿ ತಿಳಿದವ ಅದಕ್ಕೆ ಒಪ್ಪಲಿಲ್ಲ. ಆಗ ಈತನ ಅಧ್ಯಕ್ಷತೆಯಲ್ಲಿ ಇನ್ನೊಂ ಎಡಿಟರ್ಸ್ ಕ್ಲಬ್ ಉದಾಯವಾಯಿತು. ತಮಾಷೆ ವಿಚಾರವೆಂದರೆ ಕೇವಲ ಮೂರು ದಿನಗಳ ಅಂತರದ ಉದಯವಾದ ಈತನ ಎರಡೂ ಸಂಘಗಳಿಗೆ ಈ ಅಧ್ಯಕ್ಷನಾದರೆ, ಹೆಂಡತಿ, ಹೆಂಡತಿ ತಮ್ಮ-ತಂಗಿ ಸೇ ಕುಟುಂಬ ಪರಿವಾರದವರೇ ಸದಸ್ಯರುಗಳು. ಹೀ ತನ್ನ ವಂದನಾ ಕಾಯಕಕ್ಕೆ ಬಂಟರ ಸಂಗಾತಿ ಎನ್ನು ಪತ್ರಿಕೆಯನ್ನೇ ಆಯುಧವನ್ನಾಗಿಸಿಕೊಂಡಿರುವ ನಳಿ ಕುಮಾರ್ ತನ್ನ ಪತ್ರಿಕೆಗೆ ಕುತ್ತುಬಂದರೆ ಇನ್ನೊಂ ಅಸ್ತ್ರ ಇರಲಿ ಎಂದು 'ಬಂಟರ ಮಿತ್ರ' ಟೈಟಲ ರೆಡಿಯಾಗಿ ಇಟ್ಟಿದ್ದಾನೆ. ವಂಚನೆ ಮಾತ್ರ ನಿರಾತಂಕವಾ ನಡೆಯುತ್ತಲೇ ಇದೆ.

-ಭೂಮಿಕ

ಬಂಟರ ಸಂಘದ ಅಧ್ಯಕ್ಷರಿಗೇ ತಿರುಗಿಬಿದ್ದ!

ಬಂಟರ ಹೆಸರು ಹೇಳಿ ಮಾಡಬಾರದ್ದನ್ನೆಲ ಮಾಡುತ್ತಾ ಬಂದಿರುವ ನಳಿನ್‌ಕುಮಾರನ ಸೋಗ ಲಾಡಿತನಗಳಿಗೆ ಸೊಪ್ಪು ಹಾಕದೇ ಉಗಿದು ಕಳುಹಿ ದವರೆಂದರೆ ಬಂಟರ ಸಂಘದ ಅಧ್ಯಕ್ಷ ಅಜಿತ್ ಕುಮಾರ್ ಮಲಾಡಿ. ಅಲ್ಲಿ ಮಂಗಳಾರತಿಯಾದದ್ದೆ ಈತ ಸೀದಾ ಬಂದು ಸದಾನಂದ ಶೆಟ್ಟಿಯ ಆಸ್ಥಾನದಲ್ಲಿ ಪುಂಗಿ ಊದತೊಡಗಿದ. ಮಾಜಿ ಅಧ್ಯಕ್ಷ ಸದಾನಂದ ಶೆಟ್ಟಿಗೆ ಹಾಲಿ ಅಧ್ಯಕ್ಷ ಅಜಿತ್‌ಕುಮಾರ್ ಮಲಾಡಿ ಬಗ್ಗೆ ಚಾಡಿ ಹೇಳಿ ಸುಪ್ರೀತಗೊಳಿಸಿದ್ದು ಸಾಲದೆಂಬಂ ತನ್ನ ಬಾಡಿಗೆ ಬರಹಗಾರ ಭಾಸ್ಕರ ಬಲ್ಯಾಯನ ಕೈಯಲ್ಲಿ ಮಲಾಡಿ ವಿರುದ್ಧ ಮಾನಹಾನಿ ಕರ ವರದಿಗಳನ್ನು ಹೊಸೆದು, ಪ್ರಕಟಣೆಗಳನ್ನು ಕೊಟ್ಟು ವಿಕೃತ ಆನಂದ ಅನುಭವಿಸಿದ.


ಇದಕ್ಕೆಲ್ಲ ಕ್ಯಾರೆ ಅನ್ನದ ಅಜಿತ್‌ಕುಮಾರ್ ಮಲಾಡಿಯನ್ನು ಮಣಿಸಲು ಬಂಟರ ಸಂಘಕ್ಕೆ ರೆಬೆಲ್ ಆಗಿ ಕರಾವಳಿ ಯುವ ಬಂಟರ ಸಂಘವೆಂಬ ಹೊಸ ಸಂಘವನ್ನು ಅಸ್ತಿತ್ವಕ್ಕೆ ತಂದ. ಒಂದು ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಮಂಗಳೂರು ಬಂಟರ ಸಂಘ ನಳಿನ್ ಕುಮಾರ್‌ನಂಥ ಕೊಳಕು ಮಂಡಲದ ಉಪದ್ರವಕ್ಕೆ ಸಿಕ್ಕಿ ಎರಡು ಹೋಳಾಗಿಹೋಯಿತು. ಇಷ್ಟೆಲ್ಲಾ ಆದರೂ ಈತನ ವಿರುದ್ಧ ಚಕಾರವೆತ್ತದೇ, ಯಾವುದೇ ಕಾನೂನು ಕ್ರಮಕ್ಕೂ ಮುಂದಾಗದೆ, ಕಪೋಲಕಲ್ಪಿತ ಅಶ್ಲೀಲಗಳನ್ನು ಬರೆದಾಗಲೂ ಎಲ್ಲವನ್ನು ಸಹಿಸಿಕೊಂಡು ಬಂದ ಅಜಿತ್‌ಕುಮಾರ್ ಮಲಾಡಿಯವರ ಸಹನೆ ಮಾತ್ರ ದೊಡ್ಡದು ಎಂದಷ್ಟೇ ಈಗ ಹೇಳಬಹುದಾಗಿದೆ.

ಅನ್ಸಾರಿಯ ಅಸಡ್ಡೆ: ಗಬ್ಬೆದ್ದಿದೆ ಕೊಪ್ಪಳ ಜಿಲ್ಲಾಸ್ಪತ್ರೆ!

'ನೋಡ್ರಿ, ನನಗೆ ಗಂಗಾವತಿ ಡೆವಲಪ್‌ಮೆಂಟ್ ಬಿಟ್ರೆ ಬ್ಯಾರೆ ವಿಷಯ ಬೇಕಿಲ್ಲ' ಎನ್ನುವ ಜಿಲ್ಲಾ ಮಂತ್ರಿ ಇಕ್ಬಾಲ್ ಅನ್ಸಾರಿಯ ಅಸಡ್ಡೆ ಒಂದೆಡೆಯಾದರೆ 'ನನಗೆ ರೊಕ್ಕ ಬಿಟ್ರೆ ಬ್ಯಾರೆ ಯಾರೂ ಕಾಣಿಸೊಲ್ಲ' ಅನ್ನುವ ಕೊಪ್ಪಳ ಶಾಸಕನ ಧನದಾಹಕ್ಕೆ ಸಿಕ್ಕು ಗಬ್ಬೆದ್ದು ಹೋಗಿರುವುದು ಕೊಪ್ಪಳ ಜಿಲ್ಲಾ ಆಸ್ಪತ್ರೆಯೆಂಬ ಮೃತ್ಯುಕೂಪ.

ಜುಲೈ 6ರ ರಾತ್ರಿ ಕೊಪ್ಪಳಕ್ಕೆ ಬಂದಿದ್ದ ಮುಖ್ಯಮಂತ್ರಿ ಕುಮಾರಸ್ವಾಮಿ ಇದೇ ಜಿಲ್ಲಾಸ್ಪತ್ರೆ ಪಕ್ಕದ ಈದ್‌ಗಾ ಮೈದಾನದಲ್ಲಿ ಕಾಂಪ್ಲೆಕ್ಸ್ ಅಡಿಗಲ್ಲು ಹಾಕಿ, ಅದರ ಮುಂದಿನ ಹಾದಿಯಲ್ಲೇ ಸಾಗಿ, ಹಿಂದಿರುಗಿ ವಾಲ್ಮೀಕಿ ಕಲ್ಯಾಣ ಮಂಟಪಕ್ಕೂ ಹೋದರು. ಜೊತೆಗೆ ಅನ್ಸಾರಿ, ಶಾಸಕ ಬಸವರಾಜ ಹಿಟ್ನಾಳ್ ಕೂಡ ಇದ್ರು. ಆದರೆ ಇವರ್‍ಯಾರಿಗೂ ಇಲ್ಲೊಂದು ಆಸ್ಪತ್ರೆ ಇದೆ ಎಂಬ ಖಬರು ಆವತ್ತಿರಲಿಲ್ಲ, ಇವತ್ತಿಗೂ ಇಲ್ಲ.

ನಿತ್ಯ ಕಮ್ಮಿ ಎಂದರೂ 500 ಜನ ರೋಗಿಗಳು ಬರುವ ಈ ಜಿಲ್ಲಾಸ್ಪತ್ರೆಯಲ್ಲಿ ಕನಿಷ್ಠ ಮೂಲಭೂತ ಸೌಲಭ್ಯಗಳಾದ ನೀರು, ಮೂತ್ರಾಲಯವಿಲ್ಲ, ಬೆಳಕಿಲ್ಲ, ಇನ್ನು ವೈದ್ಯಕೀಯ ಸೌಲಭ್ಯಗಳು, ಔಷಧಿ, ಗುಳಿಗೆ ಇಲ್ಲ, ಡಜನ್ ವೈದ್ಯರಲ್ಲಿ ಬರೀ ಆರು ಜನ ಇದ್ದಾರೆ. 70 ಸಿಬ್ಬಂದಿಯಲ್ಲಿ 40 ಹುದ್ದೆಗಳು ಖಾಲಿ ಇವೆ. ಬರೀ ವೃದ್ಧಾಪ್ಯವೇತನ, ವಿಧವಾ ವೇತನ ಕೊಡಿಸಿ ಅವನ್ನೇ ಓಟ್ ಬ್ಯಾಂಕ್ ಮಾಡಿಕೊಳ್ಳುತ್ತಿರುವ ಶಾಸಕ ಹಿಟ್ನಾಳ್‌ಗೆ ಇದೇ ಜಿಲ್ಲಾಸ್ಪತ್ರೆಯಲ್ಲಿ ದುಡ್ಡಿರದ, ಬಡವರಿಗೆ ನೋ ಎಂಟ್ರಿ ಎಂಬುದು ಗೊತ್ತೆ ಇಲ್ಲ. ಯಾರಾದರೂ ಬೇಗ ಚಿಕಿತ್ಸೆ ನೀಡಿ, ಔಷಧಿ ಯಾಕಿಲ್ಲ ಎಂದು ಕೇಳಿದರೆ ಇಲ್ಲಿನ ಕೆಲ ಘಾತುಕ ವೈದ್ಯರು 220333(ನಗರ ಪೊಲೀಸ್ ಠಾಣೆ)ಗೆ ಫೋನ್ ಮಾಡಲಾ? ಮುಚ್ಕೊಂಡು ಹೊಗ್ತೀರಾ ಅಂತಾರೆ. ಕೆಲ ಸುಳ್ಳು ಪ್ರಕರಣಗಳನ್ನು ಪೊಲೀಸರವರೆಗೂ ಒಯ್ದದ್ದೂ ಇದೆ.




ಇಕ್ಬಾಲ್ ಅನ್ಸಾರಿ

ಇಲ್ಲಿಗೆ ಹೊಸದಾಗಿ ಬರೋ ವೈದ್ಯರಿಗೆ ಈ ಊರ ಜನ ಚೆನ್ನಾಗಿಲ್ಲ, ಜಗಳಗಂಟರು, ಹಾಗೆ-ಹೀಗೆ ಕಥೆ ಹೇಳಿ ಓಡಿಸುವ ಇಲ್ಲಿನ ಲಕ್ಷ್ಮೀನಾರಾಯಣ ಮುಂತಾದ ವೈದ್ಯರೇಕೆ ಕೊಪ್ಪಳ ಬಿಡುತ್ತಿಲ್ಲ, ಕೊಪ್ಪಳ ಜಿಲ್ಲೆಯಾಗಿ 10 ವರ್ಷ ಕಳೆದರೂ ಕಿಂಚಿತ್ತೂ ಸುಧಾರಿಸದ ಈ ಆಸ್ಪತ್ರೆಯಲ್ಲಿ ಹಿಂದೆ ಡಿಎಸ್ ಆಗಿದ್ದ ಡಾ. ರಾಜೇಂದ್ರ ಪ್ರಸಾದ್ ಒಂದಿಷ್ಟು ಸುಧಾರಣೆ ಮಾಡಿದ್ದರು. ಅವರ ಮೇಲೆ ಇಲ್ಲ-ಸಲ್ಲದ ಗೂಬೆ ಕೂರಿಸಿ ಕಳಿಸಿದ ಇಲ್ಲಿನ ವೈದ್ಯ-ಸಿಬ್ಬಂದಿ ಈಗ ಹಾಯಾಗಿ ಮೇಯುತ್ತಿದ್ದಾರೆ. ಈಗಂತೂ ಪರಮಧನದಾಹಿ ಲಕ್ಷ್ಮಿನಾರಾಯಣ ಎಂಬ ವೈದ್ಯ ಡಿ.ಎಸ್. ಆದಾಗಿನಿಂದ ಆತನ ಭ್ರಷ್ಟಾಚಾರ ಮೇರೆ ಮೀರಿದೆ.

ಹೃದಯಾಘಾತವಾದ, ಹೆರಿಗೆ ಪೇಶಂಟ್‌ಗಳೇನಾದರೂ ಬಂದರೆ ಇಲ್ಲಿ ಹೆಣವಾಗುವುದು ಖಚಿತ. ಈ ಹಿಂದೆ ಟೈಲರ್ ರಾಜಣ್ಣ ಎಂಬಾತ ಹೃದಯಾಘಾತವಾಗಿ ಜಿಲ್ಲಾಸ್ಪತ್ರೆಗೆ ಬಂದರೆ ಲಕ್ಷ್ಮಿನಾರಾಯಣ ಬೇಗ ಚಿಕಿತ್ಸೆ ನೀಡದೆ ಆತನ ಸಾವಿಗೆ ಕಾರಣನಾದ. ರೊಚ್ಚಿಗೆದ್ದ ಜನರ ಕೈಯಲ್ಲಿ ಆವತ್ತು ಚಂದಿಯಾಗಬೇಕಿದ್ದ ಲಕ್ಷ್ಮಿನಾರಾಯಣ ಹೇಗೋ ಬಚಾವಾಗಿಬಿಟ್ಟ.

ಹಿಂದಿನ ಶಾಸಕ ಸಂಗಣ್ಣ ಕರಡಿಯ ಅವಧಿಯಲ್ಲೂ ಅಕ್ಷರಶಃ ನರಕವಾಗಿದ್ದ ಈ ಜಿಲ್ಲಾಸ್ಪತ್ರೆ ಈಗಿನ ಶಾಸಕನ ಧನದಾಹಕ್ಕೆ ಸಿಕ್ಕು ತತ್ತರಿಸುತ್ತಿದೆ. ಇನ್ನು ಧರ್ಮಸಿಂಗ್ ಸರ್ಕಾರದಲ್ಲಿ ವೈದ್ಯಕೀಯ ಶಿಕ್ಷಣ ಸಚಿವನಾಗಿದ್ದ ಇಕ್ಬಾಲ್ ಅನ್ಸಾರಿ ಕೊಪ್ಪಳಕ್ಕೆ ಬಂದಾಗೊಮ್ಮೆ ಇಲ್ಲಿ ಮೆಡಿಕಲ್ ಕಾಲೇಜು ತೆರೆಯಲಾಗುವುದು ಎಂದು ರೀಲು ಬಿಡುತ್ತಲೇ ಹೋದ. ಜಿಲ್ಲಾಸ್ಪತ್ರೆ ಸುಧಾರಣೆಯ ಮಾತೇ ಆಡಲಿಲ್ಲ. ಇವತ್ತಿಗೂ ಈ ಆಸ್ಪತ್ರೆಯಲ್ಲಿ ಅನ್ಸಾರಿ ಹುಟ್ಟುಹಬ್ಬದಂದು ಹಾಲು-ಹಣ್ಣು ವಿತರಿಸಿ ಬರ್‍ತಾರೆ ಹೊರತು ಆಸ್ಪತ್ರೆ ಸುಧಾರಣೆ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ.

ಸೊಳ್ಳೆ, ತಿಗಣೆ, ಹಂದಿಗಳ ವಾಸಸ್ಥಳವಾಗಿರುವ ಜಿಲ್ಲಾಸ್ಪತ್ರೆಯಲ್ಲಿ ಒಂದು ಸಿರೆಂಜ್ ಕೂಡ ಸಿಗುವುದಿಲ್ಲ. ಔಷಧಿಯಂತೂ ಮೊದಲೇ ಇಲ್ಲ. ಆಸ್ಪತ್ರೆಯಲ್ಲಿ ಔಷಧಿ ಇದ್ದರೂ, ಲ್ಯಾಬ್‌ಗಳಿದ್ದರೂ ಆಸ್ಪತ್ರೆ ಮುಂದಿನ ಖಾಸಗಿ ಲ್ಯಾಬ್, ಔಷಧಿ ಅಂಗಡಿ ಯಾವಾಗಲೂ ಹೌಸ್‌ಫುಲ್ ಆಗಿರುತ್ತವೆ. ಆಸ್ಪತ್ರೆಗೆ ಬಂದ ಔಷಧಿ ಖಾಸಗಿ ಅಂಗಡಿಗಳ ಪಾಲಾಗುತ್ತಿದೆ. ಈಗ್ಗೆ 4 ತಿಂಗಳ ಹಿಂದೆ ಜಿಲ್ಲಾಸ್ಪತ್ರೆಯಿಂದ ಎರಡು ಬಾಕ್ಸ್ ಔಷಧಿಯನ್ನು ಪಕ್ಕದ ಸಂಧಿಯಲ್ಲಿ ಬಚ್ಚಿಡುವಾಗ ಹತ್ತಿರದ ಗ್ಯಾರೇಜ್‌ಗೆ ರಿಪೇರಿಗೆ ಬಂದಿದ್ದ ಲೋಕಾಯುಕ್ತ ಅಧಿಕಾರಿ ಕಣ್ಣಿಗೆ ಬಿದ್ದು ಬಯಲಾಗಿತ್ತು. ನಂತರ ಔಷಧಿ ಕಳ್ಳಸಾಗಾಣಿಕೆಯ ಆ ಪ್ರಕರಣಕ್ಕೆ ಚೆನ್ನಾಗಿ ಸಗಣಿ ಸಾರಿಸಿ ಮುಕ್ತಾಯ ಹಾಡಲಾಯಿತು. ಆಗ ಡಿಎಚ್‌ಓ ಆಗಿದ್ದವನು ಪರಮಭ್ರಷ್ಟ ಡಿ.ಎಚ್.ಮುಲ್ಲಾ, ಪ್ರಶಸ್ತಿ-ಪದಕ-ಹಾರ ತುರಾಯಿಯಲ್ಲೇ ಸಮಯ ಕಳೆಯುತ್ತ ಲಕ್ಷಾಂತರ ಹಣ ನುಂಗಿ ರಿಟೈರ್ ಆದ. ಇನ್ನೂ ಇಲ್ಲಿನ ರೋಗಿಗಳಿಗೆ ನೀಡುವ ಆಹಾರದ ವಿಷಯದಲ್ಲಿ ದೊಡ್ಡ ಪ್ರಮಾಣದ ಹಗರಣ ಆಸ್ಪತ್ರೆ ವೈದ್ಯರು, ಆರೋಗ್ಯ ಇಲಾಖೆಯ ಅಧಿಕಾರಿಗಳ ಒಪ್ಪಿಗೆಯಲ್ಲೇ ನಡೆಯುತ್ತಿದೆ. ಒಂದು ಊಟಕ್ಕೆ 15 ರೂಪಾಯಿಯಂತೆ ಇಲಾಖೆ ಪಾವತಿಸಿದರೂ ಕಳಪೆ



ಬಸವರಾಜ್ ಹಿಟ್ನಾಳ್

ಆಹಾರ ನೀಡಲಾಗುತ್ತಿದೆ. ಒಂದು ದಿನಕ್ಕೆ 40 ರೋಗಿಗ ಅಡ್ಮಿಟ್ ಆದ್ರೂ ಎಂದಿಟ್ಟುಕೊಳ್ಳಿ ಅವರಲ್ಲಿ ಅರ್ಧದಷ ಜನ ಸ್ಥಳೀಯರು ಸಂಜೆ ಹೊತ್ತಿಗೆ ಡಿಸ್‌ಚಾರ್ಜ ಆಗುತ್ತಾರೆ ಇಲ್ಲಾ ಮನೆಯಿಂದ ಊಟ ತರುತ್ತಾ ಆದರೆ ಇಡೀ 40 ಜನ ಹೆಸರಲ್ಲಿ ಮಾತ್ರ ಹಣ ಕೊ ಹೊಡೆದು, ವರ್ಷಕ್ಕೆ ಲಕ್ಷಾಂತರ ರೂಪಾಯಿ ದೋ ಲಾಗುತ್ತದೆ. ಹೊಸ ಜಿಲ್ಲಾಸ್ಪತ್ರೆ ಕಟ್ಟಡ ಕಾಮಗಾರಿ ಇಲ್ಲಿನ ರಾಜಕಾರಣಿಗಳ ಅಡ್ಡಗಾಲು ಬೇರೆ. ಕಟ್ಟ ನಿರ್ಮಾಣ ಕುರಿತ ತಡೆಯಾಜ್ಞೆ ತೆರ ಗೊಂಡಿದ್ದರೂ ಕಟ್ಟಡಕ್ಕಾಗಿ ಹಣ ಬಂ ಬಿದ್ದಿದ್ದರೂ ಕೆಲಸ ಆರಂಭಿಸಬೇಕೆಂ ಕಾಳಜಿ ಶಾಸಕನಿಗೂ ಇಲ್ಲ, ಜಿ ಮಂತ್ರಿಗೂ ಇಲ್ಲ.

ಮೊನ್ನೆ ಕುಮಾರಸ್ವಾಮಿ ಬಂದಾ ಸ್ವಾಗತ ಭಾಷಣ ಮಾಡಿದ ಶಾಸಕನ ಜನ ನೀರಿಳಿಸಿದ್ದಾರೆ. ಅವರು ಜೆಡಿಎ ನವರು ಅದಕ್ಕೆ ಮಾಡಿದರೂ ಅ ತಳ್ಳಿಹಾಕಬಹುದಾದರೂ ಶಾಸಕ ನಿಷ್ಕಾಳ ಬಂದಿರುವ ಪ್ರತಿಕ್ರಿಯೆ ಅದು. ಗಂಗಾವ ಕಾರ್ಯಕ್ರಮದಲ್ಲಿ ಕುಮಾರಸ್ವಾಮಿಯ ಜೇಮ್ಸ್‌ಬಾಂಡ್ ಎಂದ ಅನ್ಸಾರಿ ತಾ ಪೇಪರ್ ಬಾಂಡ್ ಎಂಬುದನ್ನು ಕೊಪ್ಪಳಕ್ಕೆ ತೋರಿ ಕೊಟ್ಟಿದ್ದಾನೆ. ಗಂಗಾವತಿಗೆ 50 ಕೋಟಿ ತರುವ ಅನ್ಸಾ ಕೊಪ್ಪಳದತ್ತವೂ ಸ್ವಲ್ಪ ಕಣ್ತೆರೆಯಲಿ. ಅನ್ಸಾರಿ ಮಂ ಯಾಗಿರೋದು ಜಿಲ್ಲೆಗೆ ಹೊರತು ಗಂಗಾವತಿಗ ಇದನ್ನು ಕುಮಾರಸ್ವಾಮಿ ಅನ್ಸಾರಿಗೆ ನೆನಪಿಸಬಾರದೆ

-ವರದಿಗಾ

ಸವರ್ಣೀಯರ ಪ್ರತಿಷ್ಠೆಗೆ ಬಲಿಯಾದ ಪರಮಣ್ಣ!

ಇತಿಹಾಸದುದ್ದಕ್ಕೂ ದಮನಕ್ಕೊಳಗಾಗುತ್ತಲೇ ಬಂದಿರುವ ದಲಿತರಿಗೆ, ಸ್ವತಂತ್ರ ಭಾರತದಲ್ಲಿ ತಲೆ ಎತ್ತಿ ನಿಲ್ಲಲು ಅವಕಾಶ ಸಿಕ್ಕಿರುವುದೇನೋ ನಿಜ. ಆದರೆ ಮೇಲ್ಜಾತಿಯವರ ಅಟ್ಟಹಾಸದಿಂದಾಗಿ ಇಂದಿಗೂ ನಲುಗಿಹೋಗಿದ್ದಾರೆ. ಇದೇ ಸಂದರ್ಭದಲ್ಲಿ ದಲಿತರು ಉಪಯೋಗಿಸುತ್ತಿರುವ 'ಅಟ್ರಾಸಿಟಿ'ಯು ಸವರ್ಣೀಯರನ್ನು ನಿದ್ದೆಗೆಡಿಸಿದೆ. ಇಂಥ ವಿಕೃತ ವ್ಯವಸ್ಥೆಗೆ ಪರಮಣ್ಣ ಎಂಬ ದಲಿತ ವೃದ್ಧ ನೇಣಿಗೆ ಬಲಿಯಾಗಿದ್ದಾನೆ.

ಘಟನೆಯ ಹಿನ್ನೆಲೆ

ಎರಡು ತಿಂಗಳ ಹಿಂದೆ ನಡೆದ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ದಿನಾಚರಣೆ ಸಂದರ್ಭದಲ್ಲಿ ಕುಡಿಯುವ ನೀರಿಗಾಗಿ ಸವರ್ಣೀಯರು ಬಳಸುತ್ತಿದ್ದ ಬಾವಿಯ ನೀರಿಗೆ ದಲಿತರು ಬಂದು ನೀರು ತೆಗೆದುಕೊಂಡು ಹೋಗಿದ್ದೇ ತಡ, ಸವರ್ಣೀಯರು ಕೆಂಡಮಂಡಲವಾದರು.

ಗುಲ್ಬರ್ಗಾ

ಅಂತೆಯೇ ತಮ್ಮೆಲ್ಲ ಅಂಗಡಿ ಮುಂಗಟ್ಟುಗಳನ್ನು ದಲಿತರಿಗಾಗಿ ಬಹಿಷ್ಕಾರ ಹಾಕಿದರು. ಈ ಸಂದರ್ಭದಲ್ಲಿ ಎರಡೂ ಕಡೆಯಿಂದ ಸಣ್ಣಪುಟ್ಟ ಘರ್ಷಣೆಯಾಗಿದ್ದು ನಿಜ. ಮರುದಿನ ಮಾಹಿತಿ ಪಡೆದ ಪೊಲೀಸರು ಡಿ.ಎಸ್.ಪಿ. ಜಗಮಯ್ಯನವರ ನೇತೃತ್ವದಲ್ಲಿ ಗ್ರಾಮದಲ್ಲಿ ಶಾಂತಿ ಸಭೆ ನಡೆಸಿ ರಾಜಿ ಮಾಡಿಸಿದರು. ಮುನ್ನೆಚ್ಚರಿಕೆ ಕ್ರಮವಾಗಿ ಅಂದಿನಿಂದಲೇ ಒಂದು ಪೊಲೀಸ್ ತುಕಡಿ ಹಾಗೂ ಇಬ್ಬರು ಪೇದೆಗಳು ಗ್ರಾಮದಲ್ಲಿಯೇ ನೆಲೆ ನಿಂತರು.

ಆದರೆ ಪ್ರಯೋಗಿಸಿದ ಬಲದಷ್ಟೇ ಜೋರಾಗಿ ವಸ್ತುವೂ ಪ್ರತಿಕ್ರಿಯಿಸುತ್ತದೆ ಎಂಬ ವಿಜ್ಞಾನದ ಸೂತ್ರದಂತೆ ಸವರ್ಣೀಯರು ಹಾಗೂ ದಲಿತರ ಮಧ್ಯೆ ಊರಲ್ಲಿ ದ್ವೇಷದ ಕಿಡಿ ಹೊತ್ತಿ ಉರಿಯುತ್ತಲೇ ನಡೆದಿದೆ. ಈ ಬಾರಿ ಮುಂಗಾರು ಮಳೆ ಚೆನ್ನಾಗಿ ಕಾಣಿಸಿಕೊಂಡಿದ್ದರಿಂದ ಇಲ್ಲಿನ ರೈತರು ಬಿತ್ತನೆ ಕಾರ್ಯದಲ್ಲಿ ತೊಡಗಿದ್ದಾರೆ. ಹೊಲಕ್ಕೆ ರಂಟೆ, ಕುಂಟೆ ಹೊಡೆಯುವ ಸಂದರ್ಭದಲ್ಲಿ ಬೇಕಾಗುವ ನೇಗಿಲು, ತಾಳಗಳನ್ನು ದಲಿತರು ಮುರಿದಿದ್ದಾರೆ. ಅದೇರೀತಿಯಾಗಿ ಬಡಿಗತನ ಮಾಡುತ್ತಿದ್ದ ದಲಿತ ಕಸುಬುದಾರರನ್ನು ಸವರ್ಣೀಯರು ಊರು ಬಿಡಿಸಿದ್ದಾರೆ. ಅಲ್ಲದೆ ಇಷ್ಟು ದಿನ ಸವರ್ಣೀಯರ ಹೊಲವನ್ನು ಉಳುಮೆ ಮಾಡಿ ಬದುಕು ಸಾಗಿಸುತ್ತಿದ್ದ ದಲಿತ ರೈತರನ್ನು ತಮ್ಮ ಹೊಲ ಉಳುಮೆ ಮಾಡುವುದು ಬೇಡವೆಂದು ಸವರ್ಣೀಯರು ತಾಕೀತು ಮಾಡಿದ್ದಾರೆ.

ಬಹುಶಃ ಅಲ್ಲಿಂದಲೇ ಗ್ರಾಮದಲ್ಲಿ ಮತ್ತೆ ದ್ವೇಷಮಯ ವಾತಾವರಣ ಹುಟ್ಟಿಕೊಂಡಿತು. ಮೇಲ್ಜಾತಿಯವರೆಲ್ಲರೂ ಸೇರಿಕೊಂಡು ಸಭೆ ಮಾಡಿ, ದಲಿತ ಜನಾಂಗದ ಯಾರಿಗೂ ಹೊಲ ಉಳುಮೆ ಮಾಡಲು ಕೊಡಬೇಡಿ ಎಂದು ಮಾತಾಡಿಕೊಂಡಿದ್ದಾರೆ. ಹೊಲ ಉಳುಮೆ ಮಾಡಲು ಕೊಡದಿದ್ದರೂ ಪರವಾಗಿಲ್ಲ, ನಮ್ಮ ಬೆವರಿನ ಹಣ ನೀಡಿ ಎಂದು ಕೇಳಿದ್ದಕ್ಕೆ ಪರಮಣ್ಣ ಎಂಬಾತ ಭೂಮಾಲೀಕರ ಪ್ರತಿಷ್ಠೆಗೆ ಬಲಿಯಾಗಿದ್ದಾನೆ.



ಪರಮಣ್ಣ

ನೇಣಿಗೆ ಬಲಿಯಾದ ಪರಮಣ್ಣ ಈ ಹಿಂದೆ ತಳ್ಳುಳ್ಳಿ ಗ್ರಾಮದ ಶಾಂತಗೌಡನ ಹತ್ತಿರ 10 ವರ್ಷ, ಖಾಜಾಪುರದ ಬಸವರಾಜಪ್ಪಗೌಡ ಮಾಲಿಪಾಟೀಲರ ಮನೆಯಲ್ಲಿ 9 ವರ್ಷ ದುಡಿದು ತಮ್ಮ ಗ್ರಾಮದ ಗುರಣ್ಣಗೌಡನ ಹತ್ತಿರ ಅವರ ಒತ್ತಾಯದ ದೆಸೆಯಿಂದಲೇ ಕಳೆದ ಮೂರು ವರ್ಷದಿಂದ ಸುಮಾರು ಹತ್ತಿಪ್ಪತ್ತು ಎಕರೆ ಹೊಲವನ್ನು ಸಮ ಪಾಲಿನಂತೆ ಉಳುಮೆ ಮಾಡುತ್ತಾ ಬಂದಿದ್ದ.



ಕಳೆದ ಎರಡು ತಿಂಗಳಿಂದ ಗ್ರಾಮದಲ್ಲಿರುವ ಪೋಲೀಸರು

ಸ್ವಭಾವತಃ ಗುರಣ್ಣಗೌಡ ಬಹಳ ಸಂಭಾವಿತ ಮನುಷ್ಯ. ನೇಣಿಗೆ ಬಲಿಯಾದ ಪರಮಣ್ಣ ಸಹ ಅಂತಹ ಕೆಟ್ಟ ವ್ಯಕ್ತಿಯೇನಲ್ಲ. ಆದರೆ ಸವರ್ಣೀಯರ ಒಪ್ಪಂದದ ಪ್ರಕಾರ ಗುರಣ್ಣಗೌಡ ಪರಮಣ್ಣನಿಗೆ ಹೊಲ ಮಾಡಲು ಬೇಡವೆಂದಿದ್ದಾನೆ. ಸ್ವಂತ ನಾಲ್ಕು ಎಕರೆ ಹೊಲ ಸರಿಯಿಲ್ಲದ್ದರಿಂದ ತನ್ನ ಐದು ಮಕ್ಕಳನ್ನು ಸಾಕುವ ಸಲುವಾಗಿ ಗೌಡರ ಹೊಲವನ್ನೇ ನಂಬಿದ್ದ ಪರಮಣ್ಣನಿಗೆ, ಅವರು ಬೇಡವೆಂದಾಗ ಇಡೀ ಆಕಾಶವೇ ಕಳಚಿ ಬಿದ್ದಂತಾಗಿದೆ. ಮನೆಯಲ್ಲಿ ಮಕ್ಕಳು ಒತ್ತಾಯ ಮಾಡಿರುವುದರಿಂದ ಮತ್ತೆ ಗೌಡನ ಹತ್ತಿರ ಹೋಗಿ ಹೊಲ ಉಳುಮೆ ಮಾಡಲು ಅವಕಾಶ ಕೊಡಿ ಎಂದು ಅಂಗಲಾಚಿ ಕೇಳಿಕೊಂಡಿದ್ದಾನೆ.

ಗೌಡ ಇದಕ್ಕೂ ಜಗ್ಗದಾಗ ಅನಿವಾರ್ಯವಾಗಿ ತಾನು ರಂಟೆ, ಕುಂಟೆ ಮಾಡಿದ ಒಟ್ಟು 40 ಸಾವಿರ ರೂ. ಕೊಡು ಎಂದು ಕೇಳಿದ್ದಾನೆ. ಇದರಿಂದಾಗಿ ಸಿಡಿಮಿಡಿಗೊಂಡ ಗೌಡ, "ನೀ ಏನ್ ಮಾಡಿಕ್ಕೊಂತಿ ಮಾಡಿಕ್ಯಾ" ಎಂದು ಗದರಿಸಿದ್ದಾನೆ. ಆಗ ಇಬ್ಬರಿಗೂ ಮಾತಿಗೆ ಮಾತು ಬೆಳೆಯಿತು.

"ಇನ್ನೂ ಆರು ತಿಂಗಳು ನಾನೇ ಆ ಹೊಲ ಉಳುಮೆ ಮಾಡುತ್ತೇನೆ. ಆಮೇಲೆ ನಿಮಗೆ ಬೇಕಿದ್ದವರಿಗೆ ಕೊಡ್ರಿ" ಎಂದು ಅಂಗಲಾಚಿ ಕೇಳಿದ್ರೂ ಈ ಗೌಡ ನಮ್ಮ ಹೊಟ್ಟೆಗೆ ಮಣ್ಣ ಹಾಕುತ್ತಾನೆ ಎಂದು ಚಿಂತಿಸುತ್ತಲೇ ಇದ್ದ ಪರಮಣ್ಣ ಆ ದಿನ ತಡವಾಗಿ ಮನೆಗೆ ಬಂದಿದ್ದಾನೆ. ಮನೆಯಲ್ಲಿ ಎಲ್ಲರೂ ಊಟ ಮಾಡಿಯಾಗಿತ್ತು, ತಾನು ಊಟ ಮಾಡಿ ಹೊರಗಡೆ ಮಲಗಿದ. ಅದೇ ರಾತ್ರಿ ಗುರಣ್ಣಗೌಡ ಬಂದು "ಏ ಪರಮ ಇಲ್ಲಿ ಬಾ ನಿನ್ನ ಜತೆ ಮಾತಾಡುವುದಿದೆ" ಎಂದು ಕರೆದುಕೊಂಡು ಹೋದ.

"ಬೆಳಿಗ್ಗೆ 5 ಗಂಟೆಗೆ ಎದ್ದಾಗ ನಮ್ಮಪ್ಪ ಕಾಣಲಿಲ್ಲ, ಹೀಗಾಗಿ ಎಲ್ಲಾ ಕಡೆ ಹುಡುಕಾಡಿ ಕೊನೆಗೆ ಬಾವಿ ಇರುವ (ಗುರಣ್ಣಗೌಡನ) ಹೊಲದ ಗಿಡವೊಂದಕ್ಕೆ ನಮ್ಮಪ್ಪನ ಹೆಣ ನೇತಾಡುತ್ತಿತ್ತು, ಅಷ್ಟರಲ್ಲಿಯೇ ಗುರಣ್ಣಗೌಡ ಎದುರುಗಡೆಯಿಂದ ಹೊರಟಿದ್ದ. ನಮಗ ಅವನಮ್ಯಾಲ ಬಿಟ್ರೆ ಮತ್ಯಾರ್ ಮೇಲೂ ಸಂಶಯವಿಲ್ಲ. ನಮ್ಮಪ್ಪನ ಜೀವ ತಗೊಂಡ ಆ ಗುರಣ್ಣನಗೌಡನ ಆಸ್ತಿ ಸರ್ಕಾರಕ್ಕೆ ಇಲ್ಲವೇ ಅನಾಥಾಶ್ರಮಕ್ಕೆ ಹೋಗಬೇಕು" ಎಂದು ನೇಣಿಗೆ ಬಲಿಯಾದ ಪರಮಣ್ಣನ ಮಗ ಪರಸಪ್ಪ ಹೇಳುತ್ತಿದ್ದಾನೆ.

ಅದೇರೀತಿಯಾಗಿ ಸವರ್ಣೀಯರೆಲ್ಲರೂ ಒಂದಾಗಿ "ಈ ಪರಮಣ್ಣ ಬಹಳ ಒಳ್ಳೆಯವನ್ರೀ. ಆದ್ರೆ ಊರಾನ ಲಾಲಪ್ಪ ಮುದ್ದೆ ಬಿಹಾಳದ ರಾಜೂಕಾಳೆ, ರಾಮಣ್ಣ ಚಂಪಾದಿ ಮುಂತಾದ ದಲಿತ ಸಂಘರ್ಷ ಸಮಿತಿಯವರು ಅವನನ್ನು ಪುಸಲಾಯಿಸಿ ಕೊಂದಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ ಪರಮಣ್ಣನ ಸಾವು ಹಲವಾರು ಸಂಶಯಗಳಿಗೆ ಎಡೆ ಮಾಡಿಕೊಡುತ್ತಿರುವುದಂತೂ ಸತ್ಯ! ಭೂಮಾಲೀಕರ ಪ್ರತಿಷ್ಠೆ ಹಾಗೂ 'ಅಟ್ರಾಸಿಟಿಕೇಸ್'ನ ದುರುಪಯೋಗದಿಂದ ಈ ದುರಂತ ಸಂಭವಿಸಿದ್ದಂತೂ ನಿಜವೆಂದೇ ಹೇಳಬೇಕು?

ಪರಮಣ್ಣನ ಸಾವಿಗೆ ಕಾರಣರ್ರ್ಯಾರು?

ಆಲ್ಹಾಳದಲ್ಲಿ ಭೂಮಾಲೀಕರ ಬಹುತೇಕ ಜಮೀನನ್ನು ದಲಿತರೇ ಪಾಲಿಗೆ ಪಡೆದು ಉಳುಮೆ ಮಾಡುತ್ತಿದ್ದಾರೆ. ಈ ವ್ಯವಹಾರದಲ್ಲಿ ಅವರ ಮಧ್ಯೆ ವಾಗ್ವಾದ ಆಗಿಲ್ಲ, ಒಂದು ವೇಳೆ ಆಗಿದ್ದರೂ ಅದು ತಮ್ಮ ಮಟ್ಟದಲ್ಲಿಯೇ ಬಗೆಹರಿಸಿಕೊಂಡದ್ದು ಇದೆ. ಈ ಮಧ್ಯೆ ಊರಲ್ಲಿ ಆದ ಜಗಳದಲ್ಲಿ ಆಗಾಗ ಅಟ್ರಾಸಿಟಿ ಪ್ರಕರಣಗಳೂ ದಾಖಲಾಗಿವೆ. ಆದರೆ ಓರ್ವ ದಲಿತ ಇನ್ನೋರ್ವ ಸವರ್ಣೀಯನನ್ನು ದ್ವೇಷಿಸುವಷ್ಟರ ಮಟ್ಟಿಗೆ ಎಂದೂ ಈ ದ್ವೇಷದ ಉರಿ ಹೊತ್ತಿದ್ದಿಲ್ಲ. ಈ ಬೆಂಕಿಯ ಕಿಡಿ ಕಾಣಿಸಿಕೊಂಡಿದ್ದೇ ಕಳೆದ ಎರಡು ತಿಂಗಳ ಹಿಂದೆ ಎಂಬುದು ಈಗ ಗುಟ್ಟಾಗಿ ಉಳಿದಿಲ್ಲ.

ಭೂಮಾಲೀಕರ ಜಮೀನನ್ನು ಉಳುವ ಮೂಲಕ ದಲಿತರು ಆರ್ಥಿಕವಾಗಿ ಸಬಲರಾಗುತ್ತಿರುವ ಸಂಗತಿ ಒಂದು ಕಡೆಯಾದರೆ, 'ಅಟ್ರಾಸಿಟಿ ಕೇಸ್' ವೀರರು ಈ ಅಮಾಯಕ ದಲಿತರನ್ನು ಸವರ್ಣೀಯರ ವಿರುದ್ಧ ವಿನಾಕಾರಣ ಬಳಸುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಗ್ರಾಮದಲ್ಲಿ ಆಗಾಗ ನಡೆದ ಘಟನೆಗಳೇ ಸಾಕ್ಷಿ! ದಲಿತರನ್ನು ಸಾಧ್ಯವಿದ್ದಷ್ಟು ಆರ್ಥಿಕವಾಗಿ ಹತ್ತಿಕ್ಕುವ ಪ್ರಯತ್ನ ನಡೆದಾಗಲೆಲ್ಲ ದಲಿತರು ಪ್ರತಿಭಟಿಸಿದ್ದಾರೆ. ಈ ಪ್ರತಿಭಟನೆಯೇ ತಮ್ಮ ಅಸ್ತಿತ್ವಕ್ಕೆ ಧಕ್ಕೆ ಎಂದು ಸವರ್ಣೀಯರು ಮತ್ತಷ್ಟು ಹತ್ತಿಕ್ಕಲು ಪ್ರಯತ್ನಿಸಿದ್ದಾರೆ. ಅದರ ಪರಿಣಾಮವೇ ಸವರ್ಣೀಯರು ತಮ್ಮ ಜಮೀನನ್ನು ಈ ವರ್ಷ ಮಾತ್ರವೇ ತಾವು ಊಳಲು ನಿರ್ಧರಿಸಿದ್ದು, ಆ ಪೈಕಿ ಗುರಣ್ಣಗೌಡ ಹಾಗೂ ಪರಮಣ್ಣನವರ ಪ್ರಕರಣವೂ ಒಂದು.

ದಲಿತರ ಕೇರಿಯ ಕೊಳವೆ ಬಾವಿಗಳು ಬತ್ತಿದ್ದು, ಊರಿಗೆ ಏಕೈಕ ಎನ್ನಲಾದ ಅದೂ ಸವರ್ಣೀಯರ ಓಣಿಯಲ್ಲಿರುವ ಬಾವಿಯ ನೀರಿಗೆ ದಲಿತರು ದುಂಬಾಲು ಬಿದ್ದಿದ್ದು, ಸವರ್ಣೀಯರಿಗೆ ಅಸಹನೀಯವಾಗಿದೆ. ಈ ಬಗ್ಗೆ ಆಗಾಗ ನಡೆದ ಮಾತಿನ ಚಕಮಕಿಯು ಈ ಎರಡೂ ಗುಂಪಿನ ಮಧ್ಯೆ ದ್ವೇಷ ಹೊತ್ತಿ ಉರಿಯಲು ಗಾಳಿಯಾಗಿದೆ. ಸವರ್ಣೀಯರ ಈ ಕ್ರಿಯೆಗೆ 'ಅಟ್ರಾಸಿಟಿ'ವೀರರು ಮತ್ತಷ್ಟು ಗಾಳಿ ಊದಿದ್ದಾರೆ. ಅದರ ಪರಿಣಾಮವೇ ಆಲ್ಹಾಳ ದುರಂತ.

ಎಮ್ಮೆಲ್ಸಿ ಸೀಟಿಗಾಗಿ ಪೈಪೋಟಿ

ಇನ್ನೇನು ಮುಂಗಾರು ಅಧಿವೇಶನ ಮುಗಿಯುತ್ತಿದ್ದಂತೆ ವಿಧಾನ ಪರಿಷತ್‌ಗಾಗಿ ಖಾಲಿ ಸೀಟುಗಳನ್ನು ತುಂಬುವ ಕೆಲಸ ಶುರುವಾಗುತ್ತೆ ಎಂದು ತಿಳಿದಿದ್ದೇ ತಡ, ಸೀಟು ಪಡೆಯಲು ಸದ್ಯ ರಾಜಕೀಯವಾಗಿ ನಿರುದ್ಯೋಗಿಗಳಾಗಿರುವ ಹಲವರು ಸಾಲುಗಟ್ಟಿ ನಿಂತಿದ್ದಾರೆ. ಕೆಲವರು ಬ್ರೀಫ್‌ಕೇಸ್‌ಗಳಲ್ಲಿ ದುಡ್ಡು ತುಂಬಿಕೊಂಡು ರೆಡಿಯಾಗಿದ್ದರೆ, ಮತ್ತೆ ಕೆಲವರು ತಮಗೆ ತಿಳಿದ ರೀತಿಯಲ್ಲೆಲ್ಲಾ ಲಾಬಿ ಮಾಡಲು ಹೊಂಚುಹಾಕಿ ಕುಳಿತಿದ್ದಾರೆ. ಇನ್ನು ಕೆಲವರು ಈಗಾಗಲೇ ಗರಿಗರಿ ಬಟ್ಟೆ ತೊಟ್ಟು ವಿಧಾನಸೌಧದಲ್ಲಿ ರಾಜಕೀಯ ದಿಗ್ಗಜರಿಗೆ ಕೈಕಾಲೂ ಹಿಡಿಯುವುದು ಕಾಣಿಸುತ್ತಿದೆ.

ನಾಮನಿರ್ದೇಶನಕ್ಕಾಗಿ ಬಿಜೆಪಿಗೆ ಮೂರು ಸ್ಥಾನ ಮತ್ತು ಜೆಡಿ(ಎಸ್)ಗೆ ಎರಡು ಸ್ಥಾನ ಎಂಬಂತೆ ಈಗಾಗಲೇ ಒಡಂಬಡಿಕೆ ಆಗಿಹೋಗಿದೆ. ಇದು ಗೊತ್ತಾಗಿದ್ದೇ ತಡ, ಆಯಾ ಪಕ್ಷಗಳ ನಿರುದ್ಯೋಗಿ ರಾಜಕಾರಣಿಗಳು ಮತ್ತೆ ಲೈಮ್‌ಲೈಟಿಗೆ ಬರುವುದಕ್ಕಾಗಿ ಹರಸಾಹಸ ಮಾಡುತ್ತಿದ್ದಾರೆ. ಅಂತೆಯೇ ಬೆಳಗಾವಿ ವಲಯದಲ್ಲೂ ಬಿರುಸಿನ ಚಟುವಟಿಕೆ ಈಗಾಗಲೇ ಪ್ರಾರಂಭವಾಗಿಬಿಟ್ಟಿದೆ.

ಬೆಳಗಾವಿ

ಬೆಳಗಾವಿ ವಲಯದಲ್ಲಿ ಬರುವ ಬಾಗಲಕೋಟೆ, ಬಿಜಾಪುರ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಈ ಸಂದರ್ಭಕ್ಕಾಗಿಯೇ ಚಾತಕಪಕ್ಷಿಯಂತೆ ಕಾಯ್ದುಕೊಂಡು ಕುಳಿತಿರುವ ಜನರ ದೊಡ್ಡ ದಂಡೇ ಇದ್ದು, ಯಾವಾಗ ಈ ವಲಯದ ಸೀಟನ್ನು ದಲಿತರಿಗೆ ನೀಡಬೇಕು ಎಂಬ ವದಂತಿ ಅಥವಾ ತೀರ್ಮಾನ ಹುಟ್ಟಿತೋ ಆಗ ಸಹಜವಾಗಿ ಮೇಲ್ಜಾತಿಯ ರಾಜಕಾರಣಿಗಳು ಸಪ್ಪೆ ಮೋರೆ ಹಾಕಿಕೊಂಡು ಮನೆ ಕಡೆ ಮುಖ ಮಾಡಿದರು. ಇನ್ನೊಂದೆಡೆ, ದಲಿತ ಪಾಳೆಯದಲ್ಲಿ ಬಿರುಸಿನ ರಾಜಕೀಯ ಚಟುವಟಿಕೆ ಕಂಡುಬರುತ್ತಿದೆ.

ಸೀಟಿನ ಆಕಾಂಕ್ಷಿಗಳಲ್ಲಿ ಬಿಜಾಪುರ ಜಿಲ್ಲೆಯ ಬಳ್ಳೊಳ್ಳಿ ಮೀಸಲು ಕ್ಷೇತ್ರದ ಬಲಗೈ ದಲಿತ ವಿಲಾಸ ರಾವ್ ಅಲಮೇಲಕರ್ ಒಬ್ಬರು. ತಾನು ಶಾಸಕನಾಗಿದ್ದಾಗ ಸಿಕ್ಕಷ್ಟು ಕಬಳಿಸಲಿಲ್ಲ, ಪ್ರಾಯಶಃ ತನಗಿರುವ ಎರಡು ಬಾರ್‌ಗಳಿಂದ ಬರುವ ಆದಾಯವೇ ಸಾಕು ಎಂದುಕೊಂಡಿರಬೇಕು. ಸದ್ಯಕ್ಕಂತೂ ಈತ ರಾಜಕೀಯವಾಗಿ ನಿರುದ್ಯೋಗಿ. ದೇವೇಗೌಡರಿಗೆ ಹತ್ತಿರದವನೂ ಹೌದು. ಆದರೆ ಈತನ ತಾರಾತಿಗಡಿ, ಬಾನಗಡಿಗಳನ್ನು ಸಹಿಸದೇ ಸ್ವಜಾತಿ ಜನರೇ ಇವನ ವಿರುದ್ಧ ಕತ್ತಿ ಮಸೆಯುತ್ತಿದ್ದಾರೆ. ಈತನಿಗೆ ಎಮ್ಮೆಲ್ಸಿ ಪಟ್ಟ ಕಟ್ಟಿದರೆ ಜೆಡಿಎಸ್ ಎಕ್ಕುಟ್ಟಿಹೋಗುತ್ತದೆಂಬ ಅರಿವು ಪಾಪ ದೇವೇಗೌಡರಿಗೆ ಇದೆಯೋ ಇಲ್ಲವೋ ಗೊತ್ತಿಲ್ಲ.

ಇನ್ನು ಅಲಮೇಲಕರ್‌ಗೆ ಪ್ರಬಲವಾಗಿ ಪೈಪೋಟಿ ನೀಡುತ್ತಿರುವವರೆಂದರೆ ಬಲಗೈ ಗುಂಪಿನ ಇನ್ನೊಬ್ಬ ನಾಯಕ ಅಭಿಷೇಕ್ ಚಕ್ರವರ್ತಿ. ಸದ್ಯ ಬಿಜಾಪುರ ಜಿಲ್ಲೆಯ ಜೆಡಿಎಸ್‌ನ ಸೆಕ್ರೆಟರಿ. ಚೂರುಪಾರು ಹೋರಾಟಗಾರ ಕೂಡ. ಆದರೆ ಕೆಲಸಕ್ಕಿಂತ ಮಾತನಾಡಿ ಮನೆ ಕಟ್ಟುವುದೇ ಜಾಸ್ತಿ. ಗೌಡರಿಗೆ ಅಷ್ಟೇನೂ ನಿಷ್ಠನಲ್ಲ. ಎಚ್.ಸಿ. ಮಹಾದೇವಪ್ಪ ಇವನಿಗೆ ಗಾಡ್‌ಫಾದರ್. ಈತ ಕುಮಾರಸ್ವಾಮಿಯ ಹೆಸರು ಹೇಳಿಕೊಂಡು ತನ್ನ ಬೇಳೆ ಬೇಯಿಸಿಕೊಳ್ಳುವುದರಲ್ಲಿ ನಿಷ್ಣಾತ. ಬಹುಶಃ ಇದೇ ಕಾರಣಕ್ಕೋ ಏನೋ ಈತನ ಹೆಸರೂ ಚಾಲ್ತಿಯಲ್ಲಿದೆ.



ಮುತ್ತಣ್ಣ ಬೆಣ್ಣೂರ್

ಈ ವಲಯದಲ್ಲಿನ ಮತ್ತೊಬ್ಬ ಆಕಾಂಕ್ಷಿ ಎಂದರೆ ನೀಲಕಂಠ ಚಲುವಾದಿ. ಇಲ್ಲಿಯತನಕ ಈತನ ಹೆಸರೇನೂ ಚಾಲ್ತಿಯಲ್ಲಿರಲಿಲ್ಲ, ಈಗ ಎಮ್ಮೆಲ್ಸಿ ಸೀಟಿಗಾಗಿ ಚಾಲ್ತಿಗೆ ಬಂದುಬಿಟ್ಟಿದೆ. ಈತ ದಲಿತರ ಸ್ವಯಂಘೋಷಿತ ನಾಯಕನೂ ಹೌದು. ಎಚ್.ಸಿ. ಮಹಾದೇವಪ್ಪನೇ ಇವನಿಗೂ ಗಾಡ್‌ಫಾದರ್. ಜೆಡಿಎಸ್ ಅಧಿಕಾರದಲ್ಲಿದೆ ಎಂಬ ಕಾರಣಕ್ಕೇನೇ ಈತನೂ ಆ ಪಕ್ಷದಲ್ಲಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ.

ಈ ಮೂರೂ ಹೆಸರುಗಳನ್ನು ಬಿಟ್ಟು ಇನ್ನೂ ಒಂದು ಹೆಸರು ಎಮ್ಮೆಲ್ಸಿ ಸೀಟಿಗಾಗಿ ಲೈನಿನಲ್ಲಿದೆ. ಅದೇ ಮುತ್ತಣ್ಣ ಬೆಣ್ಣೂರ್. ಈತ ಮಾದಿಗ ಮೀಸಲಾತಿ ಹೋರಾಟದ ಬಾಗಲಕೋಟೆ ಜಿಲ್ಲಾ ಅಧ್ಯಕ್ಷ. ಕಳೆದ ಇಪ್ಪತ್ತು ವರ್ಷದಿಂದ ದಲಿತರ ಪರವಾಗಿ ದನಿ ಎತ್ತುತ್ತಾ ಬಂದ ಮನುಷ್ಯ. ಬರೀ ರಾಜಕಾರಣ ಮಾಡಿ ತಾನೇ ಬೆಳೆಯಬೇಕು ಅಂತ ಏನಿಲ್ಲ. ಜೊತೆಗೆ, ದಲಿತರೂ ಒಂದಿಷ್ಟು ಉದ್ಧಾರವಾಗಬೇಕು ಅಂತ ಕಳಕಳಿ ಇರುವ ಮನುಷ್ಯ. ಆದರೆ ಈತನಿಗಿರುವ ಒಂದೇ ಒಂದು ವೀಕ್ ಪಾಯಿಂಟ್ ಎಂದರೆ, ಬ್ರೀಫ್‌ಕೇಸ್ ತುಂಬ ದುಡ್ಡು ತುಂಬಿಕೊಂಡು ದೇವೇಗೌಡರ ಮನೆಯ ಕದ ತಟ್ಟುವಷ್ಟು ಈತ ಶ್ರೀಮಂತನಲ್ಲ.


ಈಗ ದಲಿತ ಎಡಗೈ ಗುಂಪಿನ ಗೋವಿಂದ ಕಾರಜೋಳ್ ಹಾಗೂ ಇನ್ನೊಬ್ಬ ಎಮ್ಮೆಲ್ಸಿ ಅರವಿಂದ ನಿಂಬಾವಳಿ ಎಂಬ ಚಡ್ಡಿಧಾರಿಗಳಿಗೆ ಈ ವಲಯದಲ್ಲಿ ಒಂದಿಷ್ಟು ಕಡಿವಾಣ ಹಾಕಬೇಕೆಂದರೆ ಮುತ್ತಣ್ಣ ಬೆಣ್ಣೂರ್ ಹೇಳಿ ಮಾಡಿಸಿದ ವ್ಯಕ್ತಿ. ಯಾಕೆಂದರೆ, ಮಾದಿಗ ಮೀಸಲಾತಿ ಹೋರಾಟ ಸಮಿತಿಯು ರಾಜ್ಯದಲ್ಲಿ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಪ್ರಬಲವಾಗಿರುವ ಸಂಘಟನೆ. ಅಂತಹ ಒಂದು ಸಂಘಟನೆಯಲ್ಲಿರುವ ಬೆಣ್ಣೂರ್‌ಗೆ ಸಹಜವಾಗಿ ಜನಬೆಂಬಲ ಕೂಡ ಇದೆ.

ದುಡ್ಡು ಗೆಲ್ಲುತ್ತೋ, ಜನಬೆಂಬಲ ಗೆಲ್ಲುತ್ತೋ ಎಂಬುದನ್ನು ಕಾದುನೋಡಬೇಕಷ್ಟೆ. [illegible] ಮಾಡೋದು ಮುದ್ದೇಗೌಡ್ರು [illegible] ಮತ್ತೆ ಗೆದ್ದೂ, ಅಚ್ಚರಿಯೇನಿಲ್ಲ.

–[illegible]

ಚಾಚಾನ ಚೇಷ್ಟೆಗಳು!

ಚಾಚಾ ನೆಹರೂ ಮತ್ತು ಲೇಡಿ ಎಡ್ವೀನಾ ಮೌಂಟ್‌ಬ್ಯಾಟನ್ ನಡುವೆ ಲೈಂಗಿಕ ಸಂಬಂಧವಿತ್ತೇ? ಇತ್ತೀಚೆಗೆ ಎಡ್ವೀನಾರವರ ಪುತ್ರಿ ಪಮೆಲಾ ಬರೆದಿರುವ ಪುಸ್ತಕದಲ್ಲಿ ಈ ಪ್ರಶ್ನೆಗೆ ಉತ್ತರ "ಇರಲಿಲ್ಲ" ಎಂಬುದಾಗಿದೆ. "ನನ್ನ ತಾಯಿಗೆ ಹಲವಾರು ಪ್ರಿಯಕರರಿದ್ದರು ಎಂಬುದು ನಿಜ. ಹಾಗೆಯೇ ಆಕೆಯ ಈ ಸಂಬಂಧಗಳ ಬಗ್ಗೆ ನನ್ನ ತಂದೆಗೆ ಗೊತ್ತಿತ್ತು ಎಂಬುದೂ ನಿಜ. ಆದರೆ ಎಡ್ವೀನಾ ಮತ್ತು ನೆಹರೂ ನಡುವೆ ಲೈಂಗಿಕ ಸಂಬಂಧ ಇರಲಿಲ್ಲ, ಅವರಿಬ್ಬರೂ ಆಪ್ತ ಸ್ನೇಹಿತರಾಗಿದ್ದರಷ್ಟೇ" ಎಂದು ಪಮೆಲಾ ಹೇಳಿದ್ದಾಳೆ.



ಆದರೂ ಅದ್ಯಾಕೋ "ಇತ್ತೇ?" ಎಂಬ ಪ್ರಶ್ನೆ ಪದೇಪದೇ ಗೋರಿಯಿಂದ ಎದ್ದೇಳುತ್ತಲೇ ಇರುತ್ತದೆ. ಅದಕ್ಕೆ ಕಾರಣವೂ ಇಲ್ಲದಿಲ್ಲ. "ಇದ್ದಿದ್ದರೆ, ಭಾರತದ ವಿಭಜನೆಯ ಮೇಲೆ, ಸ್ವಾತಂತ್ರ್ಯ ಸಂಗ್ರಾಮದ ಮೇಲೆ ಅದು ಪರಿಣಾಮ ಬೀರದೇ ಇತ್ತೇ?" ಎಂಬ ಪ್ರಶ್ನೆ ಲಕ್ಷಾಂತರ ಜನರನ್ನು ಕಾಡುವುದು ಒಂದೆಡೆಯಾದರೆ, ಬ್ರಿಟಿಷರ ರಾಜವಂಶಕ್ಕೆ ಸೇರಿದ್ದ ಎಡ್ವೀನಾ ಮತ್ತು ಭಾರತದ ಅಗ್ರವಂಶಕ್ಕೆ ಜನಿಸಿದ್ದ, ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ ನೆಹರೂ ನಡುವೆ ಇದ್ದಿರಬಹುದಾದ ರೋಮಾನ್ಸ್ ಬಗ್ಗೆ ಅಪಾರ ಕುತೂಹಲ ಇನ್ನೊಂದೆಡೆ.

ಹೇಳಿಕೇಳಿ ನೆಹರೂ ಸಾಹುಕಾರರ ಕುಟುಂಬದಲ್ಲಿ ಜನಿಸಿದ್ದ, ಪಶ್ಚಿಮದಲ್ಲಿ ಓದಿದ್ದ, ಭಾರತದ ಅಘೋಷಿತ 'ರಾಜಕುವರ.' ಆದರೆ ಚಿಕ್ಕವಯಸ್ಸಿನಲ್ಲೇ ಹೆಂಡತಿಯನ್ನು ಕಳೆದುಕೊಂಡ ವಿಧುರ. ಭಾರತದ ಸಾಂಪ್ರದಾಯಿಕ ಮಹಿಳೆಯರೊಂದಿಗಿಂತ, ಎಡ್ವೀನಾ ತರಹದ ಪಾಶ್ಚಿಮಾತ್ಯ ಮಹಿಳೆಯರೊಂದಿಗೆ ಸುಲಲಿತವಾಗಿ ಬೆರೆಯಬಲ್ಲ ಚತುರ. ಅದರಲ್ಲೂ ಲಾರ್ಡ್ ಮೌಂಟ್‌ಬ್ಯಾಟನ್ ಮತ್ತಾತನ ಹೆಂಡತಿ ಎಡ್ವೀನಾ ನಡುವಿನ ದಾಂಪತ್ಯ ಜೀವನ ಕಾಮದ ಕಾವನ್ನು ಕಳೆದುಕೊಂಡು ಬರಡಾಗಿತ್ತು ಎಂದು ಎಲ್ಲರಿಗೂ ಗೊತ್ತಿರುವಾಗ ನೆಹರೂ ಎಡ್ವೀನಾಳೊಂದಿಗೆ ಸಂಬಂಧ ಹೊಂದಿದ್ದರೆ ಅದು ಸಹಜ ಎನ್ನುವವರಿದ್ದಾರೆ.


ಆದರೆ ಇಂತಹದ್ದೊಂದು 'ಸಹಜ' ಸಂಬಂಧ ಚಿಗುರಲಿಕ್ಕೆ ಲಾರ್ಡ್ ಮತ್ತು ಲೇಡಿ ಮೌಂಟ್‌ಬ್ಯಾಟನ್‌ಗಳೇ 'ಸಹಜ' ಆಸಕ್ತಿಗಳನ್ನು ಹೊಂದಿರುವವರಾಗಿರಲಿಲ್ಲ. ಬ್ರಿಟಿಷ್ ಸರ್ಕಾರದ ನೌಕಾದಳದ ಉನ್ನತ ಅಧಿಕಾರಿಯೂ, ತನ್ನ ಶೌರ್ಯಕ್ಕೆ ಹಲವಾರು ಪದಕಗಳನ್ನೂ ಪಡೆದಿದ್ದ ಲಾರ್ಡ್ ಮೌಂಟ್‌ಬ್ಯಾಟನ್ ಗುಪ್ತವಾಗಿ ಸಲಿಂಗಕಾಮಿಯಾಗಿದ್ದ ಎಂಬ ರೂಮರ್‌ಗಳು ಆ ಕಾಲದಿಂದಲೂ ಚಾಲ್ತಿಯಲ್ಲಿದ್ದವು. ಹಾಗೆಯೇ ಆತನ ಪತ್ನಿ ಲೇಡಿ ಎಡ್ವೀನಾ ಸಹ ಹಲವಾರು ಮಹಿಳೆಯರೊಂದಿಗೆ ಮತ್ತು ಪುರುಷರೊಂದಿಗೆ ಲೈಂಗಿಕ ಸಂಬಂಧ ಹೊಂದಿದ್ದಳು ಎಂಬ ಅಂಶ ಆಕೆಯ ಜೀವನ ಚರಿತ್ರೆ ಬರೆದ ಜೇನೆಟ್ ಮಾರ್ಗನ್‌ರವರೇ ಹೇಳಿದ್ದರು.

ಬ್ರಿಟನ್ನಿನ ರಾಜ 8 ನೇ ಎಡ್ವರ್ಡ್‌ಗೆ ಸಾಲ ನೀಡುತ್ತಿದ್ದ ಸಾಹುಕಾರನ ಮೊಮ್ಮಗಳಾದ ಎಡ್ವಿನಾ ಐಶ್ವರ್ಯದ ಸುಪ್ಪತ್ತಿಗೆಯಲ್ಲಿ ಬೆಳೆದವಳು. ಅದಕ್ಕೆ ತಕ್ಕಂತೆ ಮೋಜುವಾನಿಯಲ್ಲೇ ಪಳಗಿದ್ದ ಲೂಯಿ ಮೌಂಟ್‌ಬ್ಯಾಟನ್‌ನೊಂದಿಗೆ ವಿವಾಹವಾಗಿದ್ದೂ ಸರಿಯಾಗಿತ್ತು, ಇಬ್ಬರೂ ಎರಡು ದಶಕಗಳ ಕಾಲ ವ್ಯಭಿಚಾರ, ಮೋಜು, ಮಜಾಗಳಲ್ಲೇ ಕಳೆದರು. ಇವರಿಬ್ಬರಿಗೆ ಇಬ್ಬರು ಪುತ್ರಿಯರು ಜನಿಸಿದರೂ ಆತ ಪ್ರಿಯಕರರನ್ನು, ಈಕೆ ಪ್ರೇಯಸಿಯರನ್ನು ಸಂಗ್ರಹಿಸುತ್ತಲೇ ಸಾಗಿದರು.

ಆದರೆ ಜೇನೆಟ್ ಮಾರ್ಗನ್ ಪ್ರಕಾರ ಎರಡನೆ ಮಹಾಯುದ್ಧ ಎಡ್ವೀನಾಳಲ್ಲಿ ಬದಲಾವಣೆಗಳನ್ನು ತಂದಿತು. ಭಾರತಕ್ಕೆ ಬಂದಾಗ ಆಕೆಯ ವಯಸ್ಸು 44. ದೇಹ ಕುಗ್ಗಲಾರಂಭಿಸಿತ್ತು. ಪ್ರೇಯಸಿಯರು, ಪ್ರಿಯಕರರು ಸಾಕೆನ್ನಿಸಲಾರಂಭಿಸಿತ್ತು. ಆಗ ಆಕೆಯ ಜೀವನವನ್ನು ಪ್ರವೇಶಿಸಿದ್ದೇ ನೆಹರೂ. ಹೇಗಿದ್ದರೂ ಅಷ್ಟೊತ್ತಿಗಾಗಲೇ ತನ್ನ ಹೆಂಡತಿ ಯಾರೊಂದಿಗೆ ಚಕ್ಕಂದವಾಡುತ್ತಿದ್ದಾಳೆ ಎಂಬುದರ ಬಗ್ಗೆ ತಲೆ ಕೆಡಿಸಿಕೊಳ್ಳದ ಸ್ಥಿತಿಯನ್ನು ಮೌಂಟ್‌ಬ್ಯಾಟನ್ ತಲುಪಿದ್ದ.

ನೆಹರೂ ಮತ್ತು ಎಡ್ವೀನಾ ನಡುವೆ ದೈಹಿಕ ಸಂಬಂಧ ಇತ್ತೋ ಇಲ್ಲವೋ, ಆದರೆ ಅವರಿಬ್ಬರು ಆಪ್ತ ಸ್ನೇಹಿತರಾಗಿದ್ದಂತೂ ಸತ್ಯ. ದೇಶದ ಪ್ರಥಮ ಪ್ರಧಾನಿಯಾದ ನಂತರ ತಮ್ಮ ಎಲ್ಲ ಕೆಲಸಗಳ ಒತ್ತಡದ ನಡುವೆಯೂ ನೆಹರೂ ಆಕೆಗೆ ಪತ್ರಗಳನ್ನು ಬರೆಯುತ್ತಿದ್ದರು. ತನ್ನ ಆಶೆ, ನಿರಾಶೆ, ಭಯ, ಕೆಲಸ ಇತ್ಯಾದಿಗಳ ಬಗ್ಗೆ ರಾತ್ರಿ ಎರಡು ಗಂಟೆ ಸಮಯದಲ್ಲಿ ಕೂತು ಬರೆಯುತ್ತಿದ್ದ ನೆಹರೂರವರ ಆಪ್ತದನಿ ಅವುಗಳಲ್ಲಿದೆ ಎಂದು ಪಮೆಲಾ ಹೇಳಿದ್ದಾಳೆ.

ಹದಿನೈದು ತಿಂಗಳ ಕಾಲ ಭಾರತದಲ್ಲಿದ್ದ ಮೌಂಟ್‌ಬ್ಯಾಟನ್ ದಂಪತಿಗಳು ಇಂಗ್ಲೆಂಡಿಗೆ ಹಿಂದಿರುಗಿದ ನಂತರವೂ ಎಡ್ವೀನಾ-ನೆಹರೂ ಗೆಳೆತನ ಮುಂದುವರೆದಿತ್ತು. ಲಂಡನ್ನಿಗೆ ನೆಹರೂ ಹೋದಾಗಲೆಲ್ಲ ಅವರ ಮನೆಯಲ್ಲೇ ತಂಗುತ್ತಿದ್ದರು. ಹಾಗೆಯೇ ಪೂರ್ವದಿಕ್ಕಿನತ್ತ ಪ್ರಯಾಣ ಬೆಳೆಸಿದಾಗಲೆಲ್ಲಾ ಎಡ್ವೀನಾ ಭಾರತಕ್ಕೆ ಭೇಟಿ ನೀಡುತ್ತಿದ್ದರು.



1960 ರಲ್ಲಿ ಎಡ್ವೀನಾ ತನ್ನ 58 ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದಾಗ ಆಕೆಯ ಪಕ್ಕ ನೆಹರೂ ಬರೆದಿದ್ದ ಪತ್ರಗಳ ರಾಶಿ ಇತ್ತು. ಅಷ್ಟೇ ಅಲ್ಲ, ಆ ಪತ್ರಗಳೆಲ್ಲವನ್ನು ತನ್ನ ಸಾವಿನ ನಂತರ ಗಂಡನ ಸುಪರ್ದಿಗೆ ವಹಿಸಿದ್ದಳು.

ನೆಹರೂ ಆಗಲಿ, ಎಡ್ವೀನಾ ಆಗಲಿ ದೈಹಿಕ ಸುಖಗಳನ್ನು ತಿರಸ್ಕರಿಸಿದ್ದ ಬ್ರಹ್ಮಚಾರಿಗಳೇನಾಗಿರಲಿಲ್ಲ. ಅದರಲ್ಲೂ ಆತ ವಿಧುರನಾಗಿದ್ದು, ಆಕೆಯ ಗಂಡ ಇಂತಹ ಸಂಬಂಧಗಳ ಬಗ್ಗೆ ತಲೆ ಕೆಡಿಸಿಕೊಳ್ಳದೇ ಇದ್ದದ್ದು, ಅವರಿಬ್ಬರಿಗೂ ಸಾಕಷ್ಟು ಏಕಾಂತದ ಜಾಗೆ, ಸಮಯ ಸಿಗುತ್ತಿದ್ದುದ್ದು, ಎಲ್ಲವೂ ನಾನಾ ಚೇಷ್ಟೆಗಳಿಗೆ ಅಣಿವು ಮಾಡಿಕೊಟ್ಟಿರಲಿಕ್ಕೂ ಸಾಕು

ಆಗ ಚಾಚಾ ನೆಹರೂ ಚೇಷ್ಟೆ ಮಾಡಿದ್ದರೆ ತಪ್ಪೇನು?

-ಸಾವಂ

ಅನಿವಾರ್ಯ ಕಾರಣದಿಂದಾಗಿ ಜಿಮ್‌ಕಾರ್ಬೆಟ್‌ನ ಅಂಕಣ ಪ್ರಕಟವಾಗಿಲ್ಲ, ಮುಂದಿನ ವಾರ ಎಂದಿನಂತೆ.


-ಸಂ

ಮಲ್ಲೇಪುರಂ ಸಂಸ್ಕೃತಿ ಚಿಂತನೆ

ನಿಮಗೆ ಸೊಪ್ಪೈಟ ಮಂಜ ಗೊತ್ತಾ?

ಪಟೇಲ್ ಪಾಂಡು, ಮದನ ಗೌಡ, ಕಬಡ್ಡಿ ಬಾಬು ಅಲಿಯಾಸ್ ಪ್ರಸಾದ್ ಬಾಬು, ಸಂಕ್ರಾಂತಿ ವೆಂಕ್ಟೇಶನ ಹೆಸರು ಕೇಳಿದ್ದೀರಾ? ನೀವು ಸಾಂಸ್ಕೃತಿಕ ಜಗತ್ತಿಗೆ ಸೇರಿದವರಾಗಿದ್ದರೆ ಬಹುಮಟ್ಟಿಗೆ ಗೊತ್ತಿರಲು ಸಾಧ್ಯವಿಲ್ಲ ಬಿಡಿ. ಆದರೆ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಮಲ್ಲೇಪುರಂ ವೆಂಕಟೇಶ್‌ಗೆ ಇವರೆಲ್ಲಾ ಪರಿಚಿತರೆ ಎಂದರೆ ನೀವು ಬೆರಗಾಗಕೂಡದು. ಯಾಕೆಂದರೆ ಕನ್ನಡ ವಿವಿಗೆ ವೈಸ್‌ಚಾನ್ಸಲರ್ ಆಗಲು ಇಂಥವರ ಒಡನಾಡವೇ ರಹದಾರಿ ಅಂತಾ ನಮ್ಮ ಪ್ರಸಿದ್ಧ ಸಂಸ್ಕೃತಿ ಚಿಂತಕ ಮಲ್ಲೇಪುರಂ ನಂಬಿಕೊಂಡಿದ್ದಾರೆ. ಅಷ್ಟೇ ಅಲ್ಲ, ತಾವು ಇಂತಾ ಚಿಂತಾಜನಕ ಸ್ಥಿತಿ ತಲುಪಿರುವ ಬಗ್ಗೆ ರವಷ್ಟೂ ಚಿಂತೆ ಮಾಡದೆ ಇದನ್ನೆಲ್ಲಾ ಅವರು ಆನಂದಿಸುತ್ತಲೂ ಇದ್ದಾರೆ.

ಡಾ. ಕಾಳೇಗೌಡ ನಾಗವಾರ, ಡಾ. ಕೆ.ವಿ. ನಾರಾಯಣ ಹಾಗೂ ಮಲ್ಲೇಪುರಂ ಈ ಮೂವರೂ ಡಾ. ವಿವೇಕ್ ರೈ ತೆರವುಗೊಳಿಸಿರುವ ಹಂಪಿ ವಿವಿಯ ವಿಸಿ ಹುದ್ದೆಯ ಆಕಾಂಕ್ಷಿಗಳಾಗಿದ್ದಾರೆ. ಸಜ್ಜನಿಕೆಯ ಕೆವಿಎನ್‌ಗೆ ಲಾಬಿ, ಡೊಗ್ಗು ಸಲಾಮು, ಬೇಡಿಕೊಳ್ಳುವ ವಿದ್ಯೆ ಗೊತ್ತಿಲ್ಲ, ಮಲ್ಲೇಪುರಂಗೆ ಅದುಬಿಟ್ಟರೆ ಬೇರೆ ಕಸುಬೇ ಬರಲ್ಲ. ಇಂತಾ ಸಾಂಸ್ಕೃತಿಕ ಲಾಗ ಹೊಡೆಯುತ್ತಲೇ ಮಲ್ಲೇಪುರಂ ಈಗ ಸೊಪ್ಪೈಟ ಮಂಜ, ಕಬಡ್ಡಿ ಬಾಬು ಮುಂತಾದ ಚಿಲ್ಲರೆ ಗಿರಾಕಿಗಳೊಂದಿಗೆ ವೇದಿಕೆಗಳಲ್ಲಿ ಕಾಣಿಸಿಕೊಳ್ಳುತ್ತಾ ಸಂಸ್ಕೃತಿ ಚಿಂತನೆಯಲ್ಲಿ ಮುಳುಗೇಳುತ್ತಿದ್ದಾರೆ. ಅಂದಹಾಗೆ ಈ ಸುಸಂಸ್ಕೃತ ಆಸಾಮಿಗಳೆಲ್ಲಾ ದೇವೇಗೌಡರ ಪರಮಾಪ್ತ ಶಿಷ್ಯರು. ಸಂಸ್ಕೃತ ಪಂಡಿತ ಮಲ್ಲೇಪುರಂ ಈಗ ದೇವೇಗೌಡರಿಗೆ ಜಾತಕ, ಜ್ಯೋತಿಷ್ಯ, ಹಲ್ಲಿ ಶಕುನಗಳ



ಬಗ್ಗೆ ತಮ್ಮ ಸಂಸ್ಕೃತ ಜ್ಞಾನ ಬಳಸಿ ನಿತ್ಯ ಸಲಹೆ ನೀಡುತ್ತಾ ವಿಸಿಗಿರಿ ಹೊಡೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಮೊನ್ನೆ ಜುಲೈ 15 ರಂದು ಬೆಂಗಳೂರಿನ ಇಟ್ಟಮಡು ಎಂಬ ನೆಲಗಳ್ಳರ ಏರಿಯಾದಲ್ಲಿ ಸುವರ್ಣ ಸಂಭ್ರಮ ಅಂತಾ ಬಹಳ ಅದ್ದೂರಿ ಸಮಾರಂಭ ಏರ್ಪಾಡಾಗಿತ್ತು. ಅದರಲ್ಲಿ ನಾಡು-ನುಡಿಗಾಗಿ ಸೇವೆಗೈದ ಗಣ್ಯರಿಗೆ 'ಕನ್ನಡ ಕುಲತಿಲಕ ಪ್ರಶಸ್ತಿ ಪ್ರದಾನ'ವೂ ಆಯಿತು. ತಿಕಕ್ಕೂ ತಿಲಕಕ್ಕೂ ವ್ಯತ್ಯಾಸ ಗೊತ್ತಿರದ ಜನ ಇದನ್ನು ಏರ್ಪಡಿಸಿದ್ದರು ಎಂಬುದು ಒಂದು ವಿಚಾರವಾದರೆ ಪಾಟೀಲ ಪುಟ್ಟಪ್ಪ, ದೇಜಗೌ, ಹಂಪನಾ, ಹಂಸಲೇಖ, ಐಪಿಎಸ್ ಅಧಿಕಾರಿ ಎಸ್.ಬಿ. ರಮೇಶ್, ಡಾ. ನಲ್ಲೂರು ಪ್ರಸಾದ್ ಕುಲತಿಲಕ ಪ್ರಶಸ್ತಿ ಎತ್ತಿಕೊಂಡು ಹೋಗಲು ಬೆಳಬೆಳಗ್ಗೆನೇ ಮುಖ್ಯಮಂತ್ರಿ ಕುಮಾರಸ್ವಾಮಿಗಾಗಿ ಈ ತಿಲಕಗಳೆಲ್ಲಾ ಮಧ್ಯಾಹ್ನ ಮೂರು ಗಂಟೆಯವರೆಗೂ ಕಾದು ಕೊನೆಗೂ ಸನ್ಮಾನ ಮಾಡಿಸಿಕೊಂಡು ಮನೆಗೆ ಹಿಂದಿರುಗಿದರು. ಮಲ್ಲೇಪುರಂ ವೆಂಕಟೇಶ್‌ರದ್ದು ಇದರಲ್ಲಿ ನುಡಿ ಹಾರೈಕೆಯೆಂಬ ವಿಚಿತ್ರ ಜವಾಬ್ದಾರಿ.

ಮಲ್ಲೇಪುರಂ ಹೀಗೆ ಅಸಂಬದ್ಧ ಜಾಗಗಳಲ್ಲೆಲ್ಲಾ ಕಾಣಿಸಿಕೊಳ್ಳಲು ವಿಸಿಗಿರಿಯ ಆಕಾಂಕ್ಷೆಯೇ ಕಾರಣವಾಗಿದೆ. ಈಗ್ಗೆ ಕೆಲವು ತಿಂಗಳ ಹಿಂದೆ ಯಾವನೋ ಶಕುನ ಹೇಳುವವನ ರೆಕಮೆಂಡೇಷನ್ ಮೂಲಕ ಮಲ್ಲೇಪುರಂ ದೇವೇಗೌಡರ ಮನೆಗೆ ತೂರಿಕೊಂಡಿದ್ದಾರೆ. ಬಹುಶಃ ಪೇಜಾವರರೂ 'ನಮ್ಮ ಹುಡುಗ'ನೆಂದು ಹೇಳಿದ್ದಿರಬಹುದು. ಅತ್ತ ದೇವೇಗೌಡರಿಗೂ ಇತ್ತೀಚೆಗೆ ನೆಮ್ಮದಿ ಕಡಿಮೆಯಾಗಿದೆ. ಮಕ್ಕಳು ಸೊಸೆಯಂದಿರೂ ಕದ್ದು ರಾಶಿ ಹಾಕಿಕೊಳ್ಳುತ್ತಿರುವ ಸಂಪತ್ತು ಅವರಲ್ಲಿ ದೈವಭೀತಿ, ಪಾಪಪ್ರಜ್ಞೆಯನ್ನು ಜಾಸ್ತಿ ಮಾಡಿದೆ. ಮಲ್ಲೇಪುರಂ ಅವಕ್ಕೆಲ್ಲಾ ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿ ಬರುವ ಸಮರ್ಥನೆಯಗಳನ್ನು ಹುಡುಕಿ ಸಂಸ್ಕೃತದಲ್ಲಿ ಹೇಳಿ ಸಮಾಧಾನಿಸುವ ಕೆಲಸ ಮಾಡುತ್ತಿದ್ದಾರೆಂ... ಕಾಣುತ್ತಿದೆ.

ಅರ್ಹತೆ ಇದೆಯಾ ಹೇಳಿ?

ಕನ್ನಡ ವಿವಿಗೆ ವಿಸಿ ಆಗಬೇಕೆಂದರೆ ಪ್ರೊಫೆಸ... ಆಗಿ ಕನಿಷ್ಠ 10 ವರ್ಷ ಕೆಲಸ ಮಾಡಿರಬೇಕು, ಪಿಎಚ... ಆಗಿರಬೇಕು ಎಂತೆಲ್ಲಾ ನಿಯಮಗಳಿವೆ. ಮಲ್ಲೇಪುರ... ಅಂತಹ ಅರ್ಹತೆ ಇಲ್ಲ ಅಂತಲೇ ಕನ್ನಡ ವಿವಿ... ಬಹುತೇಕ ಸಿಬ್ಬಂದಿ ಹೇಳುತ್ತಿದ್ದಾರೆ. ಕರಸ್ಪಾಂಡೆನ್ಸ್‌ನಲ್ಲಿ ಎಂ... ಮಾಡಿರುವ ಮಲ್ಲೇಪುರಂಗೆ ಅಸಲಿಗೆ ಡಾಕ್ಟರೇಟೇ ಬಂದಿ... ಅವರು ಬರೀ ಪ್ರೊಫೆಸರ್ ಮಾತ್ರ ಎಂಬ ಅಂಶ... ಎಲ್ಲರೂ ಬೊಟ್ಟು ಮಾಡುತ್ತಿದ್ದಾರೆ.

ಸಂಸ್ಕೃತಿ ಚಿಂತಕ ಎನಿಸಿಕೊಂಡಿದ್ದರೂ ಮಲ್ಲೇಪುರ... ಕನ್ನಡ ವಿವಿಯಂತಹ ಒಂದು ಮಹತ್ವದ ಶಿಕ್ಷಣ ಸಾಂಸ್ಕೃ... ಕೇಂದ್ರವನ್ನು ಮುನ್ನಡೆಸಲು ಬೇಕಾದ ವಿಜನ್ ಇ... ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಆದ... ದೇವೇಗೌಡ ಅಂಡ್ ಸನ್ಸ್‌ಗೆ ಸಂಸ್ಕೃತಿ ಅಂದರೆ ಏನೆಂ... ಗೊತ್ತಿರಬೇಕಲ್ಲ, ಈಗಾಗಲೇ ವಿಸಿ ಆಯ್ಕೆಗಾಗಿ ಅಸ್ತಿ... ಬರಲಿರುವ ಸರ್ಚ್ ಕಮಿಟಿಗೆ ವಿವಿ ಪ್ರತಿನಿಧಿಯ... ಹಂ.ಪ. ನಾಗರಾಜಯ್ಯ ನಿಯುಕ್ತಿಗೊಂಡಿದ್ದಾರೆ. ಇ... ಮಲ್ಲೇಪುರಂ ಕೈವಾಡವೆ. ಇನ್ನು ಸರ್ಕಾರದ ಪತಿಯಿ... ದೇ. ಜವರೇಗೌಡ ಸರ್ಚ್ ಕಮಿಟಿ ಸೇರಬಹು... ಮೊನ್ನೆ ಮಲ್ಲೇಪುರಂ ಹಾಗೂ ಕುಮಾರಸ್ವಾಮಿ ಕ... ಕನ್ನಡ ಕುಲತಿಲಕ ಪ್ರಶಸ್ತಿ ತಗೊಂಡವರು ಇವ... ಯುಜಿಸಿ ಪತಿಯಿಂದ ಅಧ್ಯಕ್ಷ ಕೋರಟ್ ಇನ್ನೂ ಯಾ... ಸರ್ಚ್ ಕಮಿಟಿಗೆ ನೇಮಿಸಿಲ್ಲ. ಹಂಪಿ ವಿವಿಯ... ಮಲ್ಲೇಪುರಂ ಎಲ್ಲಿ ವಿಸಿಯಾಗಿ ಬಂದೇ ಬಿಡುತ್ತಾರೆಂ... ಗಾಬರಿಯಾಗಿ ಯುಜಿಸಿಗೆ ಈಗಾಗಲೇ ಮಲ್ಲೇಪು... ಅನರ್ಹತೆಗಳ ಪಟ್ಟಿ ಸಲ್ಲಿಸಿ ಬಂದಿದ್ದಾರೆ.

ನೋಡೋಣ, ಸೊಪ್ಪೈಟ ಮಂಜ, ಕಬಡ್ಡಿ ಬಾ... ಸಂಕ್ರಾಂತಿ ವೆಂಟ್ಕೇಶ ಮುಂತಾದವರೆಲ್ಲಾ ಅಥ... ದೇವೇಗೌಡರ ಆಪ್ತರೆಲ್ಲಾ ಸೇರಿಕೊಂಡು ಯಾರನ್ನು ಕ... ವಿವಿ ವಿಸಿಗಿರಿಗೆ ತಂದು ಕೂರಿಸುತ್ತಾರೆಂಬುದನ್ನು...

ಐಶ್ವರ್ಯವೇ ಬಡತನಕ್ಕೆ ಕಾರಣ -ಮಾರ್ಷಲ್ ಮಕ್‌ಲೂಹನ್

ಪತ್ರಿಕೆಯ ಜುಲೈ 25ರ ಸಂಚಿಕೆಯಲ್ಲಿ ಪೊಲೀಸರು ಮೆಣಸಿನಹಾಡ್ಯದಲ್ಲಿ ನಡೆಸಿದ ಕೊಲೆಗಳ ಕುರಿತು ಸಾವರ್ಕರಿಯ ಹಾಗೂ ವರದಿಗಳು ವಸ್ತುನಿಷ್ಠವಾಗಿವೆ. ಎನ್‌ಕೌಂಟರ್ ಎಂಬ ಈ ಪೊಲೀಸರ ಏಕಪಕ್ಷೀಯ ದುರಾಚರಣೆ ನಡೆದ ಸ್ಥಳಕ್ಕೆ ಹೋಗಿ ಆಸುಪಾಸಿನ ಜನರನ್ನು ಮಾತಾಡಿಸಿ ಬಂದ ಉಡುಪಿಯ ಪತ್ರಕರ್ತರೂ ಖಾಸಗಿಯಾಗಿ ನನ್ನೊಡನೆ ಮಾತಾಡುತ್ತ ನೀವು ಬರೆದಿರುವುದನ್ನು ದೃಢೀಕರಿಸಿದ್ದಾರೆ. ಕರ್ನಾಟಕದ ಕೆಲವು ಬುದ್ಧಿಜೀವಿಗಳು ಹಿಂಸಾಮಾರ್ಗವನ್ನು ತಾವು ಒಲ್ಲೆವು ಎಂದೂ ಪ್ರಜಾಸತ್ತಾತ್ಮಕ ಹೋರಾಟದಲ್ಲಿ ಮಾತ್ರ ತಮಗೆ ನಂಬಿಕೆ ಎಂದೂ ಪತ್ರಿಕೆಗಳ ಸಂಪಾದಕರಿಗೆ ಬರೆದ ಪತ್ರಗಳ ಮಸಿ ಆರುವ ಮೊದಲೇ ಮೆಣಸಿನಹಾಡ್ಯದ ಈ ದುರ್ಘಟನೆ ನಡೆದಿದೆ.

ಆಳುವವರು ಪ್ರಜೆಗಳ ಮೇಲೆ ಹಿಂಸಾಚಾರ ನಡೆಸುತ್ತಿರುವುದು ಇದೇನೂ ಮೊದಲ ಬಾರಿ ಅಲ್ಲ; ಈ ಸಮಾಜದಲ್ಲಿ ಹಿಂಸೆಯನ್ನು ಪ್ರಾರಂಭಿಸಿದವರೂ ನಕ್ಸಲೀಯರಲ್ಲ, ನಕ್ಸಲೀಯರನ್ನು ದಮನಿಸಿದ ಮಾತ್ರಕ್ಕೆ ಅದು ಕೊನೆಗೊಳ್ಳುವುದೂ ಇಲ್ಲ. ಆದರೆ ನಮ್ಮ ಬುದ್ಧಿಜೀವಿಗಳು ಮಾತ್ರ ಚೆಟ್ಟು ಚೀಪುವ ಮಕ್ಕಳ ಮುಗ್ಧತೆಯಲ್ಲಿ, ಇದುವರೆಗೂ ಹಿಂಸೆಯನ್ನು ತಾವು ಕಂಡುಕೇಳಿ ಅರಿಯದವರು ಎಂಬಂತೆ ಆತ್ಮನಿವೇದನೆಯ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಮನೋರೋಗಿಗಳನ್ನು ಹೊರತುಪಡಿಸಿ ಯಾರೂ ವಿನಾಕಾರಣ ಹಿಂಸೆಗೆ ಇಳಿಯುವುದಿಲ್ಲ.

ತಾವು ಹಿಂಸೆಯನ್ನು ವಿರೋಧಿಸುತ್ತೇವೆ ಎಂದು ಬುದ್ಧಿಜೀವಿಗಳು ಸಾರ್ವಜನಿಕರ ಎದುರು ಯಾಕೆ ಹೇಳಿಕೊಳ್ಳಬೇಕು? ಇವರು ಮಾತ್ರ ಹಿಂಸೆಯನ್ನು ವಿರೋಧಿಸುವವರೋ? ಈ "ಸ್ವಗತ ಚಕ್ರವರ್ತಿ"ಗಳು (ಎ.ಕೆ. ರಾಮಾನುಜನ್ ಅವರ ಪದಪ್ರಯೋಗ) ತಮ್ಮ ನ್ಯಾಯಪರತೆಯನ್ನು ರುಜುವಾತುಪಡಿಸಲು ತಾವು ಬರೇ ಅನ್ನ ತಿನ್ನುವವರೆಂದೂ, ಒಮ್ಮೊಮ್ಮೆ ಎರಡು ಕಾಲಿನ ಹಕ್ಕಿ ಮತ್ತು ನಾಲ್ಕು ಕಾಲಿನ ಪ್ರಾಣಿಗಳ ಮಾಂಸ ಬೇಸಿ ತಿನ್ನುವುದು ಉಂಟೆಂದೂ ಪತ್ರಿಕೆಗಳಿಗೆ ಬರೆದು ತಿಳಿಸುವುದೊಂದು ಇನ್ನು ಬಾಕಿ!

ಹಿಂಸೆ ಮತ್ತು ನಮ್ಮ ಬುದ್ಧಿಜೀವಿಗಳ ಕಳವಳ

ಅಹಿಂಸೆ, ಗಾಂಧಿವಾದ, ಪ್ರಜಾಸತ್ತಾತ್ಮಕ ಹೋರಾಟ ಮುಂತಾದ್ದರ ಬಗ್ಗೆ ಈ ಬುದ್ಧಿಜೀವಿಗಳ ಮುದ್ದು ಮುದ್ದಾದ ತೊದಲ್ನುಡಿಗಳು ಮುಚ್ಚಿಹಾಕಲು ಯತ್ನಿಸುವ ಈ ಸಮಾಜದ ಕರಾಳ ವಾಸ್ತವಗಳನ್ನು ವಿವರಿಸಬೇಕಾದ ಅಗತ್ಯವಿಲ್ಲ. ಆದರೂ ಎರಡು ಉದಾಹರಣೆಗಳನ್ನು



ಕಾವೇರಮ್ಮ



ರಾಮೇಗೌಡ

ಈ ಸಂದರ್ಭದಲ್ಲಿ ನಾವು ಗಮನಿಸಬಹುದು. (ಇಂತಹ ಎಷ್ಟೋ ಉದಾಹರಣೆಗಳನ್ನೂ ಕೊಡಬಹುದು).

ಈಶಾನ್ಯ ಭಾರತದ ಮಣಿಪುರದ ಪ್ರಜೆಗಳ ಮೇಲೆ ಸೈನಿಕರು-ಭಾರತದ ಸೈನಿಕರು-ನಡೆಸುತ್ತಿರುವ ದಬ್ಬಾಳಿಕೆಯ ವಿರುದ್ಧ ನಾಗರಿಕ ಹಕ್ಕುಗಳ ಹೋರಾಟಗಾರ್ತಿ ಕುಮಾರಿ ಇರೋಮ್ ಶರ್ಮಿಳಾ ಈಗ ಕೆಲವು ವರ್ಷಗಳಿಂದ- ಹೌದು ವರ್ಷಗಳಿಂದ, ನಿರಾಹಾರ ಸತ್ಯಾಗ್ರಹ ನಡೆಸುತ್ತಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಅವರ ದೇಹಕ್ಕೆ ಬಲಾತ್ಕಾರವಾಗಿ ನಳಿಕೆ ಮುಖಾಂತರ ದ್ರವಾಹಾರ ಸೇರಿಸಿ ಅವರ ಜೀವವನ್ನು ಉಳಿಸಿಕೊಳ್ಳಲಾಗಿದೆ. ಸರಕಾರ ಆಕೆಯ ಕಡೆ ಕಣ್ಣೆತ್ತಿ ಕೂಡ ನೋಡುತ್ತಿಲ್ಲ, ನಮ್ಮ ವಿರೋಧ ಪಕ್ಷಗಳು ಶರ್ಮಿಳಾರ ಹೋರಾಟವನ್ನು ನಿರ್ಲಕ್ಷ್ಯದಿಂದ ಕಾಣುತ್ತಿವೆ. ನಮ್ಮ ಮಾಧ್ಯಮಗಳು ಆಕೆಯನ್ನು ಮರೆತೇಬಿಟ್ಟವೆ. ಈ ನಡುವೆ ಮಣಿಪುರ ಮಾತ್ರವಲ್ಲ, ಇಡೀ ಈಶಾನ್ಯ ಭಾರತದಲ್ಲಿ ಸೈನ್ಯದ ದಬ್ಬಾಳಿಕೆ ಹಾಗೆಯೇ ಮುಂದುವರಿದಿದೆ ಪ್ರಜೆಗಳನ್ನು ವಿಚಾರಣೆಗೆ ಒಳಪಡಿಸಿ ಶಿಕ್ಷೆ ಕೊಡಲು ಸೈನಿಕರಿಗೆ ವಿಶೇಷ ಅಧಿಕಾರ ನೀಡುವ ಕರಾಳ ಕಾಯ್ದೆಯೂ ಮುಂದುವರಿದಿದೆ.

ಇರೋಮ್ ಶರ್ಮಿಳಾರ ಹಾಗೆಯೇ, ನರ್ಮದಾ ನದಿ ಯೋಜನೆಯ ಸಂತ್ರಸ್ತರ ಪರವಾಗಿ ಮೇಧಾ ಪಾಟ್ಕರ್ ಹಲವು ವರ್ಷಗಳ ಕಾಲ ನಿರಂತರವಾಗಿ ಅಹಿಂಸಾತ್ಮಕ, ಪ್ರಜಾಸತ್ತಾತ್ಮಕ ಹೋರಾಟ ನಡೆಸಿದರು. ಕಳೆದ ವರ್ಷವಷ್ಟೇ ಅವರು ಸುದೀರ್ಘ ಉಪವಾಸ ಸತ್ಯಾಗ್ರಹವನ್ನೂ ಮಾಡಿದರು. ಕೇಂದ್ರ ಸರಕಾರ, ಪ್ರತಿಪಕ್ಷಗಳು, ನ್ಯಾಯಾಲಯ ಮತ್ತು ಮಾಧ್ಯಮಗಳು- ನಮ್ಮ ಇಡೀ ಪ್ರಭುತ್ವ ವ್ಯವಸ್ಥೆಯೇ ಒಟ್ಟಾಗಿ ಆಕೆಯ ಸತ್ಯಾಗ್ರಹವನ್ನು ಬಗ್ಗುಬಡಿದು, ನರ್ಮದಾ ಅಣೆಕಟ್ಟನ್ನು ಇನ್ನಷ್ಟು ಎತ್ತರಿಸಿ, ಇನ್ನಷ್ಟು ಊರುಕೇರಿಗಳನ್ನು ಮುಳುಗಡೆ ಮಾಡಲು ಗುಜರಾತ್ ಸರಕಾರಕ್ಕೆ ಅನುಕೂಲ ಮಾಡಿಕೊಟ್ಟವು.

ಈಶಾನ್ಯ ಭಾರತ ಹಾಗೂ ಕಾಶ್ಮೀರಗಳಲ್ಲಿ ಸೈನ್ಯವನ್ನು ಎದುರಿಸುತ್ತಿರುವ ಪ್ರಜೆಗಳು, ನರ್ಮದಾ ನದೀಕೊಳ್ಳದ ಅಸಹಾಯಕ ರೈತರು, ನಿರ್ವಸಿತರಾಗುವ ಭಯದಲ್ಲಿರುವ ಕರ್ನಾಟಕದ ಮಲೆನಾಡಿನ ಗಿರಿಜನರು, ತಮ್ಮತಮ್ಮ ಊರುಗಳಲ್ಲೇ 'ಅನ್ಯಮತೀಯ'ರಾಗಿರುವ ಮುಸ್ಲಿಮರು ಮತ್ತು ಕ್ರೈಸ್ತರು ಹಾಗೂ ಎಲ್ಲ ಮೂಲಭೂತ ಸೌಲಭ್ಯ ಅವಕಾಶಗಳಿಂದ ಹೆಚ್ಚುಹೆಚ್ಚು ವಂಚಿತರಾಗುತ್ತಿರುವ ಬಡಜನರು ಮತ್ತು ಇವರನ್ನು ಹದ್ದುಬಸ್ತಿನಲ್ಲಿಟ್ಟಿರುವ ವ್ಯವಸ್ಥೆ-ಇವುಗಳಲ್ಲಿ ಹಿಂಸೆ ನಡೆಸುತ್ತಿರುವವರು ಯಾರು? ಹಿಂಸೆಗೆ ಬಲಿಯಾಗಿರುವವರು ಯಾರು?

ನಮ್ಮ ಬುದ್ಧಿಜೀವಿಗಳು ಈ ಪ್ರಾಥಮಿಕ ಪ್ರಶ್ನೆಗಳನ್ನೇ ಕೇಳಿಕೊಳ್ಳದೆ ಹಿಂಸೆ ಅಹಿಂಸೆಗಳ ಬಗ್ಗೆ ಬಡಬಡಿಸುತ್ತಿದ್ದಾರೆ; ಅವೆರಡರ ನಡುವೆ ಆಯ್ಕೆ ಮಾಡಿಕೊಳ್ಳುವುದು ಅಷ್ಟು ಸರಳವೋ ಎಂಬಂತೆ. ಇಂತಹವರ ಹುಸಿ ಕಾಳಜಿಗಳನ್ನು ವರ್ಣಿಸಲು ಕನ್ನಡದಲ್ಲಿ ಒಂದು ಸೊಗಸಾದ ಗಾದೆ ಇದೆ- "ಮದುಮಗನಿಗೆ ಅದೇ ಇಲ್ಲವಂತೆ."

-ಜಿ. ರಾಜಶೇಖರ್

"ಮಾತಾಡಲು ಇನ್ನೇನಿದೆ?"

ಮಾನ್ಯರೆ,

ಕಳೆದ ಜೂನ್ 27 ರಂದು ಚಿಕ್ಕಮಗಳೂರಿನಲ್ಲಿ ನಕ್ಸಲೀಯ ಬೆಂಬಲಿಗರ ಪಟ್ಟಿಯಿಂದ ಪ್ರಗತಿಪರ ಹೋರಾಟಗಾರರ ಹೆಸರುಗಳನ್ನು ಕೈಬಿಡಬೇಕೆಂದು ಒತ್ತಾಯಿಸಿ ನಡೆದ ರ್‍ಯಾಲಿಯ ಮುಂಚೂಣಿಯಲ್ಲಿದ್ದವರು ಆದಿವಾಸಿ ಹಿತರಕ್ಷಣಾ ಸಮಿತಿ ಕಾರ್ಯದರ್ಶಿ ಪರಮೇಶ್ ಹಾಗೂ ಮೂಡಿಗೆರೆಯ ಚಂದ್ರು ಮುಂತಾದ ಯುವಕರು. ತಾಲ್ಲೂಕ್ ಆಫೀಸಿನಿಂದ ಡಿ.ಸಿ. ಆಫೀಸ್‌ವರೆಗಿನ 2-3 ಕಿ.ಮೀ. ಉದ್ದದ ರ್‍ಯಾಲಿ ಹಾಗೂ ಡಿ.ಸಿ. ಆಫೀಸಿನ ಎದುರಿನ ಸಭೆಯನ್ನು ಈ ಯುವಜನರು ಅತ್ಯಂತ ಶಾಂತಿಯುತವಾಗಿ ನಡೆಯುವಂತೆ ನಿಯೋಜಿಸಿದ್ದರು. ಅಂದು ಹನಿಯುತ್ತಿದ್ದ ಮಳೆ ಜಿನುಗುತ್ತಿದ್ದ ನೆಲ. ಆದರೂ ಸಾವಿರಾರು ಮಂದಿ ಬಡ ಆದಿವಾಸಿ ಗಿರಿಜನರು ಅದರಲ್ಲಿ ಭಾಗವಹಿಸಿದ್ದರು. ಅದರಲ್ಲೂ ಮಹಿಳೆಯರೇ ಹೆಚ್ಚು. ಅಂದಿನ ಸಭೆಯ ವಿಶೇಷವೆಂದರೆ ಆ ಮುಗ್ಧರಿಗೆ ತಮ್ಮ ಸಮಸ್ಯೆಗಳಿಗಿಂತ ಹೆಚ್ಚಾಗಿ ತಮಗೆ ದನಿಯಾಗಿರುವವರನ್ನು ಪೊಲೀಸ್ ವ್ಯವಸ್ಥೆಯಿಂದ ರಕ್ಷಿಸಿಕೊಳ್ಳುವ ಕಾಳಜಿಯೇ ಮುಖ್ಯವಾಗಿತ್ತು.



ಪರಮೇಶ್

ಡಿ.ಸಿ. ಕಚೇರಿ ಎದುರು ಇವರೆಲ್ಲ ಸಂಜೆ ಐದು ಗಂಟೆಯ ವರೆಗೆ ಕಾದು ಕುಳಿತರೂ ಆ ಜಿಲ್ಲಾಧಿಕಾರಿ ಕಾಣಿಸಿಕೊಳ್ಳದೆ ತಲೆಮರೆಸಿಕೊಂಡ ಹಾಗಿತ್ತು. ನೆರೆದಿದ್ದ ಜನರೆಲ್ಲ ಒಬ್ಬೊಬ್ಬರಾಗಿ ಮಾತಾಡಿ ವ್ಯವಸ್ಥೆಯ ಕ್ರೌರ್ಯವನ್ನು ಖಂಡಿಸಿ, ಪ್ರಜಾತಂತ್ರದ ಉಳಿವಿಗಾಗಿ ದನಿ ಎತ್ತಿದರು.

ಪೊಲೀಸ್ ಇಲಾಖೆ ಈ ಎಲ್ಲವನ್ನೂ ವೀಡಿಯೋ ಮಾಡಿಕೊಳ್ಳುತ್ತಿತ್ತು. ಹಿಂಗಿರಬೇಕಾದರೆ ಪರಮೇಶ್ ನಾನು ಕುಳಿತಿದ್ದಲ್ಲಿಗೆ ಬಂದು 'ನೀವು ಏನಾದರೂ ಮಾತಾಡ್ತೀರಾ ಸಾರ್?' ಎಂದು ಕೇಳಿದ. ನಾನು 'ಮಾತಾಡಲು ಇನ್ನೇನಿದೆ ಪರಮೇಶ್? ಎಲ್ಲ ಮಾತಾಡಿದ್ದೀರಲ್ಲ' ಎಂದು ಅವನ ಕಣ್ಣು ಕಣ್ಣಿಟ್ಟು ಕೇಳಿದೆ: ಅವು burning bright ಆಗಿದ್ದವು. ಇದಾದ ಹದಿನಾಲ್ಕೇ ದಿನಗಳಲ್ಲಿ (10.7.07) ಅವನ ಬೆನ್ನಿಗೆ ಗುಂಡಿಟ್ಟು ಕೊಂದು ಎನ್‌ಕೌಂಟರೆಂದು ಬಿಂಬಿಸುವ ಪೊಲೀಸ್ ಪಡೆ ಆ ಕಣ್ಣುಗಳ ಹೊಳಪನ್ನು [illegible] ಕಳೆದುಕೊಳ್ಳಲಾಗಿ ವಿರೂಪಗೊಂಡ ಆ ಪರಮೇಶ ಮುಖವನ್ನು ನೆನೆದರೆ ಸಾಕು, ನನ್ನ ಕಣ್ಣು ಈಗಲೂ ಮಂಜಾಗುತ್ತವೆ. ಯಾವ ಅಪರಾಧಕ್ಕಾಗಿ ಆತನನ್ನು ಕೊಲ್ಲಲಾಯಿತು? ಮಣ್ಣಿನ ಮಗನ ಮೊಮ್ಮಗನ ಅಧಿಕಾರವಿರುವ ಈ ರಾಜ್ಯದಲ್ಲಿ ಬಡವರ ಮಾನ-ಪ್ರಾಣಗಳಿಗೆ ಬೆಲೆಯೇ ಇಲ್ಲವೆ? ಆದ್ದರಿಂದ ಕವಿವಾಣಿ ಗುಡುಗಿತು ಬಹಳ ಹಿಂದೆಯೇ:

ಕತ್ತಿ ಪರದೇಶಿಯಾದರೆ ಮಾತ್ರ ನೋವೆ?
ನಮ್ಮವರೆ ಹದಹಾಕಿ ತಿವಿದರದು ಹೂವೆ?- ಎಂದು.

ಹತ್ತು ಮೀನು ಮತ್ತು ಅಕ್ವೇರಿಯಂ ಮೀನು

ಮುಂಗಾರು ಮಳೆ ತುಂಗೆಯ ಹೊಳೆ ಆ ಜೋರಿಗೆ
ಹೊಸ ನೀರಿಗೆ ಹೊಸ ಹರೆಯ ಹತ್ತುವ ಆ ಮೀನಿಗೆ
ಇಕ್ಕಟ್ಟಿನ ಹೊಳೆ ಗಿರಿಕಂದರ ನೆಲೆ ಜಲಮೂಲಿಕೆ
ಹಾರುವುದು ಕಳಸ ಕುದುರೆಮುಖ ಕುಂದಾದ್ರಿಗೆ

ಆಯಕಟ್ಟಿನ ಕಡೆ ಬೇಟೆಗಾರರ ಪಡೆ
ಕೊಡಲಿ ಕುಡಗೋಲು ಬಲೆ ತಲೆ ಕಡಿವ ಕಲೆ
ಈಸಬೇಕು ಇದ್ದು ಜೈಸಬೇಕು ಈ ನೆಲೆ
ಮೊಟ್ಟೆ ಮರಿ ಮೀನು ನೀರ ಸಂಸಾರ

* * * * * * * *

ಗರುಡ ಮಾಲಿನ ಅಕ್ವೇರಿಯಮ್ಮಿನ
ಕಂಫರ್ಟ್ ಜೋನಿನ ಗಾಜುಗೋಳ
ಬಣ್ಣಬಣ್ಣದ ಬಿಟ್ಟ ಕಣ್ಣಿನ ಮೀನು
ಬಾಯ್ದೆರೆದರೆ ಬೀಳ್ವ ರೆಡಿಮೇಡ್ ಫುಡ್

ಬುದ್ಧ ಬಸವ ಗಾಂಧಿ ಸತ್ಯ ಅಹಿಂಸಾ
ಪುಂಖಾನುಪುಂಖ ಅನುಕಂಪ ಪ್ರವಚನ
ಅಯ್ಯೋ! ಅಚಾನಕ್ ಕೈ ಜಾರಿದರೆ ಗಾಜು?
***Fish out of water** ಇನ್ನೇನು?*

-ಪ್ರೊ. ಶಿವರಾಮಯ್ಯ

* 10.7.07 ರಂದು ಪಶ್ಚಿಮಘಟ್ಟ ಅಮ್ಮಡ್ಡು ಎಂಬಲ್ಲಿ ಗಿರಿಜನ ಪರಮೇಶ್, ರಾಮೇಗೌಡ್ರು, ಕಾವೇರಿಯಮ್ಮ ಮತ್ತು ಸುಂದರೇಶ್ ಮೇಲೆ ಪೊಲೀಸರು ನಡೆಸಿದ ನಕಲಿ ಎನ್‌ಕೌಂಟರ್ ನೆನೆದು

ಧಿಕ್ಕಾರ

ಪ್ರೀತಿಯ ಗೌರಿ,

ನನ್ನ ಈ ಹೊತ್ತಿನ ತಳಮಳ-ಪ್ರತಿಭಟನೆ ನಿಮಗೆ ಮಾತ್ರ ಸರಿಯಾಗಿ ಅರ್ಥವಾಗುವುದೆಂದು ನಂಬಿ ನನ್ನ ಈ 'ಧಿಕ್ಕಾರ' ಎಂಬ ಇದೀಗ ಹುಟ್ಟಿದ ಪದ್ಯವನ್ನು 'ಲಂಕೇಶ್'ಗಾಗಿ ಕಳುಹಿಸುತ್ತಿದ್ದೇನೆ.

ಮೊನ್ನೆ ಮೆಣಸಿನಹಾಡ್ಯದಲ್ಲಿ ಆದ ಅಮಾಯಕರ ಹತ್ಯೆ ನನ್ನನ್ನು ತಲ್ಲಣಗೊಳಿಸಿತು. ಪೊಲೀಸರಾದ ಮಾತ್ರಕ್ಕೆ ಅಪರಾಧವನ್ನು ಎಸಗಬಹುದೇ? ಮನುಷ್ಯತ್ವವನ್ನು 'ಹೆಸರಿಗಾಗಿ' ಕಳೆದುಕೊಳ್ಳುವುದೇ? ಸರ್ಕಾರದ ಬೆಂಬಲವಿಲ್ಲದೆ ಪೊಲೀಸರಿಗೆ ಇಂಥ ಹುಂಬ ಧೈರ್ಯ ಬರಲು ಸಾಧ್ಯವೇ? ಎಂಬ ಪ್ರಶ್ನೆಗಳೆಲ್ಲಾ ಹುಟ್ಟಿಕೊಂಡು ಗಿರಿಜನರು ನ್ಯಾಯಕ್ಕಾಗಿ ಹೋರಾಡುವುದು ತಪ್ಪೇ? ಅವರ ಸಮಸ್ಯೆಯನ್ನು ಪರಿಹಾರ ಮಾಡುವ ಬದಲು ಅವರನ್ನು ಕೊಂದು ಬಿಡುವುದೇ? ಎಂಬ ಪ್ರಶ್ನೆಗಳು ನನ್ನ ತಲೆ ತಿಂದು ಈ ಪದ್ಯ ಪತ್ರವನ್ನು ನಿಮಗೆ **post** ಮಾಡುತ್ತಿರುವೆ.

ನನ್ನ ಕಣ್ಣ ಈ ಪ್ರತಿ ಹನಿಯೂ
ಆ ಅಮಾನುಷ ಕೃತ್ಯಕ್ಕೆ
ಧಿಕ್ಕಾರ ಕೂಗುತ್ತಿದೆ-ತೊಟ್ಟುತೊಟ್ಟಾಗಿ.....

ಝುಮ್ಮನೆ ಗದ್ದುಗೆಯಲ್ಲಿ ಕುಳಿತವರೇ,
ಕೂರಲು ಯಾರನ್ನು ಬೇಕಾದರೂ ಪಾತಾಳಕ್ಕೆ
ತುಳಿಯಲು ಸಿದ್ಧವಿರುವವರೇ, ಕೇಳಿ-
ಮನುಷ್ಯ ಮಂತ್ರ ಗೊತ್ತಿಲ್ಲದವರು
ಮಂತ್ರಿಯಾಗಿರುವ ದುರಂತ
ಈ ರಕ್ತ ಪಿಪಾಸೆಗೆ ಸಾಕ್ಷಿ!
ಅಮಾಯಕರ ಅನ್ನ-ನೆರಳು
ಕಬಳಿಸಿಕೊಂಡು
ನ್ಯಾಯ ಕೇಳಲು ಹೊರಡುವ
ಹೃದಯಗಳಿಗೆ
ಅನ್ಯಾಯದ ಪಟ್ಟಿಹಚ್ಚಿ ಕಣ್ಮುಚ್ಚಿ
ತೆಗೆಯುವುದರೊಳಗೆ
ಗುಂಡಿಟ್ಟು ಹೊಡೆದು
ಎನ್‌ಕೌಂಟರ್ ಎಂದು ಸಾಧಿಸುವ
[illegible]
ಈ ನೆಲದ ಮಾನವಂತ ಪ್ರಜೆಯ
ಶಾಪವಿದು ಧಿಕ್ಕಾರ....
ನಾವು ಕೊಡುವ ಓಟಿಂದ ಮಾತ್ರ ಹಕ್ಕು ಪಡೆದು
ಮೇಲೇರಿ ಕೂತ ಧೀಮಂತರೇ,
ನೀರು-ನೆರಳಿಗಾಗಿ ಕಾಡು ಪಾಲಾದವರನ್ನು
ಒಮ್ಮೆ ಹಿಂಬಾಲಿಸಿಕೊಂಡು ಹೋಗಿ
ವಾಸ್ತವ್ಯ ಹೂಡಿ
ಹಗಲು ರಾತ್ರಿ ಕಳೆಯಿರಿ
ಜಿಗಣೆ ಕೈಲಿ ಕಚ್ಚಿಸಿಕೊಂಡು
ಗೋಣಿ ಹೊದ್ದುಕೊಂಡು ಗಿರಿಯ
ಆಶ್ರಯದಲ್ಲಿ
ಅವರ ಜಾಗದಲ್ಲಿ ನಿಮ್ಮನ್ನಿಟ್ಟು
ಇನ್ನಾದರೂ ನೋಡಿ.

ಹಂಸತೂಲಿಕಾ ತಲ್ಪದಲ್ಲಿ ಕುಳಿತು
ಜನರ ಬಳಿ ಹೋಗುವೆನೆಂಬ
ಬಣ್ಣದ ನಾಟಕ ಬಿಟ್ಟು
ಪ್ರಜಾಪ್ರಭುತ್ವದ ದೇವರ ಮೇಲೆ
ಆಣೆಯಿಟ್ಟು
ಆದರ್ಶವೆಂಬ ಮಗುವನ್ನು ಇನ್ನಾದರೂ
ಕಾಪಾಡಿ....

ಹಿಂಸೆಯೆಂಬ ದುರಾಸೆಯ ಭೂತ
ಆಳುವ ನಿಮ್ಮಲ್ಲಿ ಸಾಯುವವರೆಗೂ
ನೀವು ಯಾವ ಗದ್ದುಗೆ ಏರಿದರೇನು?
ಅಡಿಯಲ್ಲೇ ಇರುವ ಸರ್ಪ ಕಚ್ಚಿ
ಪಲ್ಟಿ ಹೊಡೆದು ರಕ್ತ ಕಾರಿ ಬೀಳಬೇಕಾಗುತ್ತೆ
ಮತ್ತೆ ನೆಲಕ್ಕೇ.

ಈ ನೆಲದ ಹಕ್ಕುದಾರನ ಮೇಲೆ
ಕರುಣೆಯಿರಲಿ
ಆತ್ಮಸಾಕ್ಷಿಯಿರಲಿ

ಈ ಮನುಷ್ಯ ಮಂತ್ರ ಗೊತ್ತಿಲ್ಲದವರನ್ನು
ಜನಾರ್ದನನೆಂಬ ದೇವರು
ಸುಮ್ಮನೆ ಬಿಡುವುದಿಲ್ಲ
ಸದಾ ಧಿಕ್ಕರಿಸುತ್ತಾನೆ
[illegible]

-ಪ್ರೀತಿ ಗುರುಸ್ವಾಮಿ

ಖಾಲಿ ಹೊಟ್ಟೆಯ ಮನುಷ್ಯನಿಗೆ ಆಹಾರವೇ ದೇವರು -ಗಾಂಧಿ

ಜೆಡಿಎಸ್‌ನೋರು ಲೇಡಿಕ್ಯಾಂಡೇಟಿಗೆ ಓಟು ಮಾಡದಿಲವಂತೆ!

ಜುಮ್ಮಿ ಕೋರ್ಟಿಗೆ ಹೋಗಿ ಕೇಸುಗೆದ್ದು ಬಂದ ಖುಷಿಯಲ್ಲಿದ್ದಳು.

"ಅಲ್ಲಾ ಕಣೊ ಮಾವ ನೀನೆ ಹೇಳು. ಬಡಬಗ್ಗರಿಗೆ ಆಸ್ರಯದ ಮನೆ ಕೊಡೊ ಹಕ್ಕ ನಮ್ಮಾವಿಂದ ಕಿತಗಂದಿದ್ರಲ್ಲಾ ಇದು ನ್ಯಾಯವೆ?" ಎಂದಳು.

"ಯಾರ್ಲೆ ಕಿತಗಂದಿದ್ದೋರೂ?"

"ಇನ್ಯಾರು ಯಮ್ಮೆಲ್ಲೆಗಳು ಕಿತಗೊಂದಿದ್ರು. ಅದ ನೋಡಾಕ್ಯಾದೆ ಯಾರೊ ಕೋಟಿಗೋಗಿದ್ರಂತೆ. ಆ ಕೇಸು ನಮ್ಮ ಕಡೆ ಆಯ್ತಂತೆ."

"ಅಂಗಾದೆ ಯಮ್ಮೆಲ್ಲೆಗಳು ಸೋತ್ರು ಅನ್ನು?"

"ಸೋಲದೇನು. ಜಡಜೆ ಮಕ್ಳುಗುದು ಕಳಿಸಿದ್ರಂತೆ" ಎಂದು ಜುಮ್ಮಿ ತನ್ನ ವೈರಿಗಳಿಗೆ ತಕ್ಕ ಶಾಸ್ತಿಯಾದಂತೆ ಬೀಗಿದಳು.

ಕಟ್ಟೆ ಪುರಾಣ

ಬಿ. ಚಂದ್ರೇಗೌಡ

"ಕೋರ್ಟಿಗೂ ಹೋಗಿರಲಿಲ್ಲಾ, ಕಚೇರಿಗೂ ಹೋಗಿರಲಿಲ್ಲ ಕಣಮಾವ. ಈ ಜುಮ್ಮಿ ಹೇಳತಳೆ ಅಂತ ನೀನು ಕೇಳ್ತ ಕುಂತಿದ್ದಿ" ಎಂದ ಉಗ್ರಿ.

"ಅಂಗರವುಳೇಳಿದ್ದು ಸುಳ್ಳೆ?"

"ಸುಳ್ಳಲ್ಲ ನಿಜವೆಯ. ಆಸ್ರಯದ ಮನೆಹಂಚಿಕೆ ನಮಗಿರ್ಲಿ ಅಂತ ಇದಾನಸಭೆವಳಗೆ ಕಾನೂನು ಮಾಡಿ ರಾಜ್ಯಪಾಲ್ರಿಗೆ ಕಳಿಸಿದ್ರಂತೆ. ರಾಜ್ಯಪಾಲ ಸಯಿನು ಮಾಡದೆ ವಾಪಸ್ಸು ಕಳಿಸಿದ್ದನಂತೆ."

"ಅಂಗರೇನೊ ಮಿಷ್ಕೀಕದೆ ಅಂದಂಗಾಯ್ತು."

"ಅಲವೇ. ಒಂದು ಪಂಚಾತಿ ಅಂತ ಮಾಡಿ ಅದಕ್ಕೆ ಒಬ್ಬ ಅಧ್ಯಕ್ಷ, ಉಪಾಧ್ಯಕ್ಷ, ಸೆಕ್ರೆಟರಿ ಅಂತ ಯಲ್ಲಾರು ಇದ್ದು ಯಲ್ಲಾ ಪವರು ತಿರಗ ಎಮ್ಮೆಲ್ಲಿಗೆ ಇರೋದಾದ್ರೆ ನಜೀರ್ ಸಾಬ್ರು ಜಿಲ್ಲಾ ಪಂಚಾತಿನೆ ರದ್ದು ಮಾಡ್ಯೇಳೂ."

"ಅದು ವಳ್ಳೆದೆ ಬುಡು. ಸ್ವಸಿಗೆ ವಗತನ ಕೊಟ್ಟು ಬೀಗದೆಸಳನ್ನಲ್ಲ ಸ್ವಂಟಕೆ ಸಿಗಿಸಿಗಂಡು ತಿರುಗೋ ಅತ್ತೆ ಕಥಿಯಾಯ್ತು ಇದು."

"ಅಂಗೆ ಆಗ್ಯದೆ. ಇವುರು ಹಿಂಗೆ ಮಾಡದಾದ್ರೆ ನಮ್ಮೊರ್ಕಲ್ಲ ಯಲಕ್ಷನ್ನಿಗೆ ನಿಂತು ಗೆದ್ದು ಬಂದು ಮೆಂಬ್ರಾಗದ್ಯಾಕೆ, ಕ್ಯಲಸ ಬವುಸಬುಟ್ಟು ಮೀಟಂಗು ಅಂತ ಹೋಗದ್ಯಾಕೆ?"

"ಅಲ್ಲಾ ಆ ನಜೀರ್‌ಸಾಬ್ರು ಮಾಡಿದ್ದೇನು, ಈ ಸೂಳೆಮಕ್ಕಳು ಮಾಡ್ತಯಿರದೇನು?" ಎಂದ ಸೀರ.

"ಅದು ದೇವೇಗೌಡನ ಸವಾಸ ಕಣೊ. ಅವನ ದ್ಯಸಿಂದಯಲ್ಲಾ ಮಂತ್ರಿಗಳ ಪವರ್ರು ಅವುನ ಕೈಲೇ ಅದಂತೆ. ಈ ಮಂತ್ರಿಗಳ್ಯಲ್ಲ ಹಿಡ ಮಾಡಿರೊ ವಾತಗಳಂಗೆ ಬರೀಬಬ್ಬೆ ವಡಿತವೇ ವರತೂ, ಇವು ಕೈಲಿ ಏನೂ ಆಯ್ತಾಯಿಲವಂತೆ" ಎಂದು ಉಗ್ರಿ ಹೇಳುವಾಗ ಬಂದ ವಾಟಿಸ್ಸೆ.

"ಎಜ್ಜಾಟ್ಲಿ ಕರಟ್ ಕಣೊ ಉಗ್ರಿ. ನೀನೇಳಿದ ಮಾತು ವಿಧಾನಸಭೆವಳಗೂ ಡಿಸ್‌ಕಸ್ ಆಗ್ಯದೆ" ಎಂದ.

"ಏನು ದಿಸ್‌ಕಸ್ ಆಯಿತ್ಲ?" ಎಂದ ಕಾಳಮಾವ.

"ರೇವಣ್ಣ ನಿಭಾಯಿಸ್ತಾಯಿರೊ ಕಾತೆ ಎಷ್ಟು ಅಂತ ಚರ್ಚೆ ಆಗ್ಯದೆ ದ್ವಡಪ್ಪ"

"ಇಸಿಸಿ, ಎಷ್ಟು ಅಂದ್ರೆ ಅವನಿಗೆ ವಯಿಸಿರೊ ಖಾತೆಯ ನೋಡಿಕತ್ಸನೆ ಕಂಡ್ಯ."

"ಅಂಗಾಗಿದ್ರೆ ದೂರು ಯಾಕೆ ಬತ್ತಿತ್ತು ದ್ವಡಪ್ಪ ದ್ಯಾವೇಗೌಡ ಯಂಗೆ ಪವರ್ಯಲ್ಲ ನನ್ನ ಮನೆಲೆ ಇರಬೇಕು ಅಂತ ಯೋಚನೆ ಮಾಡ್ತನೊ, ಅಂಗೆ ಈ ರೇವಣ್ಣನೂ



ಯಲ್ಲಾ ಮಂತ್ರಿ ಖಾತೆವಳಿಕೂ ಕೈ ಯಾಡುಸ್ತನಂತೆ."

"ಆಡಿಸಿಗಳ್ಳಿ ಬುಢ್ಯ ಏಟು ದಿನಾಡ್ಸನೂ?" ಎಂದ ಸೀರ.

"ಎಷ್ಟು ದಿನ ಅನ್ನಂಗಿಲ್ಲ ಚಿಗಪ್ಪ, ಆಗ್ಲೆ ಎಡೂರಪ್ಪ ಡಲ್ಲಾಗಿದ್ದನಂತೆ, ಯಾರೋಗಿ ಮಾತಾಡ್ಸಿದ್ರು ಮುಖ ಗಂಟಾಯ್ಕಂಡೇ ಮಾತಾಡ್ತನಂತೆ. ಶೋಭಾ ಕರಂದ ಹೋದ್ರೆ ಮಾತ್ರ ಗೆಲುವಾಗಿರತನಂತೆ" ಎಂದ ಪಾ

"ಏಟೇ ಆಗ್ಲಿ ಹೆಡತಿ ಸತ್ತೋಸಲವೆ, ಹೆಂಗ ಕಂಡಾಗ ಅಕ್ಕರ ಮಾಡಬವುದು ಬುಡು ಹೋಗ್ಲಿ."

"ಅದೂ ಇಲ್ದೆ ಬದ್ದಿದ್ರುಪ್ಪ, ಅದೇನೊ ದ್ಯಾವೇಗೌಡನಿಗೆ ಕಡಿಗಾಲಕೆ ಜಾತಿಗೆಟ್ರು ಸುಖಪಡಬೇಕು ಅನ್ನೊ ಬ ಬರ್ಲಾಗಿ ಈ ಮುಂಡ್ಯತ್ವಾ ಮಂತ್ರಿಗಳಾದೊ, ಈಟು ದಿನಗಂಟ ಹೇಳಿದಂಗೆ ಬದ್ದಿರಲಿಲವೆ, ಅಂಗೆ ಬದ್ದಿರಕ್ಕೇನೂ?" ಎಂದ ಉ

"ಇದೇನೊ ಉಗ್ರಿ, ಕುಮಾರಣ್ಣನ ಅಭಿಮಾನಿಯಂಗೆ ಮಾತಾಡ್ತೀ?"

"ಇನ್ನೇನೇಳನೊ ವಾಟ ಎಂಭತ್ತು ಜನ ಎಮ್ಮೆಲ್ಲೆಗಳ ಮೂವತ್ತೈದು ಜನ ಎಮ ಇಟಗಂಡೋನ್ನ ಮುಖ್ಯಮ ಮಾಡಿ ಅವುನೇಳಿದಂಗೆ ಕೇ ಮುಂಡೆವುಕೆ ಏನು ಕೊಟ್ರು ತ ಗೌಡವ ಬಂದತೂ?"

"ಕೇಳದೇನು, ಈಗ್ಲು ಕುಮಾ ರಣ್ಣ ಹೇಳಿದಂಗೆ ಕೇಳಿಕೊಂಡು ನೀನೆ ಮುಂದುವರಿಯ ಆ ಎಡೂರಪ್ಪ ಬ್ಯಾಡ ಅಂತ ಹೇಳವು ಬಿಜೆಪಿಲಿ ಇದ್ದವ ಇದಕೇನೇಳ್ತೀ?"

"ಯಲ್ಲಾ ಮಂತ್ರವಾದಿ ಕ್ಯಲಸಬುಡು, ಪದ್ಮನಾಭನಗ ಮಂತ್ರವಾದಿ ಸುಮ್ಮನೆ ಕುಂತವುನೆ ಅಂತ ಮಾಡಿದ್ದಿಯ

ವೈದ್ಯಕೀಯ ಕಾಲೇಜುಗಳ ಹಾರಾಡುವ ಪ್ರೊಫೆಸರುಗಳು!

ಜಾತ್ಯತೀತ ಜನತಾದಳ ಮತ್ತು ಭಾರತೀಯ ಜನತಾ ಪಕ್ಷ ಅನೈತಿಕ ವಿವಾಹ ಮಾಡಿಕೊಂಡಾಗಲೇ ಜನ ಬೆದರಿದ್ದರು. ಇದು ಏನಪ್ಪ ಯುವಕ ಮುಖ್ಯಮಂತ್ರಿ ಜೊತೆಗೆ ನಿಷ್ಠಾವಂತ, ನೈತಿಕತೆಯ ಪ್ರತಿರೂಪವೇ ಆದಂತಹ ಆರೆಸ್ಸೆಸ್‌ನ ಮುಖಗಳು ಅಧಿಕಾರದ ಕುರ್ಚಿ ಮೇಲೆ ಕುಳಿತರೆ ನಮ್ಮಗಳ ಗತಿಯೇನು, ಬೇರೆ ರಾಜ್ಯಗಳಿಗೆ ತಮ್ಮ ಬಿಡಾರ ಎತ್ತಬೇಕಾಗಬಹುದು ಎಂದೆಲ್ಲ ಕಾತರದಿಂದಿದ್ದರು. ಡಾ. ವಿ.ಎಸ್. ಆಚಾರ್ಯ ವೈದ್ಯಕೀಯ ಶಿಕ್ಷಣ ಸಚಿವ ಅಂತ ತಿಳಿದ ಮೇಲೆ, ವೈದ್ಯಕೀಯ ಶಿಕ್ಷಣದ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ಕೊಳ್ಳೆ ಹೊಡೆಯುತ್ತ ಐಷಾರಾಮಿ ಜೀವನ ನಡೆಸುತ್ತಿದ್ದವರೆಲ್ಲ ಸುಸ್ತು ಹೊಡೆದಿದ್ದರು. ಈ ಮನುಷ್ಯ ಮೊದಲೇ ವೈದ್ಯನಾಗಿದ್ದವನು, ಅಂದಮೇಲೆ ಅದರ ಆಳ ಅಗಲ ತಿಳಿದಿರೋನು. ಮೇಲಾಗಿ ಆರೆಸ್ಸೆಸ್‌ನ ನಿಷ್ಠಾವಂತ ಕಾರ್ಯಕರ್ತನಾಗಿದ್ದೋನು ನಮ್ಮನ್ನ ಸುಮ್ಮನೆ ಬಿಟ್ಟಾನೆಯೆ, ನಮ್ಮ ಎಲ್ಲ ಹುಳುಕನ್ನು ಬಯಲು ಮಾಡಿ ಜೀವ ಜಾಲಾಡ್ತಾನೆ ಅಂತ ಹೆದರಿ ನಡುಗುತ್ತಿದ್ದರು. ಎಂದಿನಂತೆ ಹಣ ನೀಡಿ ಎಲ್ಲಾನೂ ಸರಿಮಾಡಿಕೊಳ್ಳಬಹುದು ಅಂತ ಭಂಡ ಬಿದ್ದವರೂ ಅದ್ಯಾಕೋ ಏನೋ ಆಚಾರ್ಯರ ಮುಖ ನೋಡಿದರೆ ಸಾತ್ವಿಕ ಕಳೆತುಂಬಿದೆ; ಬೇರೆ ಮಂತ್ರಿಗಳ ಮುಖದ ಮೇಲೆ ಹಣದ ಲಾಲಸೆ ತಕಪಕ ಅಂತ ಯಕ್ಷಗಾನದ ನಟನೆ ಮಾಡುತ್ತಿರುತ್ತೆ, ಇಂತಹ ಮಂತ್ರಿಯ ಮುಂದೆ ಹಣದ ಆಸೆ ಒಡ್ಡಿ ಬದುಕಿರೋದು ಉಂಟೆ ಅಂತ ಇನ್ನು ಇಲ್ಲಿಂದ ಡೇರೆಕೀಳದೆ ಅನ್ಯಮಾರ್ಗವೇ ಇಲ್ಲ ಅಂತ ತೀರ್ಮಾನಿಸಿದ್ದರು. ಆದರೆ ನಮ್ಮ ವೈದ್ಯಕೀಯ ಶಿಕ್ಷಣ ಮಂತ್ರಿಗಳು ಹೇಗಿದ್ದರೂ ದಕ್ಷಿಣ ಕರ್ನಾಟಕದಿಂದ ಬಂದಿದ್ದವರು ಅಲ್ಲವೇ... ಆ ಜಿಲ್ಲೆಯ ಜನರಿಗೆ ಮಾನವೀಯ ಸಂಬಂಧಗಳಿಗಿಂತ ಹಣವೇ ಮುಖ್ಯ ಅಂತೆ... ವೈದ್ಯಕೀಯ ಶಿಕ್ಷಣ ಮಾರಿ ಹಣ ಮಾಡುವುದು ಅಪರಾಧ ಅಲ್ಲ ಎಂಬ ಸಂದೇಶವನ್ನು ಜಾರಿಗೆ ತಂದು ಶಿಕ್ಷಣ ಮಾರಾಟದ ದಂಧೆಯಲ್ಲಿ ಮುಳುಗಿರುವವರಿಗೆಲ್ಲ ಆತ್ಮವಿಶ್ವಾಸ ತುಂಬಿದರು!

ಗುಣಮಟ್ಟದ ಶಿಕ್ಷಣ ನೀಡಬೇಕು ಅನ್ನುವ ದೃಷ್ಟಿಯಿಂದ ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಭಾರತೀಯ ವೈದ್ಯಕೀಯ ಮಂಡಳಿ ಕೆಲವು ರೂಪುರೇಷೆಗಳನ್ನು ನೀಡಿದೆ. ಇಂತಿಂತಹ ವಿಭಾಗದಲ್ಲಿ ಇಂತಿಂತಹ ಹುದ್ದೆಗಳು ಇರಬೇಕು, ಅವಕ್ಕೆ ಇಷ್ಟು ಸಿಬ್ಬಂದಿ ಇರಬೇಕು ಅಂತ ಅದು ಸ್ಪಷ್ಟಪಡಿಸಿದೆ. ಆದರೇನು ಮಾಡುತ್ತೀರಿ, ನುರಿತ, ತಜ್ಞ ವೈದ್ಯರ ಅಭಾವ. ಹಾಗಂತ ವೈದ್ಯಕೀಯ ಶಿಕ್ಷಣ ನೀಡಬೇಕು ಅಂತ ಒತ್ತಾಸೆ ಇರುವವರಿಗೆ ಒಳಗಿನಿಂದ ಏನೋ ಗುಮ್ಮಿದಂತಾಗುತ್ತದೆ. ಅದಕ್ಕೇ ಭಾರತೀಯ ವೈದ್ಯಕೀಯ ಮಂಡಳಿ ಚಾಪೆ ಕೆಳಗೆ ನುಸುಳಿದರೆ ಇಂತಹ ಮಹಾಶಯರುಗಳು ರಂಗೋಲಿ ಕೆಳಗೆ ನುಸುಳುತ್ತಾರೆ! ಇದು ಹೇಗೆ ಎಂಬುದನ್ನು ಈಗ ತಿಳಿಯೋಣ.

ಯಾವುದೇ ಖಾಸಗಿ ವೈದ್ಯಕೀಯ ಕಾಲೇಜನ್ನು ನೀವು ಪರೀಕ್ಷಿಸಿ. ಅಲ್ಲಿ ನಾಲ್ಕು ರೀತಿಯ ಸಿಬ್ಬಂದಿಯನ್ನು ಕಾಣಬಹುದು. ಅವೆಂದರೆ

1. ನಿಯಮಿತ ಸಿಬ್ಬಂದಿ. ಪ್ರತಿನಿತ್ಯವೂ ಕಾಲೇಜಿಗೆ ಹಾಜರಾಗಿ ಕತ್ತೆ ದುಡಿಮೆ ಮಾಡುವವರು

2. ವಾರದ ಸಿಬ್ಬಂದಿ. ವಾರಕ್ಕೊಮ್ಮೆ ಹಾಜರಾಗಿ, ಬಂದಾಗ ತರಗತಿ ತೆಗೆದುಕೊಳ್ಳುವವರು



3. ತಿಂಗಳ ಸಿಬ್ಬಂದಿ. ಇವರ ವಿವರಣೆ ಬೇಕಿಲ್ಲ. ಇವರು ತಿಂಗಳಿಗೆ ಒಮ್ಮೆ ತಮ್ಮ ಪಾದದಿಂದ ಕಾಲೇಜಿನ ಆವರಣವನ್ನು ಪುನೀತಗೊಳಿಸುವವರು. ಪಾಠ? ಮಾಡಿದರು ಮಾಡಿದರು, ಇಲ್ಲವಾದರೆ ಇಲ್ಲ, ಎಲ್ಲ ಅವರ 'ಮೂಡ್' ಮೇಲೆ!

4. ಎಂಸಿಐ ಸಿಬ್ಬಂದಿ. ಇವರು ಭಾರತೀಯ ವೈದ್ಯಕೀಯ ಮಂಡಳಿ ತನಿಖೆಗೆ ಬರುತ್ತಾರೆ ಎಂದ ದಿವಸ ಬರುವವರು! ಇಲ್ಲಿ ಒಂದು ಸಂಶಯ ತಲೆದೋರಬಹುದು. ಭಾರತೀಯ ವೈದ್ಯಕೀಯ ಮಂಡಳಿಯ ಭೇಟಿಯ ದಿನಾಂಕವನ್ನು ಗೋಪ್ಯವಾಗಿಡಲಾಗುತ್ತದೆ. ಹೀಗಿರುವಾಗ ಅವರ ಅನಿರೀಕ್ಷಿತ ಭೇಟಿಯ ದಿನ ಇವರಿಗೆ ಹೇಗೆ ತಿಳಿಯುತ್ತದೆ? ಇದಕ್ಕೆ ಉತ್ತರ ಏನು ಅಂದರೆ ಭಾರತೀಯ ವೈದ್ಯಕೀಯ ಮಂಡಳಿ-ವೈದ್ಯಕೀಯ ಕಾಲೇಜುಗಳ ಸಂಬಂಧ ಅಷ್ಟು ಅನ್ಯೋನ್ಯವಾಗಿರುತ್ತೆ! ಅಂದಮೇಲೆ ಅವರ ಅನಿರೀಕ್ಷಿತ ಭೇಟಿಯೂ ಕಾಗದದ ಮೇಲೆ ಅನಿರೀಕ್ಷಿತವಾಗಿಯೇ ಇದ್ದರೂ ನಿರೀಕ್ಷಿತ ಭೇಟಿಯೇ ಆಗಿರುತ್ತೆ!

ಈ ತಜ್ಞ ವೈದ್ಯ ಮಹಾಶಯರು ಖಾಸಗಿ ನರ್ಸಿಂಗ್ ಹೋಂಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸುತ್ತಾ ಅವಶ್ಯಕತೆ ಬಿದ್ದಾಗ ತಮ್ಮ ಹಸ್ತಾಕ್ಷರಗಳನ್ನು ಕಾಲೇಜಿನಲ್ಲಿ ಹಾಕುವ ಕೃಪೆ ತೋರುತ್ತಾರೆ. ಹೀಗೆ ಹಾರಾಡುವ ತಜ್ಞರ ಸಂಬಳ ಕೆಲವೊಮ್ಮೆ ತಿಂಗಳಿಗೆ ಒಂದು ಲಕ್ಷಕ್ಕೂ ಮೀರುವುದಂತೆ. ಇದು ಬಿಳಿಹಣ ನೋಡಿ, ಪಾಪತಜ್ಞರಿಗೆ ಆದಾಯ ತೆರಿಗೆಯವರ ಕಾಟ. ಅದನ್ನು ತಪ್ಪಿಸಲು ಇದರಲ್ಲಿ ಸ್ವಲ್ಪ ಭಾಗವನ್ನು ಕಪ್ಪುಹಣದ ರೂಪದಲ್ಲಿ ನೀಡಲು ಸಂಬಂಧಿಸಿದವರು ಒಪ್ಪಿಗೆ ಸೂಚಿಸುತ್ತಾರಂತೆ! ಇದರಲ್ಲಿ ಆಶ್ಚರ್ಯಪಡುವುದು ಏನೂ ಇಲ್ಲ, ಇಂತಹ ತಜ್ಞರು ನಮ್ಮ ಕಾಲೇಜಿನ ಪ್ರಾಧ್ಯಾಪಕರು ಎಂಬುದೇ ಹೆಮ್ಮೆ ಅಲ್ಲವೆ!

ಒಮ್ಮೊಮ್ಮೆ ದೇಶದ ಹಲವು ಕಾಲೇಜುಗಳಲ್ಲಿ ತಜ್ಞರ ಕೊರತೆ ಬೀಳುತ್ತದೆಯಂತೆ. ಅಂತಹ ಸಂದರ್ಭಗಳಲ್ಲಿ ಈ ಮಹನೀಯರುಗಳು ತಮ್ಮ ಹಾರಾಡುವ ಸೇವೆಯನ್ನು ಇತರೆ ಕಾಲೇಜುಗಳಿಗೂ ದಾನ ಮಾಡುವರಂತೆ. ಹೀಗಾಗಿ ಒಬ್ಬೊಬ್ಬ ತಜ್ಞರೂ ನಾಲ್ಕು-ಐದು ಕಾಲೇಜುಗಳಲ್ಲಿ ಏಕಕಾಲದಲ್ಲಿ ಸೇವೆ ಸಲ್ಲಿಸುವರಂತೆ! ಅಂತಹ ಕಾಲೇಜುಗಳಲ್ಲಿ ಎಂಸಿಐ ಯಾವುದೇ ಸಿಬ್ಬಂದಿ ಕೊರತೆಯನ್ನು ಕಾಣದೆ ಅನುಮತಿ ನೀಡುವುದಂತೆ!

ಇಂತಹ ಸೇವಾದುರಂಧರರ ವರ್ತನೆ ಕೆಲವು ಎಂಸಿಐ ಸದಸ್ಯರಿಗೆ ಹಿಡಿಸದಿರುವುದರಿಂದ ತಾನೇ ವೆಬ್‌ಸೈಟ್ ತೆಗೆದು ಕಾಲೇಜು-ಸಿಬ್ಬಂದಿ ವಿವರ ಲಭ್ಯಪಡಿಸಿಕೊಂಡಿದ್ದರೂ ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ದೊರೆಯುತ್ತಲೇ ಇರುವುದರಿಂದ ಕಾಲೇಜುಗಳ ಆಡಳಿತ ಮಂಡಳಿಯವರು ಯಾವುದೇ ಚಿಂತೆಗೆ ಒಳಗಾಗಿಲ್ಲವಂತೆ. ಯಾಕೆಂದರೆ ವೆಬ್‌ಸೈಟ್‌ನ ತುಂಬುವವರೂ ಮನುಷ್ಯರು ತಾನೆ!

ಅಲ್ಲ ಖಾಸಗಿ ಕಾಲೇಜುಗಳಲ್ಲಿ ತಜ್ಞರ ಅಭಾವ ಈ ಪಾಟಿ ಇರಬೇಕಾದರೆ ಇನ್ನು ಸರ್ಕಾರಿ ಕಾಲೇಜುಗಳ ಗತಿ ಏನು, ಸರ್ಕಾರ ಆರು ಹೊಸ ಕಾಲೇಜುಗಳ ಪ್ರಾರಂಭಿಸುತ್ತೇವೆ ಎಂದು ಟಾಂಟಾಂ ಹೊಡೆಯುತ್ತಿದೆಯ ಅಂತ ಏನೂ ಯೋಚಿಸಬೇಕಿಲ್ಲ. ಅದಕ್ಕೂ ಆಚಾರ ಹತ್ತಿರ ಮದ್ದು ಇದೆ. ಅದು ಏನಪ್ಪ ಅಂದರೆ....

ಹೊಸ ವೈದ್ಯಕೀಯ ಕಾಲೇಜುಗಳು ಪ್ರಾರಂಭವಾಗಿರ ನಗರಗಳಲ್ಲಿ ಖಾಸಗಿ ನರ್ಸಿಂಗ್ ಹೋಂಗಳಿವೆ, ಅದರ ತಜ್ಞರೂ ಕೆಲವರಿದ್ದಾರೆ. ಅವರನ್ನು ಬೋಧಕ ಸಿಬ್ಬ ಎಂದು ಗುರುತಿಸಿದರಾಯಿತು! ಅರೆ, ಸಹ ಪ್ರಾಧ್ಯಾ ಉಪಪ್ರಾಧ್ಯಾಪಕ ಇಂತಹ ಹುದ್ದೆಗಳಿಗೆ ಬೋಧ

ಅನಾ...

ಎಚ್.ಎಲ್. ಕೇಶವಮೂರ್ತಿ

ಅನುಭವ ಬೇಡವೆ? ಬೇಡ ಅಂದವರ್‍ಯಾರು. ಕಾಗ ಮೇಲೆ ಅದೂ ಇರುತ್ತೆ! ಅಲ್ಲ ಬೋಧನೆಯನ್ನೇ ಮಾ ಈ ರೀತಿ ಸುಳ್ಳು ಪ್ರಮಾಣಪತ್ರಗಳನ್ನು ನೀಡುವ ಸಂಸ್ಥೆ ಉಂಟೆ ಅಂದರೆ ಮಠಾಧಿಪತಿಗಳು, ಸಮಾಜಸೇವಾಕರ್ತ ನಡೆಸುತ್ತಿರುವ ವೈದ್ಯಕೀಯ ಕಾಲೇಜುಗಳಿಂದಲೇ ಹೊರಬರುತ್ತಿವೆಯಂತೆ! ಇಂತಹ ಸುಳ್ಳು ಪ್ರಮಾಣ ಪಡೆದುಕೊಂಡಿರುವವರು ಕಾಲೇಜಿನಿಂದ ನಿಗದಿತ ಸಂ ಪಡೆಯುತ್ತಾ ಖಾಸಗಿ ನರ್ಸಿಂಗ್ ಹೋಂಗ ಎಂದಿನಂತೆಯೇ ಕಾರ್ಯನಿರತರಾಗಿದ್ದಾರ ಅಂದರೇನಾಯಿತು ಯಾವುದೇ ನಗರಕ್ಕೆ ಸಕಾ ವೈದ್ಯಕೀಯ ಕಾಲೇಜು ಬಂದಿತು ಎಂದರೆ ಖಾಸಗಿ ನರ್ಸಿ ಹೋಂ ವೈದ್ಯರುಗಳಿಗೆ ಪುಕ್ಕಟೆ ಸಂಬಳ! ವಿದ್ಯಾರ್ಥಿಗಳ ಪಾಡೇನು ಅಂದರೆ ಅದನ್ನು ಕೇಳ ಕುಳಿತರೆ ಹಣ ಮಾಡುವುದು ಹೇಗ್ರಿ ಅಂತ ಕೇಳಬಹು ಡಾ. ವಿ.ಎಚ್. ಆಚಾರ್ಯ!

ಸುಳ್ಳು ಪ್ರಮಾಣಪತ್ರ ನೀಡಿದ ವೈದ್ಯಕೀ ಕಾಲೇಜುಗಳ ಹಾಗೂ ಅದನ್ನು ಪಡೆದು ಸಕಾ ಸೇವೆಯನ್ನು ಮಾಡುತ್ತಿರುವ ವೈದ್ಯ ಮಹಾಶ ಧೈರ್ಯವನ್ನು ಮೆಚ್ಚಲೇಬೇಕು. ಯಾಕೆಂದರೆ ಯಾರಾದ ತಲೆ ಕೆಟ್ಟವನು ಐದು ವರ್ಷ ಕೆಲಸ ನಿರ್ವಹಿಸಿದ

ಗ್ಗೆ ನೋಡು ರಾಷ್ಟ್ರಪತಿ ಯಲಕ್ಷನ್ನಿಗೆ ಓಟು ಮಾಡುಸಲಿಲ್ಲ
ನ್ನ ಅವ್ರುನು."

"ರಾಷ್ಟ್ರಪತಿ ಯಲಕ್ಷನ್‌ಗೆ ಯಾರ್ಲ ಓಟು
ಮಾಡಲಿಲ್ಲ?" ಎಂದಳು ಜುಮ್ಮಿ.

"ಜನಾದೇಶದ ಯಮ್ಮೆಲ್ಲೆ ಮಿಟ್ರೂ ಓಟು ಮಾಡಲಿಲ
ಂತೆ ಕಣಕ್ಕ."

"ಅದೆಲ್ಲಿಗೋಗಿದ್ರೂ?"

"ಯಾರ ತಿಥಿಗೂ ಹೋಗಿರಲಿಲ್ಲ, ಅಲ್ಲೇ ಇದ್ರಂತೆ."

"ಅಲ್ಲೇ ಇದ್ದು ಓಟು ಮಾಡಲಿಲವೆ?"

"ಊ ಕಣಕ್ಕ, ರಾಷ್ಟ್ರಪತಿಯಾಗೋ ಕ್ಯಾಂಡೇಟು ಲೇಡೀ
ಗಿದ್ರು. ಜೆಡಿಎಸ್‌ಗೂ ಲೇಡೀಸ್‌ಗೂ ಆಗದಿಲ್ಲ, ಅದ್ಕೆ
ವರ ಸರ್ಕಾರದಲ್ಲಿ ಯಾರಾರ ಲೇಡೀಸು ಮಂತ್ರಿಯಾಗಿ
ರೆ? ಅದ್ಕೆ ಲೇಡಿ ಕ್ಯಾಂಡೇಟಗೆ ಓಟು ಮಾಡುಸ್‌ಲಿಲವಂತೆ
ದ್ಯಾವೇಗೌಡ."

"ಥೂ ಇವ್ರುನೇಳ್ತನೆ ಅಂತ ಕೇಳೆ ನೀನು, ದ್ಯಾವೇಗೌಡ
ಆಗಾಡ್ತಯಿರೊ ನಾಟಕದಲ್ಲಿ ಬಿಜೆಪಿ ಕ್ಯಾಂಡೇಟ್‌ಗೆ ಓಟು
ಮಾಡಂಗಿಲ್ಲ, ಅದ್ಕೆ ಕಾಂಗ್ರೆಸ್‌ನೋರಿಗೂ ನಿಸ್ತೂರ ಆಗಂಗಿಲ್ಲ,
ಅದ್ಕೆ ಯಾರಾರ ಸೋಲ್ಲಿ, ಯಾರಾರ ಗೆಲ್ಲಲಿ ನೀವು
ಮಾತ್ರ ಓಟು ಮಾಡಬ್ಯಾಡಿ ಅಂದನಂತೆ. ಈ ಬಡ್ಡೆತ್ತವು
ಇವ್ರುನ ಮಾತ ಕೇಳಕೊಂಡು ಓಟು ಮಾಡಕ್ಕೇ
ಹೋಗಲಿಲವಂತೆ?" ಎಂದ ಉಗ್ರಿ.

"ಇಟೀಸ್ ಸೇಂ ಟು ಅವರ್ ಕರ್ನಾಟಕ ಕಣೊ
ಉಗ್ರಿ, ನಮ್ಮ ಯಮ್ಮೆಲ್ಲೆಗಳೆಲ್ಲಾ ಜೈಲಿಗೋಗಿ ಬಂದ
ಖೈದಿಗಳ ತರ ಆಗಿಬುಟ್ರು, ಹೋಗತ್ಲಗೆ."

"ಆದ್ಯಾಕ್ಲ ಅಂಗಂತೀ?"

"ಊ ಕಣಕ್ಕ. ಅಪರಾಧ ಮಾಡಿ ಜೈಲಿಗೋಗಿ
ಬಂದೋರು ಓಟು ಮಾಡಂಗಿಲವಂತೆ. ಇದೇ ಅನುಮಾನ
ಇಟಗೊಂಡು ಡಿಸ್‌ಕಸ್ ಮಾಡದಾದ್ರೆ, ಈ ಜೆಡಿಎಸ್
ಶಾಸಕರು ಮಾಡಿರೊ ಕ್ಯಲಸಗಳಿಗ್ಯಲ್ಲ ಸೆಕ್ಷನ್ನಾಕಿ ವಳಿಕಾಕಿದ್ರೆ
ಇವರು ಓಟು ಮಾಡಂಗಿಲ್ಲ, ಅದ್ಕೆ ಏನೊ ಇವುರು
ಅಡವಾನ್ಸಾಗಿ ಓಟು ಮಾಡಿಲ್ಲ, ಒಳ್ಳೆ ನಡವಳಿಕೆ" ಎಂದು
ಪಾಟಿಸ್ಸೆ ನಕ್ಕ.


" !?"

ರ್ಟಿಫಿಕೇಟ್ ನೀಡಿದ್ದೀರಲ್ಲ, ಸಂಬಳ ಎಷ್ಟು ಕೊಟ್ಟಿರಿ?
ಅದಕ್ಕೆ ದಾಖಲೆ ಏನು? ಇವರು ಸಂಬಳ ಪಡೆದಿದ್ದರೆ
ಅದಕ್ಕೆ ಆದಾಯ ತೆರಿಗೆ ನೀಡಿದ್ದಿರಾ? ನೀಡಿದ್ದಕ್ಕೆ ಪುರಾವೆ
ಇದೆಯ ಎಂದು ಕೇಳಿದರೆ ಆ ಕಡೆ ವೈದ್ಯಕೀಯ ಕಾಲೇಜಿಗೆ
ಅನುಮತಿಯೂ ಪೋಯಾ, ಈ ಕಡೆ ಇಂತಹ ವೈದ್ಯರುಗಳ
ಅನುಮತಿಯೂ ಪೋಯಾ ಅಲ್ಲವಾ ಅಂದರೆ..... ಯಾರಿಗೆ
ಗೊತ್ತು ಸುಳ್ಳು ಪ್ರಮಾಣ ಪಡೆದದ್ದೂ ಹಣ ನೀಡಿ,
ಅದನ್ನು ಊರ್ಜಿತಗೊಳಿಸಿಕೊಳ್ಳುವ ಮಾರ್ಗವೂ ಹಣ
ನೀಡಿ ಅಂದರೂ ಅನ್ನಬಹುದು!


ಇದು ಪುಡಿ ವೈದ್ಯರುಗಳ ಮಾತಾಯಿತು. ಇನ್ನೂ
ಪಾಠಮಾಡುವ ಪ್ರಾಧ್ಯಾಪಕರುಗಳಿಗೆ ಏನು ಮಾಡುತ್ತಾರೆ
ಅಂದರೆ ಆಚಾರ್ಯ ಹತ್ತಿರ ಅದಕ್ಕೂ ಮದ್ದು ಇದೆ.
ಅವರಿಗೆ ಇದು ಸಮಸ್ಯೆಯೇ ಅಲ್ಲ. ಹೈಸ್ಕೂಲಿನ
ವಿದ್ಯಾರ್ಥಿಗಳಿಗೆ ಅನುಭವ ಇರಬೇಕು. ಯಾವುದಾದರೂ
ಲೆಕ್ಕವನ್ನು ಸುಲಭವಾಗಿ ಬಿಡಿಸಬಹುದು. ಅಂದರೆ
Q.E.D. ಅಂತ ಬರೀತಾರೆ. ಆಚಾರ್ಯರಿಗೂ ಈ
ಸಮಸ್ಯೆ **quiet easily done!** ಹೇಗೆ ಅಂತೀರಾ....
ಹುಬ್ಬಳ್ಳಿ ಕಿಮ್ಸ್‌ನಿಂದ ಪ್ರಾಧ್ಯಾಪಕರ ವರ್ಗ ಮಾಡಿ ಅಲ್ಲೇ
ಬೋಧಕ ಸಿಬ್ಬಂದಿ ಕೊರತೆ ಇದೆಯಲ್ಲಾ ಒಂದು ವೇಳೆ
ಎಂಸಿಐ ಅನಿರೀಕ್ಷಿತವಾಗಿ ತನಿಖೆಗೆ ಬಂದರೆ ಅದಕ್ಕೆ
ನೀಡಿರುವ ಅನುಮತಿ ರದ್ದಾಗುತ್ತಲ್ಲ ಅಂದರೆ... ಅರೆ
ಇದನ್ನೆಲ್ಲ ಯೋಚಿಸೋಕೆ ಸಮಯ ಎಲ್ಲಿದೇರಿ, ಹೊಸ
ಕಾಲೇಜಗಳ ಪ್ರಾರಂಭ ಮುಖ್ಯ ಅಲ್ವಾ.... ಅಲ್ಲದೆ ತಜ್ಞ
ವೈದ್ಯರು ಹೊಸ ಕಾಲೇಜುಗಳಲ್ಲಿ ಏನು ಸಾಯುವವರೆಗೂ
ಇರುತ್ತಾರಾ... ಸೆಪ್ಟೆಂಬರ್ ಬರಲಿ. ಎಂಸಿಐ
ಬಂದುಹೋಗಲಿ. ಹೊಸ ಕಾಲೇಜುಗಳಿಗೆ ಅನುಮತಿ
ಅಂತ ಒಂದು ಸಿಕ್ಕಿದ ಮೇಲೆ ಹುಬ್ಬಳ್ಳಿ ವೈದ್ಯರು ಹುಬ್ಬಳ್ಳಿಗೇ
ಬರುತ್ತಾರೆ. ಅದು ಹೇಗ್ರಿ ಸಾಧ್ಯ ಅಂದರೆ ವಿಧಾನಸಭೆಯಲ್ಲಿ
ವೈದ್ಯಕೀಯ ಶಿಕ್ಷಣ ಮಂತ್ರಿಯೇ ಹಾಗೇ ಹೇಳಿದ್ದಾರೆ!
ಒಂದು ವೇಳೆ ಯಾವ ವೈದ್ಯಕೀಯ ಕಾಲೇಜಿನಲ್ಲಿ ತಜ್ಞರ
ಹೆಸರು ನೋಂದಾಯಿಸಿದೆಯೋ ಅಲ್ಲಿಯೇ ಅವರು ಕನಿಷ್ಠ
ಮೂರು ವರ್ಷ ಇರಬೇಕು ಅಂದರೆ... ಅದು ತಜ್ಞರ
ತಲೆನೋವು ಅನ್ನಬಹುದಾ ಆಚಾರ್ಯ.....

ಅನನುಭವಿ ನಿರ್ದೇಶಕರು, ಎಂಸಿಐಗೆ ತೋರಿಸ
ಲೆಂದೇ ತಂದಿರುವ ಪ್ರಾಧ್ಯಾಪಕರು, ಯಾವುದೇ
ನೀತಿಯನ್ನು ಅನುಸರಿಸದೆ ತೆಗೆದುಕೊಳ್ಳಲಾಗಿರುವ ಸಿಬ್ಬಂದಿ
ಇಂತಹ ಯಾವುದೇ ನ್ಯೂನತೆ ಇರಬಹುದು. ಹೊಸ
ವೈದ್ಯಕೀಯ ಕಾಲೇಜು ಅಂದರೆ ಹೊಸ ಉಪಕರಣ;
ಹೊಸ ಸಿಬ್ಬಂದಿ... ಹೀಗೆ ಎಲ್ಲಾ ಹೊಸದು... ಅಂದರೆ
ನೋಡ ಸುರಿದಾಳಿ! ಹಾಳು ಕೂಡಿಸಿರುವ ಸ್ಥಿತಿ. ಮರ್ಯಾದೆ
ಕಾಪಾಡಿದರೆ ಆಯಿತಲ್ಲ. ಡಾ. ವಿ.ಎಸ್. ಆಚಾರ್ಯ!

ಒಬ್ಬಂಟಿಯಾಗಿ




ಸುಮಾರು ಎರಡು ಮೂರು ತಿಂಗಳಿಂದ ಒಬ್ಬನೇ ಎಲ್ಲೂ ಡ್ರೈವ್ ಮಾಡಿಕೊಂಡು ಹೋಗಿರಲಿಲ್ಲ. ಕೊಪ್ಪ, ಶೃಂಗೇರಿ, ನರಸಿಂಹರಾಜಪುರದಿಂದ ಬಂದೊಡನೆ ಮೈಸೂರಿಗೆ ಹೋಗುವ ಕಾರ್ಯಕ್ರಮ; ಮಹಾರಾಜಾ ಕಾಲೇಜಿನ ದಲಿತ ವಿದ್ಯಾರ್ಥಿಗಳು ಆಹ್ವಾನಿಸಿದ್ದರು. ಚಳಿಗಾಲ ಹಿಮ್ಮೆಟ್ಟುತ್ತಿರುವ ಈ ದಿನಗಳಲ್ಲಿ ಒಬ್ಬಂಟಿಯಾಗಿ ಸಾಗಬೇಕೆನಿಸಿತು. ಅದಕ್ಕಾಗಿ ಮೈಸೂರಿಗೆ ಹೋಗಲು ಮೂರೂ ಕಾಲು ಗಂಟೆ ಇಟ್ಟುಕೊಂಡು ಹೊರಟೆ. ನೇರ ಹೋದರೆ ಮೈಸೂರಿಗೆ ಎರಡೂವರೆ ಗಂಟೆ ಸಾಕು. ಇಲ್ಲಿ ಪ್ರಯಾಣದ ಗುರಿಯಷ್ಟೇ ಪ್ರಯಾಣದ ಅವಧಿ ಕೂಡ ಮುಖ್ಯ. ಮೈಸೂರಲ್ಲಿ ಎರಡೂವರೆಗೆ ಕಾರ್ಯಕ್ರಮ; ನಾನು ಮಧ್ಯಾಹ್ನ ಊಟ ಮಾಡುವುದು ಸರಿಯಾಗಿ ಒಂದೂವರೆಗೆ. ಅಂದರೆ, ದಾರಿಯಲ್ಲಿ ಉಣ್ಣಲೇಬೇಕಾಗುತ್ತದೆ. ಕ್ಯಾರಿಯರ್‌ನಲ್ಲಿ ಊಟ ತೆಗೆದುಕೊಂಡು ಹೊರಟೆ. ಈ ಮೈಸೂರು-ಬೆಂಗಳೂರು ದಾರಿ ನನ್ನ ಮೆಚ್ಚಿನ ದಾರಿ; ಚನ್ನಪಟ್ಟಣದಿಂದ ಮೈಸೂರು ತಲುಪುವವರೆಗೆ ಕಣ್ತುಂಬಿದ ಹಚ್ಚ ಹಸಿರು ಹೊಲಗದ್ದೆಗಳು.




ಮದ್ದೂರಿನ ಹತ್ತಿರ ಪುಟ್ಟ ತಾವರೆಕೊಳ. ಚನ್ನಪಟ್ಟಣದ ಪಕ್ಕದ ನೈದಿಲೆಯ ಕೆರೆ. ರಾಮನಗರದ ಕಗ್ಗಲ್ಲಿನ ಬೆಟ್ಟ ಮತ್ತು ಇನ್ನೇನು ಬೀಳಬಹುದು ಎಂಬಂತೆ ನಿಂತಿರುವ ಬಂಡೆ. ಸುಮ್ಮನೇ ನಿಂತು ಇನ್ನೇನು ಹಾರಬೇಕು ಎನ್ನುವಂತೆ ಹೂವರಳಿಸಿ ನಿಂತ ಮಾವಿನ ಮರ ನೋಡಿದೆ. ವರ್ಷಕ್ಕೊಮ್ಮೆ ಮಾತ್ರ ಈ ಮಾವಿನ ಹೂವಿನ ವಾಸನೆ. ಮಂಡ್ಯದ ಗದ್ದೆಗಳ ಮಗ್ಗುಲ ಕಾಲುವೆಯ ನೀರಲ್ಲಿ ನಿಂತೆ. ಶ್ರೀರಂಗಪಟ್ಟಣದ ಹೊಸ ಸೇತುವೆಯ ಪಕ್ಕದಲ್ಲಿ, ಪ್ರವಾಸಿಮಂದಿರದ ಹತ್ತಿರ ಕಾವೇರಿಯ ತಂಪಿನಲ್ಲಿ ಕಣ್ಣಿಟ್ಟು ತಂಗಿದೆ. ಒಂದೂವರೆಯ ವೇಳೆಗೆ ಮಂಡ್ಯದ ಆಚೆಯ ದಟ್ಟ ಸಾಲುಮರಗಳ ಕೆಳಗೆ ನಿಂತಿದ್ದೆ. ಊಟ ಮಾಡಿ ಹೊರಟಾಗ ಮುಕ್ಕಾಲು ಗಂಟೆ ಮಾತ್ರ ಇತ್ತು. ಮೈಸೂರಲ್ಲಿ ಹುಡುಗರು "ಎರಡೂವರೆಗಲ್ಲ ಸಾರ್, ಮೂರು ಗಂಟೆಗೆ" ಎಂದು ಅರ್ಧಗಂಟೆ ತಡಮಾಡಿದರು. ಇನ್ನೊಬ್ಬರನ್ನು ನೆಚ್ಚಿದಾಗಲೆಲ್ಲ ವೇಳೆ, ಖುಷಿ, ಕೆಲಸ-ಎಲ್ಲವೂ ಅಸ್ತವ್ಯಸ್ತವಾಗುತ್ತದೆ.

ಮಾತೃಭಾಷೆಯ ಚೆಲುವು



ನಾನು ಮೈಸೂರಲ್ಲಿ ಭಾಗವಹಿಸಬೇಕಾಗಿದ್ದುದು ಮಹಾರಾಜಾ ಕಾಲೇಜಿನ ಹುಡುಗರ ಡಾ. ಅಂಬೇಡ್ಕರ್ ಯುವಕ ಸಂಘದ ಸಭೆಯಲ್ಲಿ. ನನ್ನೊಂದಿಗೆ ಮಾತಾಡಲು ಬೆಂಗಳೂರಿನಿಂದ ಬಂದಿದ್ದವರು ವಿ.ಟಿ. ರಾಜಶೇಖರ್ ಅವರು; ಒಮ್ಮೆ ಇವರು "ಇಂಡಿಯನ್ ಎಕ್ಸ್‌ಪ್ರೆಸ್" ಪತ್ರಿಕೆಯಲ್ಲಿ ವರದಿಗಾರರಾಗಿದ್ದರು. ಈಗ 'ದಲಿತ್ ವಾಯ್ಸ್' ಎಂಬ ಇಂಗ್ಲಿಷ್ ಪತ್ರಿಕೆಯ ಸಂಪಾದಕ. ಈ ಸಂಬಂಧದಲ್ಲಿ ಬಹಳ ದೇಶ ಸುತ್ತಿ ನೀರು ಕುಡಿದ ವ್ಯಕ್ತಿ ರಾಜಶೇಖರ್ (ಒಮ್ಮೆ ಇವರು 'ರಾಜಶೇಖರ ಶೆಟ್ಟಿ' ಆಗಿದ್ದರು; ಇವರು ಬಂಟ್ ಶೆಟ್ಟಿ). ದಲಿತ ಹುಡುಗರನ್ನು ಕಂಡೊಡನೆ ಡಾ. ಅಂಬೇಡ್ಕರ್ ಅವರನ್ನು ಹೊಗಳಿ ಗಾಂಧೀಜಿಯವರನ್ನು ಸ್ವಲ್ಪ ಟೀಕಿಸುವ ಆಶೆ ಇವರಿಗೆ. ಆದರೆ ತೀರಾ ಬಲಿಯದ ಹುಡುಗರು ಮುಕ್ತ ಮನಸ್ಸಿನವರಾಗಿರುತ್ತಾರೆ. ಇದು ರಾಜಶೇಖರ್ ಅವರಿಗೆ ಗೊತ್ತಿರಲಿಕ್ಕಿಲ್ಲ. ಇವರು ಗಾಂಧೀಜಿಯನ್ನು ಟೀಕಿಸಿದಾಗ ಹುಡುಗರು ಸಂತೋಷದಿಂದ ಕುಣಿಯಲಿಲ್ಲ. ಇಂಗ್ಲಿಷ್ ಪ್ರಿಯರಾದ ಶೆಟ್ಟಿ 'ಮಾತೃಭಾಷೆಯ ಬಗ್ಗೆ ತಪ್ಪು ಭ್ರಮೆ ಇಟ್ಟುಕೊಳ್ಳಬೇಡಿ' ಎಂದು ಕನ್ನಡ ಸಾಹಿತ್ಯದ ಬಗ್ಗೆ ಬಸವಲಿಂಗಪ್ಪ 'ಬೂಸಾ' ಎಂದದ್ದನ್ನು ನೆನಪಿಸಿ ಚಪ್ಪಾಳೆ ಪಡೆಯಲು ಯತ್ನಿಸಿದರು. ಪ್ರೇಕ್ಷಕರು ಸುಮ್ಮನಿದ್ದರು.

ನಾನು ಹೇಳಿದೆ, "ಇಂಗ್ಲಿಷ್ ಭಾಷೆಯನ್ನು ಮೆಚ್ಚಲು ಅನೇಕ ಕಾರಣಗಳಿವೆ. ಅಲ್ಲಿ ನಮ್ಮಲ್ಲಿಗಿಂತ ಹೆಚ್ಚಾಗಿ ವೈಚಾರಿಕ ವಿಷಯಗಳಿವೆ; ವಾಲ್ಟೇರ್, ಥಾಮಸ್ ಪೇನ್, ಮಾರ್ಟಿನ್ ಲ್ಯೂಥರ್ ಮುಂತಾದ ಖ್ಯಾತ ವಿಚಾರವಾದಿ ಬಂಡಾಯಕಾರರೆಲ್ಲ ಇಂಗ್ಲಿಷ್ ಮೂಲಕ ನಮ್ಮನ್ನು ತಲುಪಿದ್ದಾರೆ. ಆದರೆ ಮಾತೃಭಾಷೆ ಅಷ್ಟೇ ಮುಖ್ಯ. ತಾಯಿಯಂಥ ಕಾವ್ಯ ಗೆಳತಿಯಂಥ ಕಾದಂಬರಿ, ಸಹೋದ್ಯೋಗಿಯಂಥ ನಾಟಕ ಮಾತೃಭಾಷೆಯಲ್ಲಿ ಬಂದಷ್ಟು ಚೆನ್ನಾಗಿ ಬೇರೆ ಭಾಷೆಯಲ್ಲಿ ಬರುವುದಿಲ್ಲ. ಬರೀ ವಿಚಾರಸಾಹಿತ್ಯ ಭಾಷೆಯನ್ನು ಪೂರ್ತಿ ಶ್ರೀಮಂತಗೊಳಿಸುವುದಿಲ್ಲ. ಆದ್ದರಿಂದ ಕನ್ನಡವನ್ನು ಟೀಕಿಸಬಾರದು, ನಿರ್ಲಕ್ಷಿಸಬಾರದು" ಅಂದೆ.



ಗ್ರಹಿಕೆ ಮತ್ತು ಆರಾಧನೆ

ಇದೇ ಸಭೆಯಲ್ಲಿ ಇನ್ನೊಂದು ಮಾತು ಹೇಳಿದೆ, ಗಾಂಧೀಜಿಯನ್ನು ಮಹಾತ್ಮ ಸ್ಥಾನಕ್ಕೆ ಏರಿಸಿ ಪೂಜಿಸತೊಡಗಿದವರೂ, ಡಾ. ಬಾಬಾಸಾಹೇಬ್ ಅಂಬೇಡ್ಕರರನ್ನೂ ಪೂಜಿಸಿ ದೇವರನ್ನಾಗಿಸುವವರೂ ಆತ್ಮವಂಚನೆಯಲ್ಲಿ ಮುಳುಗಿರುತ್ತಾರೆ. ಅಂಬೇಡ್ಕರ್ ಅವರು ನಮ್ಮ ನಿಮ್ಮೆಲ್ಲರಂತಹ ಮನುಷ್ಯ, ನಾವೆಲ್ಲ ಆತನಂತೆ ಶಿಸ್ತು, ಸಂಯಮ, ನೋವು, ಆತ್ಮವಿಮರ್ಶೆಗೆ ಒಳಗಾದರೆ ನಮಗೆ ಕೂಡ ಸಾಧ್ಯವಾಗುವ ಅದ್ಭುತ ಚಾರಿತ್ರ್ಯದ ಮನುಷ್ಯ ಅಂಬೇಡ್ಕರ್. ನನ್ನ ಪಾಲಿಗೆ ಪ್ರತಿಭೆ ದೈವದತ್ತವಲ್ಲ; ಪೂರ್ವಜನ್ಮದ ಸಂಸ್ಕಾರದ ಫಲವಲ್ಲ, ನಾವು ಪ್ರಯತ್ನ ಪೂರ್ವಕವಾಗಿ ರೂಢಿಸಿಕೊಳ್ಳಬಲ್ಲ ಶಕ್ತಿ ಅದು. ಏಕಾಗ್ರತೆ, ನೋವು, ಕುತೂಹಲದ ಫಲ ಪ್ರತಿಭೆ. ಆದ್ದರಿಂದಲೇ ದೊಡ್ಡ ವ್ಯಕ್ತಿಯನ್ನು ಪೂಜಿಸತೊಡಗಿದೊಡನೆ ಆತನಂತೆ ನಾವಾಗಲು ಸಾಧ್ಯವಿಲ್ಲ ಎಂದು ತೀರ್ಮಾನಿಸಿಬಿಡುತ್ತೇವೆ. ಇದು ತಪ್ಪು. ಥೇಟ್ ಆತನಂತೆ ಆಗುವುದು ಅನಗತ್ಯ; ಪ್ರತಿಭೆಯನ್ನು ರೂಪಿಸಿಕೊಳ್ಳುವುದು ಅಗತ್ಯ. ಪೂಜೆ ಇದಕ್ಕೆ ಅಡ್ಡಿಯಾಗುತ್ತದೆ.

ನಿರಂತರ ಹೋರಾಟವೇ ಮನುಷ್ಯನ ಬದುಕಿನ ಉದ್ದೇಶವಲ್ಲ; ಹೋರಾಟ ಸಾಧನ ಮಾತ್ರ. ನಿರಂತರವಾಗಿ ಹೋರಾಟ, ಸಿಟ್ಟಿನಲ್ಲಿರುವ ಮನುಷ್ಯ ನಿರಂತರ ಮಾರ್ದವತೆಯ ಅವಶ್ಯಕತೆಯನ್ನು ಕಡೆಗಣಿಸುತ್ತಾನೆ. ಆದ್ದರಿಂದ ಸಹಜ ಬದುಕಿನ ಪ್ರತಿಯೊಬ್ಬ ಹೊಣೆಯರಿತ ವ್ಯಕ್ತಿಯಲ್ಲೂ ಡಾ. ಅಂಬೇಡ್ಕರ್ ತರಹದವರು ಒಂದು ಸೂಚನೆಯನ್ನು ಬಿಟ್ಟು ತೆರಳುತ್ತಾರೆ. ಒಬ್ಬ ಮನುಷ್ಯ ನಿಷ್ಠುರ ಛಲದ ಜೊತೆಗೆ ಸೂಕ್ಷ್ಮಜ್ಞತೆ, ಆರ್ದ್ರತೆಯನ್ನು ಬೆಸೆದುಕೊಳ್ಳುವುದು ಅನಿವಾರ್ಯ ಎಂಬುದೇ ಈ ಸೂಚನೆ.

ರಾಜಕೀಯದಲ್ಲಿ ಗೌಡ್ರು ಎಷ್ಟನೆಯ ಅದ್ಭುತ?

ಕಣ್ಣಾಮುಚ್ಚಾಲೆ

ಡಿ.ಎಲ್. ಚಂದ್ರಿಕಾ, ಹರಪನಹಳ್ಳಿ
ಅವಕಾಶವಾದಿ ಎಂ.ಪಿ. ಪ್ರಕಾಶರ ಕೈಯಲ್ಲಿ ಏನಿದೆ?
◆ ಶಂಕರ್ ಬಿದರಿಯ ಬೂಟು.

ಕುತುಬುದ್ದೀನ್ ಎಸ್. ಶಿರಾವತ್, ಗೋಕಾಕ್
ಚನ್ನಮ್ಮ ದೇವೇಗೌಡರು ಉಪರಾಷ್ಟ್ರಪತಿಯಾದರೆ?
◆ ಸೊಸೆ ಕವಿತಾ ಉಪರಾಷ್ಟ್ರಪತಿ ಭವನದ ಖರೀದಿ ಅಗ್ರಿಮೆಂಟ್ ಮಾಡಿಸಿಕೊಳ್ಳುತ್ತಾಳೆ.

ಅಬ್ದುಲ್ ರಜಾಕ್, ದೇವದುರ್ಗ
ಮುತ್ತಿಟ್ರೆ ತಬ್‌ಕೊ ಅಂತಾಳಲ್ಲ?
◆ ಅದು ಹೇಗೆ ತಬ್ಬಿಕೊಳ್ಳದೆ ಮುತ್ತಿಟ್ರಿ ಅಬ್ದುಲ್?

ಗಾನಾಸುಮಾ, ಪಟ್ಟಸೋಮನಹಳ್ಳಿ
ನನ್ನ ಹುಡುಗಿ 'ನೀವ್ ನನ್ ಗೆಲ್ರಿರಾ' ಅಂತಾಳೆ ಏನು ಹೇಳಲಿ?
◆ ಇಲ್ಲಾ. ನಾನು ನಿನಗೆ ಸೋತಿದ್ದೀನಿ ಅನ್ನು. ಆಗ ಗೆಲುವು ತನ್ನ ತಾನೇ ಬರುತ್ತೆ.

ಡಿ.ಎಲ್. ಸುರೇಶ್, ಹರಪನಹಳ್ಳಿ
ನಕ್ಸಲೈಟರ ಮನೆಯಲ್ಲಿ ಕುಮಾರಣ್ಣನ ವಾಸ್ತವ್ಯ ಯಾಕಿಲ್ಲ?
◆ ಬಿದರಿ ಬಂದೂಕಿನ ಭಯ ಕಣಪ್ಪಾ.

ಡಿ.ಎಲ್. ಶ್ವೇತಾ, ಹರಪನಹಳ್ಳಿ
ನಕ್ಸಲೈಟರಿಗೂ ಭಯೋತ್ಪಾದಕರಿಗೂ ಇರುವ ವ್ಯತ್ಯಾಸ?
◆ ಇವರು ಭಯ ತೋರೆದಿರುವವರು. ಅವರು ಭಯ ಹುಟ್ಟಿಸುವವರು.

ಕವಿತಾ ಮಧುಸೂದನ್, ದಾವಣಗೆರೆ
ಶ್ರೀರಾಮನಿಗೆ 'ಮರ್ಯಾದಾ ಪುರುಷೋತ್ತಮ'ನೆಂಬ ಬಿರುದಾದರೆ ಆತನ ಭಕ್ತರಾದ ಚೆಡ್ಡಿಗಳಿಗೆ ಯಾವ ಬಿರುದು?
◆ ಮರ್ಯಾದೆ ಇಲ್ಲದ ಶಿಷ್ಯೋತ್ತಮ.

ಎಸ್. ಶಶಿಧರ, ದಾವಣಗೆರೆ
ಕುಮಾರಸ್ವಾಮಿ ತಂದೆಗೆ ತಕ್ಕ ಮಗನೋ ತಂದೆಯನ್ನು ಮೀರಿದ ಮಗನೋ?
◆ ಸ್ವಲ್ಪ ತಡೀರಿ. ನಿಖಿಲ್‌ಗೌಡ ಎಲ್ಲರನ್ನೂ ಮೀರಿಸಲಿದ್ದಾನೆ.

ಮಂಚಾಲಿ ಗುರುರಾಜಚಾರು, ಬಳ್ಳಾರಿ
ರಾಜಕೀಯ ಪ್ರವೇಶಿಸಲಾಗದ ಜಾಗ ಯಾವುದು?
◆ ಭಗವಂತನಿಗೂ ಅಂತಹ ಜಾಗ ಗೊತ್ತಿಲ್ಲ.

ಅಕ್ಕಿ ಬಸವೇಶ, ಉಪನಾಯಕನಹಳ್ಳಿ
ಮಕ್ಕಳು ಅತ್ತರೆ ಮುದ್ದು ಮಾಡ್ತೀವಿ, ಹುಡುಗೀರು ನಕ್ಕರೆ?
◆ ಕದ್ದು ನೋಡ್ತೀವಿ!

ಡಿ.ಎಲ್. ನಾಗರಾಜ್, ಹರಪನಹಳ್ಳಿ
ಹುಡುಗಾಟದ ಹುಡುಗಿ, ತುಂಟಾಟದ ತುಂಟ ಸೇರಿದರೆ?
◆ ರೋಮಾಂಚಕಾರಿ *tie*ನಲ್ಲಿ ಕೊನೆಯಾಗುತ್ತೆ.

ಎಂ. ನಿಸರ್ಗ, ದಾವಣಗೆರೆ
ಕಾಂಗ್ರೆಸಿಗರ ಮನೆ ದೋಸೆಯಲ್ಲಿ ತೂತುಗಳು ಇರೋಲ್ವಂತೆ?
◆ ಅವರೆಲ್ಲ ಇಟಾಲಿಯನ್ ಪಿಜ್ಜಾ ತಿನ್ನೋದಕ್ಕೆ ಶುರು ಮಾಡಿದ್ಮೇಲೆ ಹೀಗೆ ಹೇಳ್ತಿದಾರೆ.

ಪರಸಿರಿ, ಮತ್ತೀಗಟ್ಟೆ
ಸರಳ ಜೀವನ ನಡೆಸುವವರಿಗೆ ನಿಮ್ಮ ಕಿವಿ ಮಾತೇನು?
◆ ಕರೆಂಟ್ ಬಿಲ್ ಕಟ್ಟಿದ್ದೀರಾ. ಬಸ್ ಟಿಕೆಟ್ ಕೊಂಡಿದ್ದೀರಾ ಅಂತ ಪ್ರಶ್ನಿಸ್ತೀನಿ.

ಬಹುಮಾನಿತ ಪ್ರಶ್ನೆ

ಕಾಳೀಹುಂಡಿ ಶಿವಕುಮಾರ್, ಮೈಸೂರು
ರಾಜಕೀಯದಲ್ಲಿ ಗೌಡ್ರು ಎಷ್ಟನೆಯ ಅದ್ಭುತ?
◆ ಸದ್ಯಕ್ಕೆ ಯಡ್ಡಿಪಾಲಿಗೆ 'ಅದು-ಭೂತ' ಅಷ್ಟೇ.



ಕೆ. ಶ್ರೀನಿವಾಸ್, ಮಂಡ್ಯ
ಹೆಣ್ಣಿನ ಪಿಸು ಮಾತು ಯಾವಾಗಲೂ ಸವಿಯಾಗಿರುವುದೇಕೆ?
◆ ಕಚ್ಚಿಸಿಕೊಂದು ಗೊತ್ತಿಲ್ಲದವರ ಅಭಿಪ್ರಾಯ ಇದು.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಪ್ರಶ್ನೆ ನಂ: 20

ಬಸವಣ್ಣ ಇದ್ದಿದ್ದರೆ ಲಿಂಗಾಯತರಿಗೆ ಏನೆನ್ನುತ್ತಿದ್ದರು?

ಪ್ರಶ್ನೆ ನಂ. 18ರ ನಮ್ಮ ಪ್ರಶ್ನೆ: ಪ್ರಪಂಚದ ಎಂಟನೇ ಅದ್ಭುತ ಯಾವುದು?

ನಿಮ್ಮ ಉತ್ತರ: ಯಡ್ಡಿ ಮುಖ್ಯಮಂತ್ರಿ ಆಗೋದು.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಕಿರುಗುಂದ ರಫೀಕ್, ಮೂಡಿಗೆರೆ

ಅಸಮಾನತೆ ಇರುವವರೆಗೂ 'ನಕ್ಸಲಿಸಂ' ಇರುತ್ತದೆ

ಹೊಗಳಿಕೆ / ತೆಗಳಿಕೆ

ಮಲೆನಾಡ ಮಡಿಲಿನ ಕುಗ್ರಾಮ ಅಮ್ಮಡ್ಲುವಿನಲ್ಲಿ ನಕ್ಸಲೈಟರನ್ನು ಬೇಟೆಯಾಡುವ ನೆಪದಲ್ಲಿ ಕರ್ನಾಟಕದ ಪೊಲೀಸರು ನಕಲಿ ಎನ್‌ಕೌಂಟರ್‌ನಲ್ಲಿ ನಾಲ್ವರು ಅಮಾಯಕರನ್ನು ಕೊಲೆ ಮಾಡಿರುವುದು ಅಕ್ಷಮ್ಯ ಅಪರಾಧ. "ನಾವು ಹಿಂಸೆಯನ್ನು ಬೆಂಬಲಿಸುವುದಿಲ್ಲ" ಎಂದು ಪೈಪೋಟಿಗಿಳಿದಂತೆ ಹೇಳಿಕೆಗಳನ್ನು ನೀಡುತ್ತಿರುವ ಬುದ್ಧಿಜೀವಿಗಳಿಗೆ, ಪೊಲೀಸರ ಈ ಹಿಂಸೆ ಕಾಣಿಸುತ್ತಿಲ್ಲವೇ? ಈ ನಕಲಿ ಎನ್‌ಕೌಂಟರ್ ಬಗ್ಗೆ ಕೂಡಲೇ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದಿಂದ ತನಿಖೆ ಕೈಗೊಂಡು ತಪ್ಪಿತಸ್ಥರನ್ನು ಶಿಕ್ಷಿಸಬೇಕು ಇಲ್ಲದಿದ್ದರೆ ಸರ್ಕಾರದ ವಿರುದ್ಧ ಸೊಲ್ಲೆತ್ತುವ ಯಾರನ್ನಾದರೂ ನಕ್ಸಲೈಟರು ಮತ್ತು ಅವರ ಬೆಂಬಲಿಗರೆಂದು ಹಣೆಪಟ್ಟಿ ಹಚ್ಚಿ ಪೊಲೀಸರ ಮೂಲಕ ಅವರನ್ನು ಮುಗಿಸುವ ಕೆಟ್ಟ ಚಟ ಇನ್ನು ಮುಂದೆ ಕರ್ನಾಟಕದಲ್ಲಿಯೂ ಮುಂದುವರಿಯಲಿದೆ.



ಈ ನಮ್ಮ ದೇಶದಲ್ಲಿ ಲಕ್ಷ ಕೋಟಿಗಳ ಒಡೆಯರಾದ ಅಂಬಾನಿ ಸಹೋದರರು ಇರುವಂತೆಯೇ ಹೆಂಡತಿಯ ಶವಸಂಸ್ಕಾರಕ್ಕಾಗಿ ಮಗನನ್ನೇ ಮಾರಿ ಪೊಲೀಸರಿಂದ ಬಂಧನಕ್ಕೊಳಗಾದ (ಈ ದುರ್ಘಟನೆ ಇತೀಚೆಗೆ ಒರಿಸ್ಸಾದಲ್ಲಿ ನಡೆದಿದೆ) ಭಿಕ್ಷಾಧಿಪತಿಗಳೂ ಇದ್ದಾರೆ. ಇಂತಹ ಅಸಮಾನತೆಯೇ ನಕ್ಸಲಿಸಂ ಬಲವಾಗಿ ಬೇರೂರಿ ಹೆಮ್ಮರವಾಗಿ ಬೆಳೆಯಲು ಸಹಾಯಕವಾಗಿದೆ. ನಮ್ಮನ್ನಾಳುತ್ತಿರುವ ಸರ್ಕಾರಗಳು ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳೆಂಬ ಮರೀಚಿಕೆಗಳ ಬೆನ್ನುಹತ್ತಿ ಬಡವರ ಬದುಕನ್ನು ಮೂರಾಬಟ್ಟೆಯನ್ನಾಗಿಸಿವೆ. ಪರೋಕ್ಷವಾಗಿ ನಕ್ಸಲಿಸಂ ಬೇರೂರಲು ಮತ್ತು ಬೆಳೆಯಲು ನಮ್ಮ ಸರ್ಕಾರಗಳೇ ಕಾರಣ. ಬಂದೂಕಿನ ನೆರವಿನಿಂದ ನಕ್ಸಲೈಟರನ್ನು ಮತ್ತು ಅವರ ಬೆಂಬಲಿಗರನ್ನು ಮುಗಿಸಬಹುದು. ಆದರೆ ಅಸಮಾನತೆ ಇರುವವರೆಗೂ 'ನಕ್ಸಲಿಸಂ' ಜೀವಂತವಾಗಿರುತ್ತದೆ ಎಂಬ ಸತ್ಯವನ್ನು ನಮ್ಮನ್ನಾಳುತ್ತಿರುವ ಸರ್ಕಾರಗಳು ಮೊದಲು ತಿಳಿಯಬೇಕು.

ಆರ್ಥಿಕ ಅಸಮಾನತೆಯ ನಿವಾರಣೆಗೆ ನಮ್ಮ ಸರ್ಕಾರಗಳು ಪ್ರಾಮಾಣಿಕವಾದ ಪ್ರಯತ್ನಗಳನ್ನು ಮಾಡಿದರೆ ನಕ್ಸಲಿಸಂ ತಾನೇತಾನಾಗಿ ನಶಿಸುತ್ತದೆ. ಜನಸಾಮಾನ್ಯರಿಗೆ ತಿಳಿದಿರುವ ಈ ಸತ್ಯ, ನಮ್ಮನ್ನಾಳುತ್ತಿರುವ ಪ್ರಭೃತಿಗಳಿಗೆ ತಿಳಿಯದಿರುವುದು ನಮ್ಮ ದುರಂತ.

-ಎಸ್. ಎಸ್. ವೆಂಕಟೇಶ, ಬೆಂಗಳೂರು

ನಾಡಿನಲ್ಲಿ ಕೋಮುಸೌಹಾರ್ದ ಬಯಸಿ ಹಗಲಿರುಳೂ ಪ್ರಾಮಾಣಿಕತೆಯಿಂದ ದುಡಿದವರ ಮನದಾಳದ ಮಾತುಗಳು ಡಾ. ಹೆಚ್.ವಿ. ವಾಸುರವರ (ಜುಲೈ 11 ರ ಸಂಚಿಕೆ) ಬಹಿರಂಗ ಪತ್ರ. ಚಾರ್ವಾಕ ಶಿವಸುಂದರ್‌ರವರು, 'ಕಂಡಹಾಗೆ' ನಲ್ಲಿ ಗೌರಿಯವರು 'ಕೋಮುಸೌಹಾರ್ದ ವೇದಿಕೆ' ಮೇಲಿನ ಆರೋಪಗಳ ಬಗ್ಗೆ ಪ್ರಸ್ತಾಪಿಸಿದ್ದು ಓದಿದಾಗ ರಾಜೇಂದ್ರ ಚನ್ನಿ ಮತ್ತು ಜಿ.ಕೆ. ಗೋವಿಂದರಾಯರು ನಿಜವಾಗ್ಲು ಅವಕಾಶವಾದಿಗಳು ಎನಿಸುತ್ತದೆ. ಮೊದಲು ವೇದಿಕೆಯ ಕಾರ್ಯಶೀಲತೆ ಬಗ್ಗೆ ಹೊಗಳಿ ನಂತರ ಚೆಡ್ಡಿಗಳಿಗೆ, ಅಧಿಕಾರಶಾಹಿಗೆ ಹೆದರಿ ಸಂಸಾರದ ನೆಪವೊಡ್ಡಿ ಎರಡು ವರ್ಷ ದೂರವಾಗಿ ನಂತರ ವೇದಿಕೆಯ ಬಗ್ಗೆ ಆರೋಪ ಮಾಡುವ ಪರಿ ಗಾಂಧೀಜಿಯವರ ಸತ್ಯಕ್ಕೆ ಮತ್ತು ಅಹಿಂಸೆಯ ವಿರುದ್ಧದ ನಡವಳಿಕೆ.


ಒಂದೇ ವೇದಿಕೆಯಡಿ ನೂರಾರು ಸಂಘಟನೆಗಳು, ಬರಹಗಾರರು, ಚಿಂತಕರು, ಪ್ರಗತಿಪರ ಹೋರಾಟಗಾರರು ಇರುವಲ್ಲಿ ಭಿನ್ನ ನಿಲುವುಗಳು ಇದ್ದರೂ ಎಲ್ಲರ ಆಶಯ ಒಂದೇ- ಅದು ಕೋಮುವಾದದ ವಿರುದ್ಧ ಹೋರಾಟ. ಹಿರಿಯರಾದ ಇವರು ವೇದಿಕೆಯಲ್ಲಿ ಚರ್ಚಿಸದೆ ಆರೋಪ ಮಾಡುವುದು ಎಷ್ಟು ಸರಿ? ದಯವಿಟ್ಟು ನಾಡಿನಲ್ಲಿ ಕೋಮು ಸೌಹಾರ್ದ ಬಯಸುವ ಮನಸ್ಸುಗಳಿಗೆ ನೋಯಿಸದಿರಿ.

-ಡಿ.ಎಲ್.ಮಂಜು, ಕೇರಳ

ನಗ್ನತೆ ಸಂದರ್ಭಕ್ಕನುಗುಣವಾಗಿ ಅರ್ಥ ಪಡೆದುಕೊಳ್ಳುತ್ತದೆ. ಒಂದರ್ಥದಲ್ಲಿ ಎಲ್ಲ ಮೌಲ್ಯಗಳು ನಶಿಸುವುವರ ಸಂಕೇತ. ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಪ್ರಭುತ್ವ ಮತ್ತು ಇತರೆ ಶಕ್ತಿಗಳು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಲು ವಿಫಲವಾದಾಗ ಮಹಿಳೆ ನಗ್ನಳಾಗುತ್ತಾಳೆ ಎಂದರೆ ವ್ಯವಸ್ಥೆಯ ಅವನತಿಯನ್ನು ಸೂಚಿಸುವ ಸಂಕೇತ. ವಸ್ತುನಿಷ್ಠತೆ ಮತ್ತು ಸತ್ಯಶೋಧನೆ ಈ ಮೂಲಕ ಪರಿವರ್ತನೆ ಮೀಡಿಯಾದ ಧ್ಯೇಯವಾಗಿರಬೇಕು. ಆದರೆ ಅವು ತಮ್ಮ ಜವಾಬ್ದಾರಿಯನ್ನು ಮರೆತು ಕಮರ್ಷಿಯಲ್ ಆಗಿ ವರ್ತಿಸುತ್ತದೆ ಎಂದರೆ ನಾಚಿಕೆಗೇಡಿನ ವಿಷಯ.

'ಲಂಕೇಶ್' ಪ್ರಜ್ಞಾವಂತ ಸಮುದಾಯಕ್ಕೆ ಒಂದು ಕೈಗನ್ನಡಿ. ಅನ್ಯಾಯಗಳ ವಿರುದ್ಧದ ಪ್ರತಿಭಟನೆಗೆ ಕ್ರಿಯಾಶೀಲರಾಗಿರುವವರಿಗೆ ಒಂದು ಆಶಾಕಿರಣ.

- ವಿದ್ಯಾಧರ ರೈ ಎಂ.ಆರ್., ಮಡಿಕೇರಿ



ಡಾ. ಬಂಜಗೆರೆ ಜಯಪ್ರಕಾಶರವರು ಬರೆದ 'ಅನುದೇವಾ' ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ವಿಧಾನಸಭೆಯಲ್ಲಿ ಚರ್ಚೆಯಾಗಿದೆ. ಇದು ತೀ ಆಘಾತಕಾರಿ ಬೆಳವಣಿಗೆ. ಇದರ ಹಿನ್ನೆಲೆಯಲ್ಲಿ ಪತ್ರ ಬರೆಯುತ್ತಿದ್ದೇನೆ.

"...ಇದಕ್ಕೆ ಪ್ರಾಜ್ಞ ವಿದ್ವಾಂಸರು ತಮ್ಮ ವಿದ್ವ ನೆರವು ನೀಡಿ ಸಂಶೋಧನೆಯ ಮುಂದುವರಿಕೆ ಸಹಕರಿಸಬೇಕು ಎಂಬುದು ನನ್ನ ನಮ್ರ ವಿನ ಯಾಗಿದೆ"- ಅನುದೇವಾ ಹೊರಗಣವನು ಪುಸ್ತಕ ಕೊನೆಯ ಸಾಲುಗಳಿವು. ಬಸವಣ್ಣ ತಳಸಮುದಾಯ ಅಸ್ಪೃಶ್ಯ ಜಾತಿಗೆ ಸೇರಿರಬಹುದು ಎಂಬ ತಮ್ಮ ವಾದ ಆರೋಗ್ಯಕರವಾಗಿ, ಸಮರ್ಥವಾಗಿ ಪ್ರತಿಪಾದಿಸಿದ್ದ ಮೇಲಿನ ಸಾಲುಗಳು ಅವರ ವಿನಯವನ್ನು ತೋರಿ ತ್ತವೆ. ತನ್ನದೇ ಅಂತಿಮ ತೀರ್ಪು ಎನ್ನುವ ಹಟವಾಗ ಅಹಂಕಾರವಾಗಲಿ ಅವರಲ್ಲಿಲ್ಲ. ತಳಸಮುದಾಯ ಅಗಾಧವಾದ ಮೌಖಿಕ ಸಂಸ್ಕೃತಿಯ ಒಳಹೊಕ್ಕು ಅ ಹೆಪ್ಪುಗಟ್ಟಿಕೊಂಡಿರಬಹುದಾದ ಸತ್ಯದ ತುಣುಕುಗಳ ತಮ್ಮ ತರ್ಕದ ಶಾಖದಿಂದ ಕರಗಿಸುವ ಪ್ರಯ ಮಾಡಿದ್ದಾರೆ.

ಕೃತಿಯ ಹದಿನಾರನೇ ಪುಟದಿಂದ ತಮ್ಮ ವಿಶ್ಲೇಷ ಯನ್ನು ಪ್ರಾರಂಭಿಸುವ ಇವರು ಡಾ. ಚಿದಾನಂದಮೂರ್ತಿ ಹಾಗೂ ಡಾ. ಎಂ. ಕಲಬುರ್ಗಿಯವರ ಸಂಶೋಧನೆಗಳ ಬೆಳಕಿನಲ್ಲಿ ಸಾಗುತ್ತಾರೆ. ಪ್ರತಿ ಪುಟದಲ್ಲೂ ಪ್ರಶ್ನೆಗಳನ್ನು ಹಾಕು ಮತ್ತು ಹಾಕಿಕೊಳ್ಳುತ್ತ ತಳಸಮುದಾಯಗಳ ಲಿ ಹಾಗೂ ಮೌಖಿಕ ಸಂಸ್ಕೃತಿಯ ಮೂಲೆಮೂಲೆಗ ಕುತೂಹಲದಿಂದ ಹೊಸ ಹೊಳಹುಗಳಿಗ ಹುಡುಕಾಟ ನಡೆಸುತ್ತಾರೆ. ಆದರೆ ಆ ಹುಡುಕಾ ಇನ್ನೂ ಪೂರ್ಣಗೊಂಡಿಲ್ಲ ಎಂಬುದನ್ನು ಒಪ್ಪಿಕೊಳ್ಳ ಸಮಗ್ರವಾದ ಸಂಶೋಧನೆಯ ಅಗತ್ಯತೆಯನ್ನು ಹೇಳುತ್ತಾರೆ. ತೆರೆದ ಮನಸ್ಸಿನಿಂದ ಬರೆದಿರುವ ಪುಸ್ತಕದಲ್ಲಿ ಯಾರನ್ನೂ ಕೀಳಾಗಿ ಅವಹೇಳನಕಾರಿಯ ಕಂಡಿಲ್ಲ. ಎಲ್ಲ ಮನುಷ್ಯರೂ ಒಂದೇ ಎಂಬ ತತ್ವ ಬಗ್ಗೆ ನಂಬಿಕೆ ಇದ್ದರೆ ಬಸವಣ್ಣ ತಳಸಮುದಾಯದಿಂದ ಬಂದಿರುವುದು ನಿಜವೇ ಇದ್ದರೂ ಅದರಿಂದ ಮನಸ್ಸಿಗೆ ನೋವಾಗುವ ಕಾರಣವಾದರೂ ಏನು?

ಸತ್ಯದ ಬೆಳಕಿನತ್ತ ಹೆಜ್ಜೆ ಇಟ್ಟಿರುವ ಈ ಕೃತಿಯನ್ನು ಮುಟ್ಟುಗೋಲು ಹಾಕಿಕೊಂಡರೆ ಎಲ್ಲ ಸೃಜನಶೀಲ ಹುಡುಕಾಟಗಳನ್ನು ಹತ್ತಿಕ್ಕಿದಂತಾಗುತ್ತದೆ.

-ಡಾ. ಸಿ. ರವೀಂದ್ರನಾ

ಉಳ್ಳವರು ಯುದ್ಧ ಮಾಡಿದಾಗ ಸಾಯುವವರು ಬಡವರು -ಸಾರ್ತ್ರ್

ಎಲ್ಲರು ಬ್ಯೂಸಿಯೋ ಬ್ಯೂಸಿ!

ಹಿಂದೆಲ್ಲ ನಾಯಕ ನಟನ ಕಾಲ್‌ಶೀಟ್ ಸಿಗಲಿಲ್ಲವೆಂದು ಚಿತ್ರಗಳು ಮುಂದೂಡಲ್ಪಡುತ್ತಿದ್ದವು. ಆದರೆ ಈಗ, ಲೈಟ್ ಬ್ಯಾಯ್ಸ್‌ಗಳಿಲ್ಲವೆಂದೂ, ಊಟ ಬಡಿಸುವ ಕ್ಯಾಂಟೀನ್ ಹುಡುಗರಿಲ್ಲವೆಂದೂ ಚಿತ್ರಗಳು ಮುಂದೂಡಲ್ಪಡುತ್ತಿವೆ ಎಂದರೆ ನಂಬುತ್ತೀರಾ? ಆದರೆ ಇದು ನಿಜ.


ನಲವತ್ತಕ್ಕೂ ಹೆಚ್ಚು ಹೊಸ ನಟರ ಆಗಮನದಿಂದ, ಐವತ್ತಕ್ಕೂ ಹೆಚ್ಚು ಲ್ಯಾಂಡ್ ಮಾಫಿಯಾದವರು ನಿರ್ಮಾಪಕರಾಗಿ ಎಂಟ್ರಿ ಪಡೆದಿರುವುದರಿಂದ, ಸುಮಾರು ಮೂವತ್ತಕ್ಕೂ ಹೆಚ್ಚು ಸಹಾಯಕ ನಿರ್ದೇಶಕರು ಈಗ ನಿರ್ದೇಶಕರಾಗಿ ಬಡ್ತಿ ಹೊಂದಿರುವುದರಿಂದ ಕನ್ನಡ ಚಿತ್ರರಂಗದಲ್ಲಿ ಇವತ್ತು ಎಂದೂ ಕಂಡರಿಯದ ಸಡಗರ. ಎಷ್ಟರ ಮಟ್ಟಿಗೆ ಅಂದರೆ, ಇವತ್ತು ಚಿತ್ರೀಕರಣದಲ್ಲಿರುವ ಅಥವಾ ಬಿಡುಗಡೆಗಾಗಿ ಕಾದಿರುವ ಚಿತ್ರಗಳ ಸಂಖ್ಯೆಯೇ ಬರೋಬ್ಬರಿ 134!

ಇದರಿಂದ ಚಿತ್ರರಂಗದಲ್ಲಿರುವ ಕಾರ್ಮಿಕರಿಗೆ, ಸಹಕಲಾವಿದರಿಗೆ, ತಂತ್ರಜ್ಞರಿಗೆ, ಲೈಟ್ ಬಾಯ್ಸ್‌ನಿಂದ ಹಿಡಿದು ಮೇಕಪ್ ಅಸಿಸ್ಟೆಂಟ್‌ಗಳವರೆಗೆ ಎಲ್ಲಿಲ್ಲದ ಬೇಡಿಕೆ. ಇವರೆಲ್ಲರೂ ಇರದಿದ್ದರೆ ಚಿತ್ರೀಕರಣವಾಗಲೀ, ಡಬ್ಬಿಂಗ್, ಸೌಂಡ್ ಎಫೆಕ್ಟ್ ಆಗಲೀ ನಡೆಯುವುದಿಲ್ಲವಾದ್ದರಿಂದ ಅದೆಷ್ಟೋ ಸಿನಿಮಾಗಳನ್ನು ಮುಂದೂಡಲಾಗುತ್ತಿದೆ. ಈ ಎಲ್ಲ ಚಿತ್ರಗಳು ಮುಗಿದು ಬಿಡುಗಡೆಗೆ ಸಜ್ಜಾದ ನಂತರ ಚಿತ್ರಮಂದಿರಗಳಿಗಾಗಿ ಜಗಳಗಳಾದರೂ ಅಚ್ಚರಿಯಿಲ್ಲ, ಏಕೆಂದರೆ ಇವತ್ತು ಚಿತ್ರಮಂದಿರಗಳಿಗೂ ಅಪಾರ ಬೇಡಿಕೆ ಇದೆ.

ಆದರೆ ಬಹಳಷ್ಟು ಹೊಸಬರ ಸಾಮರ್ಥ್ಯ ಎಷ್ಟು, ಅವರ ಚಿತ್ರಗಳು ಹೇಗಿರುತ್ತವೆ ಎಂಬುದರ ಬಗ್ಗೆಯೂ ಅಪಾರ ಕುತೂಹಲವಿದೆ. ಉದಾಹರಣೆಗೆ ಅಪಾರ ಹಣ ಹೊಂದಿರುವ ನಿರ್ಮಾಪಕರೊಬ್ಬರು ಇತರರನ್ನು ಹಾಕಿಕೊಂಡು ಚಿತ್ರ ಮಾಡುವುದಕ್ಕಿಂತ ತನ್ನ ಮಗನನ್ನೇ ಯಾಕೆ ಹೀರೋ ಮಾಡಬಾರದೆಂದು ಚಿಂತಿಸಿದರು. ಅವರ ಮಿತ್ರರೂ ಇದಕ್ಕೆ ಪ್ರೋತ್ಸಾಹಿಸಿದ್ದರಿಂದ "ಬರ್ಲಾ ಮಗನೆ" ಎಂದು ಆತನನ್ನು ಕರೆತಂದು ಕ್ಯಾಮೆರಾ ಮುಂದೆ ಅವನನ್ನು ನಿಲ್ಲಿಸಿದರು. ಆತನಿಗೆ ಟಾ ಅಂದರೆ ಟೂ ಅನ್ನಲಿಕ್ಕೂ ಬಾರದು. ಅಂತಹ ಹುಡುಗ ಇನ್ನೆಂಥ ನಟನೆ ಮಾಡಬಲ್ಲ?

ಅಂದಹಾಗೆ, ಈಗ ತಯಾರಾಗುತ್ತಿರುವ ಹಲವು ಚಿತ್ರಗಳ ಹೆಸರುಗಳು ಹೀಗಿವೆ: ಸೈಕೋ, ಬಾಂಬುಗಳು ಸಾರ್ ಬಾಂಬುಗಳು, ಗ್ಯಾಂಗ್ ಲೀಡರ್, ಸರ್ಕಲ್ ರೌಡಿ, ಸ್ಕೆಚ್, ಕಿಂಗ್ ಫಿಶರ್, ಕರೆಂಟ್, ಮಾತಾಡೆ ಸಾಕು 007. ಈ ಟೈಟಲ್‌ಗಳನ್ನು ನೋಡಿದರೆ ಚಿತ್ರಗಳ ಕಥಾವಸ್ತು ಹೇಗಿರಬಹುದು ಎಂದು ಊಹಿಸಬಹುದು. ಇಂತಹ ಚಿತ್ರಗಳು ಬಂದು ಕನ್ನಡ ಚಿತ್ರೋದ್ಯಮ ಎಷ್ಟರಮಟ್ಟಿಗೆ ಉದ್ಧಾರವಾಗುತ್ತದೆ?!

ಟೈಂಪಾಸ್ ಚಿತ್ರಕ್ಕೆ ಪ್ರಶಸ್ತಿ







ಈ ಬಾರಿ ರಾಜ್ಯ ಚಲನಚಿತ್ರ ಪ್ರಶಸ್ತಿ ಸಮಿತಿಯು ಆಯ್ಕೆ ಮಾಡಿರುವ ಚಿತ್ರಗಳ ಬಗೆಗಾಗಲಿ, ನಟ-ನಟಿ ಕಲಾವಿದರ ಬಗೆಗಾಗಲಿ ತಕರಾರೆತ್ತುವ ಅಂಶಗಳು ಕಂಡುಬರುತ್ತಿಲ್ಲ, ದಾಖಲೆ ಸ್ಥಾಪಿಸಿರುವ 'ಮುಂಗಾರು ಮಳೆ', ಸಖತ್ತಾಗಿ ನಟಿಸಿದ್ದ ವಿಜಯ್, ತಾಂತ್ರಿಕವಾಗಿ ಚೆನ್ನಾಗಿದ್ದ 'ಸೈನೈಡ್', ಮೋಡಿ ಮಾಡಿರುವ ಮನೋಮೂರ್ತಿ, ಕಾವ್ಯವನ್ನು ನೀಡಿದ ಜಯಂತ್ ಕಾಯ್ಕಿಣಿ.... ಎಲ್ಲರ ಆಯ್ಕೆಯೂ ಸರಿಯೇ.


ಒಂದೇ ಒಂದು ಅಸಮಾಧಾನದ ವಿಷಯ ಯಾವುದೆಂದರೆ, ಹೆಚ್ಚಿನ ಪ್ರಶಸ್ತಿಗಳು ಪಕ್ಕಾ ಕಮರ್ಷಿಯಲ್ ಚಿತ್ರಗಳಿಗೆ ಲಭಿಸಿರುವುದು. ಆದರೆ ಇದು ನಾಗತಿಹಳ್ಳಿ ಚಂದ್ರಶೇಖರ್ ನೇತೃತ್ವದ ಸಮಿತಿಯ ತಪ್ಪಲ್ಲ. ಹೀಗೇಕಾಯಿತೆಂದರೆ ಈ ಬಾರಿ ಕಲಾತ್ಮಕ ಚಿತ್ರಗಳಾಗಲಿ, ಬ್ರಿಡ್ಜ್ ಸಿನಿಮಾಗಳಾಗಲಿ ಸಮಿತಿಯ ಮುಂದೆ ಬರಲಿಲ್ಲ, ಬದಲಾಗಿ ಆಯ್ಕೆ ಸಮಿತಿಯ ಮುಂದೆ ಇದ್ದದ್ದು ಎಂತಹ ಚಿತ್ರಗಳೆಂದರೆ ಪ್ರಶಸ್ತಿ ಗಿಟ್ಟಿಸಲೆಂದೇ ಕಡೆ ಕ್ಷಣದಲ್ಲಿ ಅಗ್ಗದ ಬೆಲೆಗೆ ಸುತ್ತಿದ ಒಂದೆರಡು ಸಾಧಾರಣ ಚಿತ್ರಗಳು. ಇಂತಹ ಸಂದರ್ಭದಲ್ಲಿ ಯಾವುದೇ ಸಾಮಾಜಿಕ ಕಾಳಜಿ, ಸಂದೇಶ, ಸ್ಪರ್ಶ ಇರದ 'ಮುಂಗಾರು ಮಳೆ' ಚಿತ್ರಕ್ಕೆ ಪ್ರಶಸ್ತಿ ದಕ್ಕಿದ್ದು ಅಚ್ಚರಿಯಲ್ಲದಿದ್ದರೂ ಸಂತೋಷ ಪಡುವ ಸಂಗತಿಯೇನಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಹಾಳೂರಲ್ಲಿ ಉಳಿದವನೇ ಗೌಡ ಅಂತಾರಲ್ಲ, ಹಾಗಿದೆ 'ಮುಂಗಾರು ಮಳೆ'ಗೆ ದಕ್ಕಿದ ಪ್ರಥಮ ಪ್ರಶಸ್ತಿ.

ಪ್ರಸ್ತುತ ಸ್ಥಿತಿಯನ್ನು ಯಾಕೆ ಹಾಳೂರಿಗೆ ಹೋಲಿಸಿದ್ದೇವೆಂದರೆ, ಇದೇ ಕನ್ನಡ ಚಿತ್ರರಂಗ ಅರವತ್ತು ಮತ್ತು ಎಪ್ಪತ್ತರ ದಶಕದಲ್ಲಿ ತನ್ನ ಹೊಸ ಅಲೆ ಚಿತ್ರಗಳಿಂದಾಗಿ ದೇಶದ ಗಮನ ಸೆಳೆದಿತ್ತು. ಆದರೆ ಈಗ ಇಲ್ಲಿ ಹೊಸ ಚಿಂತನೆಯಾಗಲಿ, ಹೊಸ ಕ್ರಿಯಾಶೀಲತೆಯಾಗಲಿ ಕಂಡುಬರುತ್ತಿಲ್ಲ. ಒಂದೆಡೆ ತಮಿಳು ಮತ್ತು ತೆಲುಗಿನವರ ತಾಂತ್ರಿಕತೆಯೂ ಇಲ್ಲ, ಮತ್ತೊಂದೆಡೆ ನಮ್ಮದೇ ಆಗಿದ್ದ ಸೃಜಶೀಲತೆಯೂ ಇಲ್ಲ ಎಂಬಂತಹ ಪರಿಸ್ಥಿತಿಯಲ್ಲಿ ಕನ್ನಡ ಚಿತ್ರರಂಗ ಸಿಲುಕಿದೆ.

ಇಂತಹ ಸಂದಿಗ್ಧ ಪರಿಸರದಲ್ಲಿ ಅಪ್ಪಟ ಟೈಮ್‌ಪಾಸ್ ಚಿತ್ರವಾದ 'ಮುಂಗಾರು ಮಳೆ' ಗಲ್ಲಾ ಪೆಟ್ಟಿಗೆಯಲ್ಲೂ ಗೆಲ್ಲುತ್ತೆ, ಪ್ರಶಸ್ತಿಗಳನ್ನೂ ಪಡೆಯುತ್ತೆ.....




ಸತ್ಯವಾನನ ಸಾವಿತ್ರಿ ಚೇತರಿಸಿಕೊಂಡಿದ್ದಾಳೆ



ನಟ ರಮೇಶ್ ನಿರ್ದೇಶನದ 'ಸತ್ಯವಾನ್ ಸಾವಿತ್ರಿ' ಆರಂಭದಲ್ಲಿ ಬಾಕ್ಸಾಫೀಸಿನಲ್ಲಿ ತೆವಳುತ್ತಿತ್ತು. ಗಾಂಧಿನಗರದವರೂ ಈ ಚಿತ್ರದ ಬಗ್ಗೆ ಮಿಶ್ರಪ್ರತಿಕ್ರಿಯೆ ನೀಡಿದ್ದರು. ಆದರೆ ರಮೇಶ್ ಅದೃಷ್ಟ ಖುಲಾಯಿಸಿದೆ. ಈಗ 'ಸತ್ಯವಾನ್ ಸಾವಿತ್ರಿ' ಚೇತರಿಸಿಕೊಂಡು ಒಳ್ಳೆಯ ಕಲೆಕ್ಷನ್ ಕಾಣುತ್ತಿದೆ. ಬಿ ಮತ್ತು ಸಿ ಸೆಂಟರ್‌ಗಳಲ್ಲಿ ಈ ಚಿತ್ರಕ್ಕೆ ಅಷ್ಟೇನೂ ಪ್ರತಿಕ್ರಿಯೆ ಇಲ್ಲದಿದ್ದರೂ ಎ ಸೆಂಟರ್‌ಗಳಲ್ಲಿನ ಮಧ್ಯಮವರ್ಗದವರು ರಮೇಶ್ ಕೈ ಹಿಡಿದಿದ್ದಾರೆ. ಇದರಿಂದ ಉತ್ತೇಜನಗೊಂಡಿರುವ ರಮೇಶ್ ಈಗ ತಮ್ಮ ತೃತೀಯ 'ಆ್ಯಕ್ಸಿಡೆಂಟ್' ಚಿತ್ರವನ್ನು ಆರಂಭಿಸುವ ಹುಮ್ಮಸ್ಸಿನಲ್ಲಿದ್ದಾರೆ.

'ಮನ್ಮಥ'ನಿಗಾಗಿ ಪ್ರಾರ್ಥನೆ




ಇಲ್ಲಿಯವರೆಗೂ ಹೊಸಬರ ಪ್ರವಾಹದ ನಡುವೆ ಬಂಡೆಕಲ್ಲಿನಂತೆ ನಿಂತಿರುವ ಜಗ್ಗೇಶ್ ಮುಂದಿನ ವಾರ ಅಗ್ನಿ ಪರೀಕ್ಷೆಯನ್ನು ಎದುರಿಸಲಿದ್ದಾರೆ. ಸೂರ್ಯ ಮತ್ತು ಜ್ಯೋತಿಕ ನಟಿಸಿದ್ದ ಯಶಸ್ವಿ ತಮಿಳು ಚಿತ್ರ 'ಪೇರಳಗನ್' ನ ರೀಮೇಕ್ ಆದ 'ಮನ್ಮಥ' ಬಿಡುಗಡೆಯಾಗಲಿದ್ದು ಜಗ್ಗೇಶ್ ಇದರಲ್ಲಿ ಪಾಸ್ ಆಗಲೆಂದು ಬಹಳಷ್ಟು ನಿರ್ಮಾಪಕರು ಪ್ರಾರ್ಥಿಸುತ್ತಿದ್ದಾರೆ.

ಯಾಕೆಂದರೆ, ಇದಾದನಂತರ ಜಗ್ಗೇಶ್ ನಟಿಸಿರುವ ಬರೋಬ್ಬರಿ ಎಂಟು ಚಿತ್ರಗಳು ಮೆರವಣಿಗೆಯ ರೀತಿಯಲ್ಲಿ ಒಂದರ ಹಿಂದೆ ಮತ್ತೊಂದು ಎಂಬಂತೆ ಬಿಡುಗಡೆಗೆ ಕಾದು ನಿಂತಿವೆ. 'ಮನ್ಮಥ' ಗೆದ್ದರೆ ತಮ್ಮ ಚಿತ್ರಗಳಿಗೆ ಒಂದಿಷ್ಟು ಭವಿಷ್ಯವಿದೆ ಎಂದು ಆ ನಿರ್ಮಾಪಕರೆಲ್ಲ ನಂಬಿರುವುದರಿಂದ ಅವರೆಲ್ಲ ಇದರ ಯಶಸ್ಸಿಗಾಗಿ ಕಾತರರಾಗಿದ್ದಾರೆ.

ಆದರೆ ಯಾರಿಗೆ ಗೊತ್ತು, 'ಮನ್ಮಥ' ಬಯಸುವುದೇ ಒಂದಾದರೆ ಆ ಶಿವ ಇಚ್ಛಿಸುವುದೇ ಮತ್ತೊಂದಾಗಬಹುದು.....

ಬಾಲ್ಕನಿಯಲ್ಲಿ ನಕ್ಸಲರು!



ಆದಿವಾಸಿಗಳ ಪರವಾಗಿ ಕಾಡಿನಲ್ಲಿ ಹೋರಾಟ ಮಾಡುತ್ತಿರುವ ನಕ್ಸಲರೆಲ್ಲಿ? ನಗರದ ಚಿತ್ರಮಂದಿರಗಳಲ್ಲಿನ ಐಶಾರಾಮಿ ಬಾಲ್ಕನಿ ವರ್ಗದವರೆಲ್ಲಿ? ಇವೆರಡರ ನಡುವೆ ಎತ್ತಿಂದೆತ್ತಣ ಸಂಬಂಧ ಎಂದು ಎಲ್ಲರೂ ಹುಬ್ಬೇರಿಸಬಹುದು. ಆದರೆ 'ಓಳು' ಖ್ಯಾತಿಯ ಉಪೇಂದ್ರನ ಜಗತ್ತಿನಲ್ಲಿ ಮಾತ್ರ ಇವೆರಡೂ ಸಮ್ಮಿಲನಗೊಳ್ಳುತ್ತವೆ. ಅದಕ್ಕೆ ಸಾಕ್ಷಿ: ನಕ್ಸಲ್ ಕಥಾವಸ್ತುವನ್ನು ಹೊಂದಿರುವ, ಪತ್ರಕರ್ತ ಪರಮೇಶ್ ಗುಂಡ್ಕಲ್ ನಿರ್ದೇಶಿಸುತ್ತಿರುವ, ಉಪೇಂದ್ರ ನಾಯಕನಾಗಿ ನಟಿಸುತ್ತಿರುವ 'ಬಾಲ್ಕನಿ' ಎಂಬ ಚಿತ್ರ!

ಜಗತ್ತಿನ ವಿಚಿತ್ರಗಳಲ್ಲಿ ಇದೂ ಒಂದು ಎನ್ನಬಹುದೇನೋ!

ಭಯೋತ್ಪಾದನೆ ಹುಚ್ಚುತನವಲ್ಲ, ಬಡತನ, ದೌರ್ಜನ್ಯ, ಸರ್ವಾಧಿಕಾರಿ ವ್ಯವಸ್ಥೆಯಲ್ಲಿ ಅದು ಜನಿಸುತ್ತದೆ - ದೀಪಕ್ ಚೋಪ್ರಾ



ಸುದ್ದಿ ಸುಬ್ಬಣ್ಣನ ಮತ್ತೊಂದು ಗಿಮ್ಮಿಕ್ಕು

'ಸುದ್ದಿ ಸುಬ್ಬಣ್ಣ' ಎಂದೇ ಕುಖ್ಯಾತಿ ಪಡೆದಿರುವ ನಿರ್ದೇಶಕ ಪ್ರೇಮ್ ಈಗ ಮತ್ತೊಂದು ಸುದ್ದಿ ಮಾಡಿದ್ದಾರೆ. ಅದೇನೆಂದರೆ ಅವರ ಇನ್ನೂ ಮುಗಿಯದಿರುವ 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರದಲ್ಲಿ ಅಂಬರೀಷ್ ನಟಿಸುತ್ತಿದ್ದಾರೆಂಬುದು.

ತಮಾಷೆಯ ಸಂಗತಿ ಯಾವುದೆಂದರೆ, ಅಂಬಿ ನಟಿಸುತ್ತಿರುವುದು ಗಾಂಧಿನಗರದಲ್ಲಿ ಸುದ್ದಿಯಾಗದೇ ಹಲವಾರು ನಮೂನೆಯ ರೂಮರ್‌ಗಳಿಗೆ ಕಾರಣವಾಗಿರುವುದು. ಇದಕ್ಕೆ ಕಾರಣವೂ ಇದೆ. ಅದೇನೆಂದರೆ ಈ ಚಿತ್ರದ ಕತೆಯನ್ನು ಸಿದ್ಧಮಾಡಲು ಹಲವಾರು ತಿಂಗಳ ಕಾಲ ತೆಗೆದುಕೊಂಡ ಪ್ರೇಮ್ ಆನಂತರವೇ ಚಿತ್ರೀಕರಣವನ್ನು ಪ್ರಾರಂಭಿಸಿದ್ದು. ಆದರೆ ಈಗ ನೋಡಿದರೆ, ಚಿತ್ರೀಕರಣ ಮುಂದುವರೆಯುತ್ತಿದ್ದಂತೆ ಅದಕ್ಕೆ ಹಲವಾರು ಆಯಾಮಗಳನ್ನು ಪ್ರೇಮ್ ಸೇರಿಸುತ್ತಿರುವಂತಿದೆ. ಇಲ್ಲವಾದರೆ, ತಾನು ಇತ್ತೀಚೆಗೆ ಮದುವೆಯಾಗಿರುವ ರಕ್ಷಿತಾಳಿಗೊಂದು ಪಾತ್ರ, ಈಗ ಅಂಬರೀಷ್‌ಗೊಂದು ಪಾತ್ರ, ಇಂತಹ ಗಿಮ್ಮಿಕ್ಕುಗಳನ್ನು ಪ್ರೇಮ್ ಮಾಡುತ್ತಿರಲಿಲ್ಲ. ಆದರಲ್ಲೂ ಒಂದು ಚಿತ್ರದಲ್ಲಿ ಸತ್ವ ಇಲ್ಲದಿದ್ದಾಗ ಗಿಮ್ಮಿಕ್ಕುಗಳು ಹೆಚ್ಚಾಗುತ್ತವೆ ಎಂಬುದು ಗಾಂಧಿನಗರಕ್ಕೆ ಚೆನ್ನಾಗಿ ಗೊತ್ತಿರುವುದರಿಂದ "ನಾನು ಅಂಬರೀಷ್‌ರವರನ್ನು ನಿರ್ದೇಶಿಸುತ್ತಿದ್ದೇನೆ" ಎಂದು ಪ್ರೇಮ್ ಹೇಳುತ್ತಿರುವುದರ ಬಗ್ಗೆ ಅವರು ಅಚ್ಚರಿಯ ಹುಬ್ಬೇರಿಸುತ್ತಿದ್ದಾರಷ್ಟೆ.

'ಪ್ರೀತಿ ಏಕೆ ಭೂಮಿ ಮೇಲಿದೆ' ಎಂಬ ಪ್ರಶ್ನೆಗೆ ಪ್ರೇಮ್‌ರವರಿಂದ ಉತ್ತರ ಸಿಗುತ್ತೋ ಇಲ್ಲವೋ ಗೊತ್ತಿಲ್ಲ, ಆದರೆ ಅವರ ಗಿಮ್ಮಿಕ್ಕುಗಳಿಗಂತೂ ಕೊನೆಯಿಲ್ಲ ಎಂಬುದು ಈಗ ಗಾಂಧಿನಗರಿಗಳ ತರ್ಕ!



ಅನಾಥರಾದ ದರ್ಶನ್, ಉಪ್ಪಿ

ದರ್ಶನ್ ಮತ್ತು ಉಪೇಂದ್ರ ನಟಿಸಿದ ಇತ್ತೀಚಿನ ಚಿತ್ರಗಳೆಲ್ಲ ತೋಪಾಗಿರುವುದರಿಂದ ಅವರಿಬ್ಬರನ್ನೂ ಒಂದು ರೀತಿಯ ಅನಾಥ ಪ್ರಜ್ಞೆ ಕಾಡುತ್ತಿರಬಹುದು ಎಂದು ಹಲವರು ಅಂದಾಜಿಸಿದ್ದರು. ಅದಕ್ಕೆ ತಕ್ಕಂತೆ ಇವರಿಬ್ಬರೂ ನಟಿಸುತ್ತಿರುವ ಹೊಸ ಚಿತ್ರಕ್ಕೆ ಅದ್ಯಾರೋ ಪುಣ್ಯಾತ್ಮ 'ಅನಾಥರು' ಎಂದು ಹೆಸರಿಟ್ಟಿದ್ದಾರೆ!

ಅಂದಹಾಗೆ ಈ ಚಿತ್ರ ತಮಿಳಿನಲ್ಲಿ ಯಶಸ್ವಿಯಾಗಿದ್ದ 'ಪಿತಾಮಗನ್' ಸಿನಿಮಾದ ರೀಮೇಕ್. ಅದರಲ್ಲಿ ವಿಕ್ರಮ್ ನಟಿಸಿದ್ದ ಪಾತ್ರವನ್ನು ಉಪೇಂದ್ರ ಮತ್ತು ಸೂರ್ಯ ನಿರ್ವಹಿಸಿದ್ದ ಪಾತ್ರವನ್ನು ದರ್ಶನ್ ಮಾಡಲಿದ್ದಾರಂತೆ. ಒಂದೇ ಒಂದು ಡೈಲಾಗ್ ಇಲ್ಲದ ಆ ಪಾತ್ರದಲ್ಲಿ ವಿಕ್ರಮ್ ಎಷ್ಟು ಅದ್ಭುತವಾಗಿ ನಟಿಸಿದ್ದರೆಂದರೆ ಅದಕ್ಕೆ ಅವರಿಗೆ ರಾಷ್ಟ್ರ ಪ್ರಶಸ್ತಿ ಸಿಕ್ಕಿತ್ತು.

ಆದರೆ ವಿಚಿತ್ರ ಏನು ಗೊತ್ತಾ? ಉಪೇಂದ್ರ ತಮ್ಮ ನಟನಾ ಸಾಮರ್ಥ್ಯಕ್ಕಿಂತ ತಮ್ಮ ವಿಚಿತ್ರ ಶೈಲಿಯ ಡೈಲಾಗ್ ಡೆಲಿವರಿಯಿಂದಲೇ ಯಶಸ್ಸು ಕಂಡವರು. ಅಂಥ ಉಪ್ಪಿ ಈಗ ಒಂದೇ ಒಂದು ಡೈಲಾಗ್ ಇಲ್ಲದ ಪಾತ್ರದಲ್ಲಿ ನಟಿಸಿದರೆ ಅದನ್ನು ಅವರ ಅಭಿಮಾನಿಗಳು ಸ್ವೀಕರಿಸುತ್ತಾರಾ? ಈ ಪ್ರಶ್ನೆಯಷ್ಟೇ ಮುಖ್ಯವಾದದ್ದು ಯಾವುದೆಂದರೆ ಅಂತಹ ಪಾತ್ರವನ್ನು ನಿಭಾಯಿಸುವಷ್ಟು ಪ್ರತಿಭೆ ಅವರಲ್ಲಿದೆಯಾ?

ಆದರೆ ಕನ್ನಡ ಚಿತ್ರರಂಗದಲ್ಲಿ ಇಂತಹ ಪ್ರಶ್ನೆಗಳು ಪ್ರಾಮುಖ್ಯತೆ ಕಳೆದುಕೊಂಡು ಅದೆಷ್ಟೋ ದಿನಗಳಾಗಿವೆ, ಬಿಡಿ....



ಫಸ್ಟ್ ಫ್ಯಾಮಿಲಿಯ ನೂರೊಂದು ನೆನಪುಗಳು

ಇವತ್ತು ಕನ್ನಡ ಚಿತ್ರರಂಗದ ಹೆಡ್ ಆಫೀಸು ವಜ್ರೇಶ್ವರಿ ಕಂಬೈನ್ಸ್ ನಿಜ. ಆದರೆ ಇದನ್ನೊಂದು ಉದ್ಯಮವಾಗಿ ಬೆಳೆಸಿದ್ದರಲ್ಲಿ ಹಲವಾರು ಜನರ ಶ್ರಮವಿದೆ. ಅದರಲ್ಲಿ 'ಹೆಡ್ ಮಾಸ್ಟರ್' ಪಂತುಲು ಮತ್ತು ಶಂಕರ್ ಸಿಂಗ್‌ರವರ 'ಫಸ್ಟ್ ಫ್ಯಾಮಿಲಿ'ಯ ಕೊಡುಗೆ ಅಪಾರ. ಸಿಂಗ್‌ರವರು 'ಮಹಾತ್ಮಾ ಪ್ರೊಡಕ್ಷನ್ಸ್' ಅನ್ನು ಸ್ಥಾಪಿಸಿ ತಮ್ಮ ಪತ್ನಿ ಪ್ರತಿಮಾ ದೇವಿಯವರೊಂದಿಗೆ ಹಲವಾರು ಸಿನಿಮಾಗಳನ್ನು ತಯಾರಿಸಿ ಚಿತ್ರರಂಗವನ್ನು ಬೆಳೆಸಿದರು. ಆನಂತರ ಅವರ ಮಗ ರಾಜೇಂದ್ರ ಸಿಂಗ್ ಬಾಬು ಖ್ಯಾತ ನಿರ್ದೇಶಕರಾದರೆ, ಅವರ ಪುತ್ರಿ ವಿಜಯಲಕ್ಷ್ಮಿ ನಟಿಯಾಗಿ, ವಸ್ತ್ರ ವಿನ್ಯಾಸಕಿಯಾಗಿ, ಇತ್ತೀಚೆಗೆ ನಿರ್ದೇಶಕಿಯೂ ಆಗಿದ್ದಾರೆ. ಈಗ ಶಂಕರ್ ಸಿಂಗ್‌ರವರ ಮೊಮ್ಮಗ ಆದಿತ್ಯ ನಟನಾಗಿದ್ದಾನೆ.

ಈಗ ಈ ಫಸ್ಟ್ ಫ್ಯಾಮಿಲಿ ಮತ್ತೊಂದು ಪ್ರಮುಖ ಹೆಜ್ಜೆ ಇಡಲಿದೆ. 'ಮಹಾತ್ಮಾ ಪ್ರೊಡಕ್ಷನ್ಸ್' ರವರ ನೂರನೇ ಚಿತ್ರ 'ನೂರೊಂದು ನೆನಪು' ಸದ್ಯದಲ್ಲೇ ಸೆಟ್ಟೇರಲಿದ್ದು, ಅದರಲ್ಲಿ ಆದಿತ್ಯ ನಟಿಸಲಿದ್ದಾನಲ್ಲದೆ, ಆತನ ತಂದೆ ಮತ್ತು ಶಂಕರ್ ಸಿಂಗ್‌ರ ಪುತ್ರ ರಾಜೇಂದ್ರ ಸಿಂಗ್ ಬಾಬು ನಿರ್ದೇಶಿಸಲಿದ್ದಾರೆ.

ಮೂರನೇ ತಲೆಮಾರಿನ ಈ ಚಿತ್ರ ನೂರೊಂದು ದಿನ ಓಡಲಿ ಎಂದು ಆಶಿಸುತ್ತೇವೆ.



ಮನ್ಮಥನ ಮೇಕಪ್ ... ಪೂಜಾಳ ಗೆಟಪ್ ...

'ಮುಂಗಾರು ಮಳೆ'ಯ ನಾಯಕಿ ಪೂ... ಗಾಂಧಿಗೆ ಈಗ ಕನ್ನಡ ಚಿತ್ರರಂಗದಲ್ಲಿ ತುಂಬಾ ಬೇ... ಮುಂದಿನ ವಾರ ಆಕೆ ಜಗ್ಗೇಶ್‌ರೊಂದಿಗೆ ನಟಿಸಿ... 'ಮನ್ಮಥ' ಬಿಡುಗಡೆಯಾಗಲಿದ್ದು, ರವಿಚಂ... ಜೊತೆಗೂ ಈ ಪಂಜಾಬಿ ಹುಡುಗಿ ಮತ್ತೊ... ಚಿತ್ರದಲ್ಲಿ ನಟಿಸುತ್ತಿದ್ದಾಳೆ. ಅಷ್ಟೇ ಅಲ್ಲ, ಈಗ ಕ... ಎಂಟು ಚಿತ್ರಗಳಲ್ಲಿ ಆಕೆ ಬ್ಯುಸಿ ಆಗಿರುವುದ... ಪ್ರತಿ ದಿನ ಮೂರು ಶಿಫ್ಟ್‌ಗಳಲ್ಲಿ ನಿದ್ದೆ ... ನಟಿಸುವಷ್ಟು ಬೇಡಿಕೆಯಲ್ಲಿದ್ದಾಳೆ.

ವಿಚಿತ್ರ ನೋಡಿ: 'ಮುಂಗಾರು ಮಳೆ' ... ಆದಾಗ ಅದರ ನಿರ್ದೇಶಕ, ಕ್ಯಾಮರಾಮನ್, ಹೀರೋ ... ಹೀಗೆ ಆ ತಂಡದ ಎಲ್ಲ ಪುರುಷರೂ ಮೆರೆದಿ... ಆಗ ಯಾರೂ ಈಕೆಯ ಬಗ್ಗೆ ಯೋಚಿಸಿರಲೇ ... ಆಗ ಪಾಪ ಈಕೆಯೇ "ಚಿತ್ರದಲ್ಲಿ ನನ್ನ ಮೇ... ಚೆನ್ನಾಗಿರಲಿಲ್ಲ" ಎಂದು ದೂರಿ ಸ್ವಲ್ಪ ಗಮನ... ತನ್ನತ್ತ ಸೆಳೆದುಕೊಳ್ಳಲು ಪ್ರಯತ್ನಿಸಿದ್ದಳು. ಅಷ್ಟೇ ... ಆ ಚಿತ್ರದಿಂದಾಗಿ ಹೀರೋ ಗಣೇಶನ ಸಂಭ... ಎಪ್ಪತ್ತೈದು ಲಕ್ಷಕ್ಕೇರಿದ್ದರೂ ಈಕೆಯ ಫೀಜು ಮ... ಲಕ್ಷದ ಆಜುಬಾಜಿನಲ್ಲೇ ಇತ್ತು.

ಈಗ ನೋಡಿದರೆ, ಇದೇ ಆಕೆಯ ಬೇ... ಕಾರಣವಾಗಿರಬಹುದು ಎನಿಸುತ್ತಿದೆ. ಒಂ... ಮೂಢನಂಬಿಕೆಗಳ ಆಗರವಾಗಿರುವ ಗಾಂಧಿನಗ... ಪೂಜಾ ಗಾಂಧಿ ಅದೃಷ್ಟ ತರುವ ನಾಯಕಿ ... ಪುಕಾರು ಪ್ರಾರಂಭವಾಗಿದ್ದು, ಇನ್ನೊಂದು ಕಡೆ ... ತನ್ನ ಸಂಭಾವನೆಯನ್ನು ಗಗನಕ್ಕೇರಿಸದೇ ಇರುವ... ಇವೆರಡು ಕಾರಣಗಳೇ ಅವಳ ಬೇಡಿಕೆ ಹೆಚ್ಚಿಸು... ಮಾಡಿವೆ.

ಅದೆಲ್ಲ ಬದಿಗಿರಲಿ, 'ಮುಂಗಾರು ಮಳೆ'... ಮೇಕಪ್ ಚೆನ್ನಾಗಿರಲಿಲ್ಲ ಅಂದಿದ್ದ ಈ ಹು... 'ಮನ್ಮಥ'ದಲ್ಲಿ ತನಗಿಂತ ಜಗ್ಗೇಶರ ಮೇಕಪ್ ಚೆನ್ನಾ... ಎನ್ನದಿದ್ದರೆ ಸಾಕು ಎನ್ನುತ್ತಿದ್ದಾರೆ ಗಾಂಧಿನ... ಕುಹಕಿಗಳು!



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-